2003

JANUARY "TO" DECEMBER

II
ಬೆಂಗಳೂರು ವಿಜಯ
ಗುರುವಾರ 25 ಡಿಸೆಂಬರ್ 2003

ಉನ್ನತ ಶಿಕ್ಷಣ ಕಾರ್ಯಾಗಾರ

ಬೆಂಗಳೂರು, ಡಿ.24- ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಅಧ್ಯಾಪಕರ ವಿಕಾಸ' ಕಾರ್ಯಕ್ರಮದಡಿ ಉನ್ನತ ಶಿಕ್ಷಣ ಕುರಿತು ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಧಾರವಾಡದ ಕೌಶಲ್ಯ ನಿರ್ವಹಣಾ ಸಂಸ್ಥೆಯ ಮಾನವ ಸಂಪನ್ಮೂಲ ನಿರ್ದೇಶಕ ಡಾ. ಅಶೋಕ್, ಉನ್ನತ ಶಿಕ್ಷಣ ಸ್ಪರ್ಧಾತ್ಮಕವಾಗಿದ್ದು, ಅಧ್ಯಾಪಕರು ವಿಷಯ ಜ್ಞಾನದಲ್ಲಿ ನಿರಂತರ ಅಧ್ಯಯನ ನಡೆಸಬೇಕು. ಆ ಮೂಲಕ ಮೌಲ್ಯಯುತ ಶಿಕ್ಷಣ ನೀಡಿ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ರೂಪಿಸಬೇಕು ಎಂದು ಕರೆ ನೀಡಿದರು.

ಶೇಷಾದ್ರಿಪುರ ಶಿಕ್ಷಣದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯು. ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಪ್ರೊ. ಎಂ. ಪ್ರಕಾಶ್ ಸ್ವಾಗತಿಸಿದರು. ಇತಿಹಾಸ ವಿಭಾಗದ ಡಾ. ವಿಠ್ಠಲ ಡಿ. ಪೋತೆದಾರ ವಂದಿಸಿದರು. ಸಿಬ್ಬಂದಿ ಕಾರ್ಯದರ್ಶಿ ಕೆ. ಪದ್ಮಾವತಿ ನಿರೂಪಿಸಿದರು.

ಪ್ರಜಾವಾಣಿ, ಮಂಗಳವಾರ 16ನೇ ಡಿಸೆಂಬರ್ 2003 ಪುಟ 3



ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರೊ.ಎಂ.ಆರ್.ಹೊಳ್ಳ ಮತ್ತು ಪ್ರೊ.ಕೆ.ಆರ್.ತಿಮ್ಮರಾಜು ಅವರನ್ನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯು ಸೋಮವಾರ ಬೆಂಗಳೂರಿನಲ್ಲಿ ಸನ್ಮಾನಿಸಿತು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ, ಅಧ್ಯಕ್ಷ ಕೆ.ಎಂ.ನಂಜಪ್ಪ ಮತ್ತು ಸಹಾಯಕ ಕಾರ್ಯದರ್ಶಿ ಆರ್ ಕೃಷ್ಣ ಅವರೂ ಚಿತ್ರದಲ್ಲಿದ್ದಾರೆ.

PRAJAVANI DATED 16/12/2003

ರಾಷ್ಟ್ರೀಯ ಭಾವೈಕ್ಯ ಮಕ್ಕಳ ಮೇಳ

ಬೆಂಗಳೂರು, ಡಿ.15- ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು, ಸಂಯಮ, ರಾಷ್ಟ್ರಪ್ರೇಮವನ್ನು ಬೆಳೆಸಿಕೊಳ್ಳಬೇಕು ಎಂದು ಸಂಸದ ಸಿ.ಕೆ.ಜಾಫರ್ ಷರೀಫ್ ಕರೆ ನೀಡಿದರು.

ಭಾರತ ಸೇವಾದಲ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಸಂಯುಕ್ತ ಆಶ್ರಯದಲ್ಲಿ ಭಾನುವಾರ ನಗರದ ಯಲಹಂಕ ಉಪನಗರದಲ್ಲಿ ಏರ್ಪಡಿಸಲಾಗಿದ್ದ ತಾಲ್ಲೂಕು ಮಟ್ಟದ 'ರಾಷ್ಟ್ರೀಯ ಭಾವೈಕ್ಯತಾ ಮಕ್ಕಳ ಮೇಳ'ದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯಯೋಧ ಐ.ಎಸ್.ಎ ರಾಮರಾವ್ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರ ಶಿಕ್ಷಣ ದತ್ತಿ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ, ಸೇವಾದಲದ ಜಿಲ್ಲಾ ಸಮಿತಿ ಅಧ್ಯಕ್ಷ ಎಸ್.ಡಿ.ಸೋಮಶೇಖರ್ ಮುಂತಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಉದ್ಘಾಟನೆ: ಬೆಳಿಗ್ಗೆ ನಡೆದ ಸಮಾರಂಭದಲ್ಲಿ ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ರವಿಕುಮಾರ್ ಧ್ವಜ ಅರಳಿಸಿ ಶಿಬಿರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಯಲಹಂಕ ನಗರಸಭೆ ಅಧ್ಯಕ್ಷ ಮು.ಕೃಷ್ಣಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಆರ್.ನರಸಿಂಹಮೂರ್ತಿ, ಭಾರತ ಸೇವಾದಲದ ಉತ್ತರ ತಾಲ್ಲೂಕು ಸಮಿತಿ ಅಧ್ಯಕ್ಷ ಎಲ್.ಪಿ.ಗುರುರಾಜ್ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
ಮಂಗಳವಾರ 16 ಡಿಸೆಂಬರ್ 2003

ವಿದ್ಯಾರ್ಥಿ ಮೆಚ್ಚಿದ ಶಿಕ್ಷಕ ಪ್ರಶಸ್ತಿಗೆ ಸಲಹೆ

ಪಟ್ಟನಾಯಕನಹಳ್ಳಿ, ಡಿ. 15 - ಸರಕಾರ ಜನಮೆಚ್ಚಿದ ಶಿಕ್ಷಕ ಪ್ರಶಿಸ್ತಿ ಬದಲಾಗಿ ವಿದ್ಯಾರ್ಥಿ ಮೆಚ್ಚಿದ ಶಿಕ್ಷಕ ಪ್ರಶಸ್ತಿ ನೀಡಬೇಕೆಂದು ಶ್ರೀ ನಂಜಾವಧೂತ ಸ್ವಾಮೀಜಿ ಹೇಳಿದ್ದಾರೆ.

ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿಯಲ್ಲಿ ನಡೆದ ಪ್ರೊ. ಟಿ. ಸುಬ್ಬರಾವ್ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಜನಪ್ರತಿನಿಧಿಗಳಿಗೆ ಜನಸೇವೆ ಜನಾರ್ದನ ಸೇವೆಯಾದರೆ, ಶಿಕ್ಷಕರು ವಿದ್ಯಾರ್ಥಿಗಳಿಗೆ ಬೋಧನಾ ಶೈಲಿಯಿಂದ ಅವರನ್ನು ಮೆಚ್ಚಿಸುವುದೇ ಜನಾರ್ದನ ಸೇವೆ ಎಂದು ಹೇಳಿದರು.

ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಶ್ರೀನಿವಾಸಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ದೇಸಿ ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಂಡು ಆದರ್ಶ ವ್ಯಕ್ತಿಗಳಾಗಬೇಕು ಎಂದರು.

ಶಿಕ್ಷಕಿ ಟಿ.ಎಸ್. ಪುಷ್ಪಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಈ ಪ್ರಶಸ್ತಿಯನ್ನು ತಮ್ಮ ಗುರುಗಳಿಗೆ ಅರ್ಪಿಸುವುದಾಗಿ ಹೇಳಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಗೋವಿಂದರಾಜು ಮಾತನಾಡಿದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ದೊರೈರಾಜ್, ಗಾಂಧಿವಾಧಿ ಎಚ್.ಆರ್. ದಾಸೇಗೌಡ ಸತ್ಯವ್ರತ, ಶೇಷಾದ್ರಿಪುರಂ ದತ್ತಿ ಶಿಕ್ಷಣ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಬ್ಲ್ಯೂಪಿ ಕೃಷ್ಣ ಹಾಜರಿದ್ದರು.

ಚಂದ್ರಣ್ಣ ಸ್ವಾಗತಿಸಿ, ನಿರೂಪಿಸಿದರು. ಕಾವ್ಯ ಪ್ರಾರ್ಥಿಸಿದರು. ಲೋಕನಾಥ್ ವಂದಿಸಿದರು.

ಜನವಾಹಿನಿ

ಬುಧವಾರ
ಡಿಸೆಂಬರ್ 3, 2003



ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾದ ಎನ್‌ಸಿಸಿ ದಿನಾಚರಣೆಯನ್ನು ಪೊಲೀಸ್ ಅಧಿಕಾರಿ ಶಂಕರ ಬಿದರಿ ಉದ್ಘಾಟಿಸಿದರು. ಎನ್‌ಸಿಸಿ ಕಮಾಂಡಿಂಗ್ ಅಧಿಕಾರಿ ಮೇಜರ್ ಎ. ಎಸ್. ಆರ್. ನಾಯ್ಡು, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಕಾರ್ಯದರ್ಶಿ ಡಬ್ಲ್ಯೂ. ಕೃಷ್ಣ, ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿ. ಎಲ್. ಎನ್. ಪ್ರಕಾಶ್, ಎನ್‌ಸಿಸಿ ಅಧಿಕಾರಿ ಕಾ. ಮೋಹನ ಕುಮಾರ್ ಹಾಗೂ ಕೆಡೆಟ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉದಯವಾಣಿ


ಶಿಕ್ಷಕರಿಗೆ ಮೌಲ್ಯಾಧಾರಿತ ಶಿಕ್ಷಣ ಕುರಿತ ಸಮಾವೇಶ

ಯಲಹಂಕ

ಮಾನಸಿಕವಾಗಿ ಪರಿವರ್ತನೆ ಹೊಂದಿದ ಶಿಕ್ಷಕನು ವಿದ್ಯಾರ್ಥಿಗಳ ಮನೋಶಕ್ತಿಯನ್ನು ಬೆಳೆಸಿ, ಪರಿಪೂರ್ಣಗೊಳಿಸಿ ಅದರಲ್ಲಿ ಅಧ್ಯಯನದ ಬಗ್ಗೆ ಆಸಕ್ತಿ ಹುಟ್ಟಿಸುವುದೇ ಮೌಲ್ಯಾಧಾರಿತ ಶಿಕ್ಷಣದ ಗುರಿ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಡಿ.ಎಂ. ನಂಜುಂಡಪ್ಪ ಅಭಿಪ್ರಾಯಪಟ್ಟಿದ್ದಾರೆ.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯು ಇತ್ತೀಚೆಗೆ ಯಲಹಂಕ ಉಪನಗರದ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಮೌಲ್ಯಾಧಾರಿತ ಶಿಕ್ಷಣದ ಕುರಿತು ಏರ್ಪಡಿಸಿದ್ದ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

ಹಲವಾರು ಧರ್ಮಗಳಿಗೆ ತವರೂರಾದ ನಮ್ಮ ದೇಶದಲ್ಲಿ ವಿವಿಧ ಪಂಗಡದ ಜನ ತಮ್ಮದೇ ಆದ ರೀತಿಯಲ್ಲಿ ದೇವರನ್ನು ಪೂಜಿಸಿ ಆರಾಧಿಸುತ್ತಾರೆ. ಅವರವರ ಭಾವವೇ ಎಲ್ಲದಕ್ಕೂ ಕಾರಣವಾಗಿದ್ದು, ತಮ್ಮ ಜೀವನದಲ್ಲಿ ತಾಯಿಯಲ್ಲಿಯೇ ಪ್ರತ್ಯಕ್ಷ ದೇವರನ್ನು ಕಂಡುಕೊಂಡ ಬಗೆಯನ್ನು ಅವರು ತಿಳಿಸಿದರು.




ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆ ಯಲಹಂಕದ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಮೌಲ್ಯಾಧಾರಿತ ಶಿಕ್ಷಣದ ಕುರಿತು ಏರ್ಪಡಿಸಿದ್ದ ಸಮಾವೇಶದಲ್ಲಿ ಅರ್ಥಶಾಸ್ತ್ರಜ್ಞ ಪ್ರೊ. ಡಿ. ಎಂ. ನಂಜುಂಡಪ್ಪ ಮಾತನಾಡಿದರು.

ಶಿಕ್ಷಕರು ಮುಖ್ಯವಾಗಿ ವಿಕಸಿತ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ವಿಷಯದ ಹಿಂದು ಮುಂದುಗಳನ್ನು ಸರಿಯಾಗಿ ಅರಿಯದಿದ್ದರೆ ಪೂರ್ವಗ್ರಹ ಬೆಳೆಯುತ್ತದೆ. ಮಿದುಳಿನ ಬಲಗಡೆಯ ಭಾಗ ಸಂಯೋಜನಾತ್ಮಕವಾಗಿದ್ದರೆ ಮಿದುಳಿನ ಎಡಭಾಗ ವಿಶ್ಲೇಷಣಾತ್ಮಕವಾಗಿದೆ. ಜ್ಞಾನದ ವಿಷಯಗಳಲ್ಲಿ ಪ್ರಾವೀಣ್ಯತೆಯನ್ನು ದಯಪಾಲಿಸುತ್ತದೆ ಎಂದು ಅವರು ಹೇಳಿದರು.

ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ ಮಾತನಾಡಿ, ಶಿಕ್ಷಕರು ತಾವು ಮಾಡುವ ಕೆಲಸವನ್ನು ಉತ್ಕೃಷ್ಟ ರೀತಿಯಲ್ಲಿ ಮಾಡಬೇಕು ಮತ್ತು ಯಶಸ್ಸು ಅನ್ನೋದು ಸಾಧಕನ ಸೊತ್ತೇ ಹೊರತು ಸೋಮಾರಿಯದಲ್ಲ ಎಂದರು.

ಸುತ್ತಲಿನ ಜಗತ್ತನ್ನು ನಿರೀಕ್ಷಿಸಿ ಪರಿಣಾಮಕಾರಿಯಾದ ಚಿಂತನೆಗಳು ಬುದ್ಧಿವಂತಿಕೆ ಮತ್ತು ಉನ್ನತ ಚಾರಿತ್ರ್ಯಗಳು ಶಿಕ್ಷಕನಿಗೆ ಅತ್ಯವಶ್ಯಕ. ಮಕ್ಕಳಿಗೆ ಆಜ್ಞೆಯನ್ನು ಮಾಡಿ ವಿಚಾರಗಳನ್ನು ಬಲಾತ್ಕಾರದಿಂದ ಹೇರುವುದಕ್ಕಿಂತಲೂ ಸೂಕ್ಷ್ಮವಾಗಿ ಮಕ್ಕಳ ಮನವೊಲಿಸಿ ವಿಷಯಗಳನ್ನು ಆಕರ್ಷಕ ರೀತಿಯಲ್ಲಿ ಬೋಧಿಸಿ ವಿದ್ಯಾರ್ಥಿಗಳಲ್ಲಿ ಜ್ಞಾನದ ಬಗ್ಗೆ ಆಸಕ್ತಿ ಹುಟ್ಟಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದದ್ದು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಜಯಶ್ರಿ ಜೆ. ಸಿಂಗ್, ಗೌರವ ಸಹಾಯಕ ಕಾರ್ಯದರ್ಶಿಗಳಾದ ಆರ್. ಕೃಷ್ಣ ಆರ್. ಶ್ರೀನಿವಾಸಯ್ಯ, ಗೌರ್ನಿಂಗ್ ಕೌನ್ಸಿಲ್ ಛೇರ್ಮನ್ ವೀರಭದ್ರಯ್ಯ ಮತ್ತು ಕಾರ್ಯನಿರ್ವಾಹಕ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಶೇಷಾದ್ರಿಪುರ ಶಿಕ್ಷಣ ದತ್ತಿಯ ಗ್ರಂಥಪಾಲಕರ ಕಮ್ಮಟದ ಉದ್ಘಾಟನೆಯನ್ನು ಎನ್‌ಎಎಲ್ ಸಂಸ್ಥೆಯ ಮುಖ್ಯ ಗ್ರಂಥಪಾಲಕ ಐ.ಆರ್.ನಾಗಣ್ಣಗೌಡರ್ ಅವರು ನೆರವೇರಿಸುತ್ತಿರುವುದು.

ವಿಜಯ ಕರ್ನಾಟಕ
ಸೋಮವಾರ 17 ನವೆಂಬರ್ 2003

ಪಠ್ಯದಲ್ಲಿ ಗಾಂಧಿ ವಿಚಾರಧಾರೆ

ಬೆಂಗಳೂರು, ನ.16- ಮಹಾತ್ಮ ಗಾಂಧೀಜಿ ಅವರ ವಿಚಾರ ಧಾರೆಗಳನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸುವಂತೆ ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ ಸರಕಾರವನ್ನು ಒತ್ತಾಯಿಸಿದ್ದಾರೆ.

ಯಲಹಂಕ ಉಪನಗರದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಗಾಂಧಿ ವಿಚಾರ-ಪ್ರಚಾರ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಅವರು, ಪ್ರಾಥಮಿಕ ಪಠ್ಯ ಪುಸ್ತಕದಲ್ಲಿ ಅಳವಡಿಸುವುದರಿಂದ ಗಾಂಧೀಜಿ ಅವರ ಉದಾತ್ತ ವ್ಯಕ್ತಿತ್ವ ಹಾಗೂ ತ್ಯಾಗದ ಗುಣಗಳು ಮಕ್ಕಳಿಗೆ ಪರಿಚಯವಾಗುತ್ತವೆ ಎಂದರು.

ಅಮೆರಿಕಾದಲ್ಲಿಯೇ ಗಾಂಧೀಜಿ ಅವರ ವಿಚಾರಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ. ಆದರೆ ನಮ್ಮಲ್ಲಿ ಅವರ ತತ್ವಗಳನ್ನು ಕಡೆಗಣಿಸಲಾಗುತ್ತಿದೆ ಎಂದು ವಿಷಾದಿಸಿದರು.

ಭಾರತೀಯ ವಿದ್ಯಾಭವನದ ನಿರ್ದೇಶಕ ಮತ್ತೂರು ಕೃಷ್ಣಮೂರ್ತಿ ಮಾತನಾಡಿ, ಗಾಂಧೀಜಿ ವ್ಯಕ್ತಿಯಲ್ಲ, ಒಂದು ಶಕ್ತಿ. ಅವರ ಅಹಿಂಸಾ ಧರ್ಮ ಭಾರತೀಯರಿಗೆ ಅಲ್ಲ ವಿಶ್ವಕ್ಕೆ ಮಾದರಿ ಎಂದರು.

ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ. ಎಚ್. ಆರ್. ದಾಸೇಗೌಡ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ ಭಾಗವಹಿಸಿದ್ದರು.

16-11-2003

ಗಾಂಧೀ ವಿಚಾರಧಾರೆ ಮಕ್ಕಳಿಗೆ ತಲುಪಿಸಲು ಶಿಕ್ಷಕರಿಗೆ ಕರೆ

ಬೆಂಗಳೂರು, ನ. 15- ಗಾಂಧೀಜಿಯವರ ವಿಚಾರಧಾರೆಗಳನ್ನು ಇಂದಿನ ಪೀಳಿಗೆಗೆ ಧಾರೆಯೆರೆಯುವ ಮಹತ್ತರ ಜವಾಬ್ದಾರಿಯನ್ನು ಶಿಕ್ಷಕರು ಹೊರಬೇಕು ಎಂದು ಹಿರಿಯ ಗಾಂಧೀವಾದಿ ಹಾಗೂ ಭಾರತೀಯ ವಿದ್ಯಾಭವನದ ನಿರ್ದೇಶಕ ಮತ್ತೂರು ಕೃಷ್ಣಮೂರ್ತಿ ಕಿವಿಮಾತು ಹೇಳಿದ್ದಾರೆ.

ಮಕ್ಕಳ ಭವಿಷ್ಯ ತಂದೆ ತಾಯಿಯರ ಹಾಗೂ ಶಿಕ್ಷಕರ ಕೈಯಲ್ಲಿ ಇರುತ್ತದೆ. ಈ ಎರಡೂ ವರ್ಗಗಳಿಂದಲೇ ಸಮಾಜ ಬೆಳೆಯುತ್ತದೆ. ಆದ್ದರಿಂದ ಈ ಎರಡೂ ವರ್ಗಗಳು ಗಾಂಧೀಜಿಯವರ ವಿಚಾರಧಾರೆಗಳ ಬಗ್ಗೆ ಅಧ್ಯಯನ ನಡೆಸಬೇಕು ಎಂದವರು ತಿಳಿಸಿದರು.

ಶೇಷಾದ್ರಿಪುರ, ಶಿಕ್ಷಣ ದತ್ತಿ ಹಾಗೂ ಗಾಂಧಿಶಾಂತಿ ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ಯಲಹಂಕ ಉಪನಗರದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯ್ದ ಶಾಲಾ ಕಾಲೇಜು ಶಿಕ್ಷಕರಿಗೆ ಹಾಗೂ ಎಂಬಿಎ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಗಾಂಧಿ ವಿಚಾರ-ಪ್ರಚಾರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಗಾಂಧೀಜಿಯವರ ತತ್ವಗಳು ಹಿಂದಿಗಿಂತಲೂ ಈ ದಿನ ಪ್ರಸ್ತುತ ಎನಿಸಿಕೊಂಡಿವೆ. ಅವರ ವಿಚಾರಧಾರೆಗಳನ್ನು ಸಮಾಜದ ಮುಖ್ಯವಾಹಿನಿಗೆ ಕೊಂಡೊಯ್ಯುವ ಕೆಲಸ ಈದಿನ ಆಗಬೇಕಿದೆ. ಇದಕ್ಕಾಗಿ ಶಿಕ್ಷಕರು ಮುಂದಾಗಬೇಕು ಎಂದವರು ಮನವಿ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಮಾತನಾಡಿ, ಗಾಂಧೀಜಿ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ಪಠ್ಯ ಪುಸ್ತಕಗಳಲ್ಲಿ ಅಳವಡಿಸದೇ ಇರುವುದರ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಅಮೆರಿಕದಲ್ಲಿ 10ನೇ ತರಗತಿಯವರೆಗೆ ಮಕ್ಕಳಿಗೆ ಗಾಂಧೀಜಿ ಕುರಿತಂತೆ ಹೇಳಿಕೊಡಲಾಗುತ್ತಿದೆ. ಆ ಪದ್ಧತಿ ಇಲ್ಲಿಯೂ ಜಾರಿಗೆ ಬರಬೇಕು ಎಂದವರು ಒತ್ತಾಯಿಸಿದರು.


ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ. ಎಚ್.ಆರ್. ದಾಸೇಗೌಡ, ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿ ಆರ್. ಕೃಷ್ಣ, ಸಹ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ, ಬೆಂಗಳೂರು

ಉದಯವಾಣಿ

ನವೆಂಬರ್ 8, 2003

ಗ್ರಂಥಪಾಲಕರಿಗೆ ಒಂದು ದಿನದ ಕಮ್ಮಟ



ಶೇಷಾದ್ರಿಪುರಂ

ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಇತ್ತೀಚೆಗೆ ತನ್ನ ಗ್ರಂಥಪಾಲಕರಿಗಾಗಿ 'ಆಟೋಮೇಶನ್ ಆಫ್ ಲೈಬ್ರರಿ' ಕುರಿತಂತೆ ಒಂದು ದಿನದ ಕಮ್ಮಟವನ್ನು ಏರ್ಪಡಿಸಿತ್ತು. ಎನ್‌ಎಎಲ್ ಗ್ರಂಥಾಲಯದ ಮುಖ್ಯ ಗ್ರಂಥಪಾಲಕ ಐ.ಆರ್. ನಾಗಣ್ಣಗೌಡ ಕಾರ್ಯಕ್ರಮ ಉದ್ಘಾಟಿಸಿ, ಗ್ರಂಥಾಲಯಗಳ ಆಧುನೀಕರಣ ಕುರಿತಂತೆ ಮಾಹಿತಿ ನೀಡಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಮುಖ್ಯ ಗ್ರಂಥಪಾಲಕ ಡಾ. ಎಸ್. ವೆಂಕಟೇಶನ್, ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಟಿ.ಡಿ. ಕೆಂಪರಾಜ್ ಕಮ್ಮಟದಲ್ಲಿ ಭಾಗವಹಿಸಿ, ವಿವಿಧ ಸಂಸ್ಥೆಗಳ ಗ್ರಂಥಪಾಲಕರಿಗೆ ಲೈಬ್ರರಿ ಆಟೋಮೇಶನ್ ಕುರಿತ ಸಾಫ್ಟ್‌ವೇರ್ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ಶೇಷಾದ್ರಿಪುರಂ ಶಿಕ್ಷಣದತ್ತಿ ಸಂಸ್ಥೆಗಳ ಗ್ರಂಥಪಾಲಕರೂ ಸೇರಿದಂತೆ ನಗರದ ಪ್ರತಿಷ್ಠಿತ ಹಲವಾರು ಕಾಲೇಜುಗಳ ಸುಮಾರು 50 ಗ್ರಂಥಪಾಲಕರು ಈ ಕಮ್ಮಟದಲ್ಲಿ ಭಾಗವಹಿಸಿದ್ದರು. ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಹಾಗೂ ದತ್ತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ನಗರದ ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಗ್ರಂಥಪಾಲಕರಿಗಾಗಿ ಏರ್ಪಡಿಸಿದ್ದ ಕಮ್ಮಟ ಉದ್ಘಾಟನೆ ಸಮಾರಂಭದಲ್ಲಿ ಎನ್‌ಐಸಿಯ ಮುಖ್ಯ ಗ್ರಂಥಪಾಲಕ ಐ.ಜೆ. ನಾಗಣ್ಣಗೌಡರ್ ಮತ್ತು ದತ್ತಿಯ ಕಾರ್ಯದರ್ಶಿ ಡಬ್ಲ್ಯು. ಪಿ. ಕೃಷ್ಣ ಭಾಗವಹಿಸಿದ್ದರು.



ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆಯು ಮಂಗಳವಾರ ಬೆಂಗಳೂರಿನಲ್ಲಿ ಗ್ರಂಥಪಾಲಕರಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಸಂಸ್ಥೆಯ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಮತ್ತು ಎನ್.ಎ.ಎಲ್ ಸಂಸ್ಥೆಯ ಮುಖ್ಯ ಗ್ರಂಥಪಾಲಕ ಐ.ಆರ್. ನಾಗಣ್ಣಗೌಡರ್ ಸಂವಾದದಲ್ಲಿ ತೊಡಗಿರುವುದು.

ಗ್ರಂಥಪಾಲಕರಿಗೆ ಕಾರ್ಯಾಗಾರ

ಬೆಂಗಳೂರು, ನ. 4– ಗ್ರಂಥಾಲಯಗಳ ನಿರ್ವಹಣೆ, ಆಧುನೀಕರಣ ಕುರಿತು ಗ್ರಂಥಪಾಲಕರಿಗಾಗಿ ನಗರದ ಶೇಷಾದ್ರಿಪುರ ಶಿಕ್ಷಣ ದತ್ತಿ ಇಂದು ಕಾರ್ಯಾಗಾರ ಏರ್ಪಡಿಸಿತ್ತು.


ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆ ಹಾಗೂ ಇತರ ಪ್ರಮುಖ ಸಂಸ್ಥೆಗಳ ಕಾಲೇಜುಗಳ ಗ್ರಂಥಪಾಲಕರು ಸೇರಿದಂತೆ ಸುಮಾರು 50 ಮಂದಿ ಭಾಗವಹಿಸಿದ್ದರು.

ಕಮ್ಮಟ ಉದ್ಘಾಟಿಸಿದ ಎನ್.ಎ.ಎಲ್ ಸಂಸ್ಥೆ ಗ್ರಂಥಾಲಯದ ಮುಖ್ಯ ಗ್ರಂಥಪಾಲಕ ಐ.ಆರ್. ನಾಗಣ್ಣಗೌಡರ್, ಗ್ರಂಥಾಲಯಗಳ ಆಧುನೀಕರಣ ಕುರಿತು ಮಾಹಿತಿ ನೀಡಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯ ಗ್ರಂಥಪಾಲಕ ಡಾ. ಎಸ್. ವೆಂಕಟೇಶನ್, ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಟಿ.ಡಿ. ಕೆಂಪರಾಜ್ ಅವರು ಇದಕ್ಕೆ ಸಂಬಂಧಿಸಿದ ಸಾಫ್ಟ್‌ವೇರ್‌ಗಳನ್ನು ಕುರಿತು ವಿವರಿಸಿದರು.

ಶಿಕ್ಷಣ ದತ್ತಿಯ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಹಾಜರಿದ್ದರು.

ಪುಟ 2 ಸಂಯುಕ್ತ ಕರ್ನಾಟಕ, ಬೆಂಗಳೂರು 5-11-2003



ಬೆಂಗಳೂರಿನಲ್ಲಿ ಮಂಗಳವಾರ ನಡೆದ ಶೇಷಾದ್ರಿಪುರ ಶಿಕ್ಷಣ ದತ್ತಿಯ ಗ್ರಂಥಪಾಲಕರ ಕಮ್ಮಟದ ಉದ್ಘಾಟನಾ ಸಮಾರಂಭದಲ್ಲಿ ಐ.ಆರ್. ನಾಗಣ್ಣಗೌಡರ್, ಡಬ್ಲ್ಯು.ಪಿ. ಕೃಷ್ಣ, ಎಚ್. ವೆಂಕಟೇಶನ್, ಡಾ. ಕೆಂಪರಾಜ್ ಉಪಸ್ಥಿತರಿದ್ದರು.



ಶೇಷಾದ್ರಿಪುರ ಶಿಕ್ಷಣದತ್ತಿ ಆಶ್ರಯದಲ್ಲಿ ಶಾಲಾ ಕಾಲೇಜು ಮುಖ್ಯ ಅಧ್ಯಾಪಕರಿಗೆ ಹಾಗೂ ಪ್ರಾಂಶುಪಾಲರಿಗೆ ಆಯೋಜಿಸಿದ್ದ ಆಡಳಿತ ಸುಧಾರಣೆ ಕುರಿತ ವಿಶೇಷ ತರಬೇತಿ ಶಿಬಿರವನ್ನು ಚುನಾವಣಾ ಆಯೋಗದ ಮುಖ್ಯ ಆಯುಕ್ತ ಸಿ. ಚಿಕ್ಕಣ್ಣ ಉದ್ಘಾಟಿಸಿದರು. ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯ, ಡಬ್ಲ್ಯೂ.ಎಚ್. ಅನಿಲ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ, ಟಿ.ಎನ್. ಮಂಜುಳಾದೇವಿ ಹಾಗೂ ಎ.ಆರ್. ಶ್ರೀನಿವಾಸಯ್ಯ ಹಾಜರಿದ್ದರು.



ಶೇಷಾದ್ರಿಪುರ ಶಿಕ್ಷಣ ದತ್ತಿ ಆಶ್ರಯದಲ್ಲಿ ಶಾಲಾ-ಕಾಲೇಜುಗಳ ಮುಖ್ಯಸ್ಥರ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ಚುನಾವಣಾ ಆಯೋಗದ ಕಮೀಷನರ್ ಸಿ. ಚಿಕ್ಕಣ್ಣ ಅವರು ಗುರುವಾರ ಬೆಂಗಳೂರಿನಲ್ಲಿ ಉದ್ಘಾಟಿಸಿದ ಸಂದರ್ಭದಲ್ಲಿ ಎಸ್.ಆರ್. ಪಂಡಿತಾರಾಧ್ಯ, ಅನಿಲ್‌ಕುಮಾರ್ ಹೆಂಜೇರಪ್ಪ ಉಪಸ್ಥಿತರಿದ್ದರು.

ಉದಯವಾಣಿ

ಶುಕ್ರವಾರ 31 ಅಕ್ಟೋಬರ್ 2003



ಬೆಂಗಳೂರಿನ ಶೇಷಾದ್ರಿಪುರ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಶಾಲಾ ಕಾಲೇಜುಗಳ ಮುಖ್ಯಸ್ಥರ ಕಾರ್ಯಾಗಾರದಲ್ಲಿ ರಾಜ್ಯ ಚುನಾವಣಾ ಆಯುಕ್ತ ಸಿ. ಚಿಕ್ಕಣ್ಣ ಅವರನ್ನು ಡಬ್ಲ್ಯೂ. ಪಿ. ಕೃಷ್ಣ ಸನ್ಮಾನಿಸಿದರು. ಎನ್.ಆರ್. ಪಂಡಿತಾರಾಧ್ಯ, ಅನಿಲ್‌ಕುಮಾರ್, ಹೆಂಜಾರಪ್ಪ ಭಾಗವಹಿಸಿದ್ದರು.

'ಪ್ರಾಮಾಣಿಕತೆ ಪತ್ರಿಕೆಗಳ ಜೀವಾಳ'

ಬೆಂಗಳೂರು, ಅ.29- ಇಂದು ಎಲ್ಲ ಕ್ಷೇತ್ರಗಳಲ್ಲಿ ಇರುವಂತೆ ಮಾಧ್ಯಮ ಕ್ಷೇತ್ರದಲ್ಲೂ ತೀವ್ರ ಸ್ಪರ್ಧೆ ಏರ್ಪಟ್ಟಿದೆ. ಪ್ರಾಮಾಣಿಕತೆ, ಸ್ಪಷ್ಟತೆ, ಸರಳತೆ, ಖಚಿತತೆ ಮತ್ತು ಚಿಂತನೆಗಳಿರುವ ಪತ್ರಿಕೆಗಳು ಮಾತ್ರ ಉಳಿದು ಬೆಳೆಯುತ್ತವೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎನ್. ಅರ್ಜುನದೇವ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಾರ್ತಾ ಪತ್ರಿಕೆ 'ಧ್ವನಿ'ಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಅಂದಿನ ಪತ್ರಿಕೆಗಳಿಗೂ ಇಂದಿನ ಪತ್ರಿಕೆಗಳಿಗೂ ಬಹಳ ವ್ಯತ್ಯಾಸ ಇದೆ. ಜಾಗತೀಕರಣ ಹಾಗೂ ಉದಾರೀಕರಣದ ಹಿನ್ನೆಲೆಯಲ್ಲಿ ಇಂದಿನ ಪತ್ರಿಕೆಗಳಿಗೆ ಗಣಕ ಯಂತ್ರದಂತಹ ತಂತ್ರಜ್ಞಾನ ಅನಿವಾರ್ಯ ಎಂದರು.

ಧ್ವನಿ ಚಿಕ್ಕದಾದರೂ, ಅದು ಮುದ್ರಣಗೊಂಡು ಹಲವರ ಮನದಲ್ಲಿ ಧ್ವನಿಸುವಂತಾಗಲಿ ಎಂದು ಅವರು ಶುಭ ಹಾರೈಸಿದರು. ಅರ್ಜುನದೇವ ಅವರನ್ನು ಸನ್ಮಾನಿಸಲಾಯಿತು.


ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ, ಡಬ್ಲ್ಯೂ.ಪಿ. ಕೃಷ್ಣ ಮಾತನಾಡಿ, ಅನುಮಾನಾಸ್ಪದ ವಿಷಯವನ್ನು ಪ್ರಕಟಿಸದಿರುವುದೇ ಉತ್ತಮ ಎಂಬ ಪತ್ರಿಕೋದ್ಯಮದ ತತ್ವ ಸ್ಮರಿಸಿದರು. ಸಂಜೆ ಕಾಲೇಜು ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರಹೊಮ್ಮಿಸಲು 'ಧ್ವನಿ' ಪತ್ರಿಕೆಯನ್ನು ಹೊರತಂದಿರುವುದು ಶ್ಲಾಘನೀಯ ಎಂದರು.

ಸಂಜೆ ಪದವಿ ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷ ಎಂ.ಎಸ್. ನಟರಾಜ್, ದತ್ತಿಯ ಸಹಾಯಕ ಕಾರ್ಯದರ್ಶಿ ಕೃಷ್ಣ ಉಪಸ್ಥಿತರಿದ್ದರು.

ವಾರ್ತಾ ಪತ್ರಿಕೆಯ ಪ್ರಧಾನ ಸಂಪಾದಕರು ಹಾಗೂ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಸ್.ಜಿ. ಮಣೂರ್ ಸ್ವಾಗತಿಸಿದರು. ಸಂಪಾದಕ ಎನ್.ಎಸ್. ಸತೀಶ್ ಪರಿಚಯಿಸಿದರು. ಚಂದ್ರಿಕಾ ಪುರಾಣಿಕ್ ನಿರೂಪಿಸಿದರು. ಆರ್. ಶ್ರೀನಾಥ್ ವಂದಿಸಿದರು.



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಾರ್ತಾ ಪತ್ರಿಕೆಯಾದ 'ಧ್ವನಿ'ಯನ್ನು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎನ್.ಅರ್ಜುನದೇವ ಬಿಡುಗಡೆ ಮಾಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ, ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷ ಎಂ.ಎಸ್. ನಟರಾಜ್ ಮತ್ತು ಆರ್. ಕೃಷ್ಣ ಹಾಜರಿದ್ದರು.



ಶೇಷಾದ್ರಿಪುರ ಕಾಲೇಜಿನ ಕ್ರಿಕೆಟ್ ತಂಡ ಅಂತರ್ ಕಾಲೇಜು ಕ್ರಿಕೆಟ್ ಪಂದ್ಯಾವಳಿ ಗೆದ್ದುಕೊಂಡಿತು. ಕುಳಿತಿರುವವರು ಎಡದಿಂದ ಬಲಕ್ಕೆ – ಭಾಸ್ಕರ್, ಕ್ರೀಡಾ ಕಾರ್ಯದರ್ಶಿ ಡಾ. ಆರ್. ಧನಪಾಲ್, ಪ್ರಾಂಶುಪಾಲ ಪ್ರೊ. ಎಂ.ಎಂ. ಗುಪ್ತ, ಶೇಷಾದ್ರಿಪುರ ದತ್ತಿ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ, ಉಪ ಪ್ರಾಂಶುಪಾಲ ಪ್ರೊ. ಸಿ.ಎಲ್.ಎನ್. ಪ್ರಕಾಶ್, ದೈಹಿಕ ಶಿಕ್ಷಣ ನಿರ್ದೇಶಕ ವಿನಯ್ ಎಸ್. ಮತ್ತು ತಂಡದ ನಾಯಕ ದೀಪಕ್ ಕುಮಾರ್. ನಿಂತಿರುವವರು, ಮೊದಲ ಸಾಲು – ಸುಧೀರ್ ನಾಡಿಗ್, ಕಾರ್ತಿಕ್ ಪಿ., ಚಂಗಪ್ಪ, ಭರತ್, ಡಿ. ಕುಶಾಲ್, ದರ್ಶನ್ ಆರ್., ಮಧ್ಯದ ಸಾಲು – ವಿನೋದ್ ಪಿ., ಉದಯ್ ಟಿ.ಜಿ., ಅಶ್ವಿನ್ ಎನ್., ಬ್ರಿಜೇಶ್ ಎನ್., ದೇಶವಂತ್ ಗೌಡ, ಭರತ್ ಜಿ.ಎಸ್. ಮತ್ತು ಚೇತನ್ ಎನ್.ಎಸ್.

ಉದಯವಾಣಿ



ಶೇಷಾದ್ರಿಪುರ ಶಿಕ್ಷಣ ದತ್ತಿ ಬೆಂಗಳೂರಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎನ್. ಅರ್ಜುನ ದೇವ ಅವರು ಕಾಲೇಜಿನ ವಾರ್ತಾ ಪತ್ರಿಕೆ 'ಧ್ವನಿ' ಬಿಡುಗಡೆ ಮಾಡಿದರು. ಡಬ್ಲ್ಯೂ.ಪಿ. ಕೃಷ್ಣ, ಪ್ರೊ। ಎಸ್.ಜಿ. ಮನೋರ್ ಮತ್ತಿತ್ತರರು ಉಪಸ್ಥಿತರಿದ್ದರು.

ಪತ್ರಿಕಾ ಚಳವಳಿ ಮೂಲಕ ಕನ್ನಡ ಜಾಗೃತಿ: ಇದಿನಬ್ಬ

ಮಾಗಡಿ, ಅ.8- ಗಡಿನಾಡು ಜಿಲ್ಲಾ ತಾಲೂಕುಗಳಿಗೆ ಕನ್ನಡ ಪತ್ರಿಕೆಗಳು ಪ್ರತಿನಿತ್ಯ ಪತ್ರಿಕಾ ಚಳವಳಿ ಮೂಲಕ ರವಾನೆಯಾಗಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಎಂ. ಇದಿನಬ್ಬ ಹೇಳಿದರು.

ಕಡಿಮೆ ಬೆಲೆಯಲ್ಲಿ ಕನ್ನಡ ಪತ್ರಿಕೆಗಳನ್ನು ಹಂಚುವ ಈ ಪತ್ರಿಕಾ ಚಳವಳಿ ಮೂಲಕ ಗಡಿನಾಡಿನಲ್ಲಿ ಓದುಗರ ಸಂಖ್ಯೆ ಹೆಚ್ಚಾಗಿ, ಕಳೆದುಕೊಂಡಿರುವ ಕಾಸರಗೋಡು, ಆದವಾನಿ, ಹೊಸೂರು ಹಾಗೂ ಇತರ ಗಡಿನಾಡು ಪ್ರದೇಶವನ್ನು ಪುನಃ ಪಡೆದುಕೊಳ್ಳಬಹುದು ಎಂದವರು ಅಭಿಪ್ರಾಯಪಟ್ಟರು.

ಕುರುವಿನಸೆಟ್ಟಿ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಪತ್ರಿಕಾ ಚಳವಳಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕೇರಳದಲ್ಲಿ ಪ್ರತಿಯೊಬ್ಬರೂ ಪತ್ರಿಕೆ ಕೊಂಡು ಓದುವ ರೂಢಿ ಬೆಳೆಸಿಕೊಂಡಿದ್ದಾರೆ. ಆದರೆ ಕನ್ನಡಿಗರಲ್ಲಿ ಈ ಪ್ರವೃತ್ತಿ ಕಡಿಮೆ ಎಂದು ವಿಷಾದಿಸಿದರು.



ಮಾಗಡಿಯಲ್ಲಿ ನಡೆದ ಪತ್ರಿಕಾ ಚಳವಳಿ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಎಂ. ಇದಿನಬ್ಬ, ಪತ್ರಕರ್ತ ಗುಂಡಾ ಭಟ್, ಹೈಕೋರ್ಟ್ ನ್ಯಾಯವಾದಿ ರವಿ ಪ್ರಕಾಶ್ ಭಾಗವಹಿಸಿದ್ದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿ ಸುಮಾರು 15 ವರ್ಷ ಕಳೆದಿದೆ. ಆದರೆ ಅಭಿವೃದ್ಧಿಯಾಗಿದ್ದೇನು ಎಂದು ಪ್ರಶ್ನಿಸಿದ ಇದಿನಬ್ಬ, ಕೆಲವು ಅಂಗಡಿ ಮಾಲೀಕರು ಹಾಗೂ ಸಾಹಿತ್ಯ ಪರಿಷತ್‌ನವರು ಕನ್ನಡ ಪುಸ್ತಕ ಮುದ್ರಿಸಿ ಪೆಟ್ಟಿಗೆಯಲ್ಲಿಟ್ಟಿದ್ದಾರೆಯೇ ಹೊರತು ಕನ್ನಡಿಗನ ಮನೆಗಾಗಲಿ, ಗಡಿನಾಡ ಕನ್ನಡ ಪ್ರೇಮಿಗಳಿಗಾಗಲಿ ತಲುಪಿಸಿಲ್ಲ ಎಂದರು.

ಪ್ರತಿ ಹಳ್ಳಿಗೂ ಪತ್ರಿಕೆ ತಲುಪಬೇಕು. ಆದರೂ ನಾವು ಪ್ರತಿ ಕುಗ್ರಾಮಗಳಿಗೆ ಸೇವಾಭಾವನೆಯಿಂದ ಪತ್ರಿಕೆ ತಲುಪಿಸುತ್ತಿದ್ದೇವೆ. ಕನ್ನಡ ಪತ್ರಿಕೆಗಳ ಅಭಿವೃದ್ಧಿಗೆ ಶ್ರಮವಹಿಸಿ ದುಡಿಯೋಣ ಎಂದು ಹಿರಿಯ ಪತ್ರಕರ್ತ ಗುಂಡಾ ಭಟ್ ತಿಳಿಸಿದರು.

ಹೈಕೋರ್ಟ್ ನ್ಯಾಯವಾದಿ ರವಿ ಪ್ರಕಾಶ್ ಮಾತನಾಡಿ, ಗ್ರಾಮ ಜನರ ಸಮಸ್ಯೆಗಳಿಗೆ ಆಂಗ್ಲ ಪತ್ರಿಕೆಗಳಿಗಿಂತ ಕನ್ನಡ ಪತ್ರಿಕೆಗಳೇ ಹೆಚ್ಚು ಸ್ಪಂದಿಸುತ್ತವೆ ಎಂದರು.

ನಮ್ಮಲ್ಲಿ ಅನೇಕ ಪದವೀಧರರೇ ಪತ್ರಿಕೆ ಓದುತ್ತಿಲ್ಲ. ಶಿಕ್ಷಣವಂತರು ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ನುಡಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಹಾಗೂ ದಳ ಮುಖಂಡ ಎಚ್.ಸಿ. ಬಾಲಕೃಷ್ಣ, ಪತ್ರಿಕಾ ಚಳವಳಿ ಅಧ್ಯಕ್ಷ ಬಸವರಾಜ ದೊಡ್ಡಮನಿ, ಪುರಸಭೆ ಅಧ್ಯಕ್ಷ ರಂಗಹನುಮಯ್ಯ, ಸದಸ್ಯೆ ಕಲ್ಪನಾ ಶಿವಣ್ಣ ಹಾಗೂ ಪಿ.ವಿ. ಸೀತಾರಾಂ ಹಾಜರಿದ್ದರು.

ಪತ್ರಕರ್ತ ಬಿ.ಎಂ. ಮಾರಣ್ಣ ಕಾರ್ಯಕ್ರಮ ನಿರೂಪಿಸಿದರು. ಧನಂಜಯ ಸ್ವಾಗತಿಸಿ, ಹೊಸಪೇಟೆ ಜಯರಾಂ ವಂದಿಸಿದರು.

ಅಕ್ಟೋಬರ್ 9, 2003 ಉದಯವಾಣಿ

ಶೇಷಾದ್ರಿಪುರಂ ಕಾಲೇಜಿಗೆ ಪ್ರಶಸ್ತಿ



ಬೆಂಗಳೂರು


'ಪಂದ್ಯಶ್ರೇಷ್ಠ', 'ಸರಣಿ ಶ್ರೇಷ್ಠ' ಗೌರವಕ್ಕೆ ಪಾತ್ರರಾದ ನಾಯಕ ದೀಪಕ್ ಕುಮಾರ್ ಅವರ ಭರ್ಜರಿ ಪ್ರದರ್ಶನದ ನೆರವಿನಿಂದ ಶೇಷಾದ್ರಿಪುರಂ ಕಾಲೇಜು ತಂಡ ಜಯನಗರ ನ್ಯಾಷನಲ್ ಕಾಲೇಜು ತಂಡವನ್ನು ಸೋಲಿಸಿ ಅಂತರ ಕಾಲೇಜು ಕ್ರಿಕೆಟ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಬಿಎಚ್‌ಎಸ್ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶೇಷಾದ್ರಿಪುರಂ ಕಾಲೇಜು ತಂಡ 409 ಓವರ್‌ಗಳಲ್ಲಿ 9 ವಿಕೆಟ್‌ಗೆ 253 ರನ್ ಮಾಡಿತು. ಪ್ರತಿಯಾಗಿ ನ್ಯಾಷನಲ್ ಕಾಲೇಜು ತಂಡ 38 ಓವರ್‌ಗಳಲ್ಲಿ 176 ರನ್‌ಗೆ ಕುಸಿದು 77 ರನ್ ಅಂತರದಿಂದ ಭಾರಿ ಗೆಲುವು ಸಾಧಿಸಿ, ಪ್ರಶಸ್ತಿ ಗೆದ್ದುಕೊಂಡಿತು.

ತಂಡ: ಕುಳಿತಿರುವವರು- ಭಾಸ್ಕರ್, ಡಾ| ಆರ್. ಧನಪಾಲ್ (ಕ್ರೀಡಾ ಕಾರ್ಯದರ್ಶಿ), ಪ್ರೊ| ಎಂ.ಎಂ. ಗುಪ್ತ (ಪ್ರಾಂಶುಪಾಲರು), ಡಬ್ಲ್ಯು.ಪಿ. ಕೃಷ್ಣ (ಗೌ| ಕಾರ್ಯದರ್ಶಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ), ಪ್ರೊ| ಸಿ.ಎಲ್.ಎನ್. ಪ್ರಕಾಶ್ (ಉಪ ಪ್ರಾಂಶುಪಾಲರು), ವಿನಯ್ ಎಸ್. (ದೈಹಿಕ ಶಿಕ್ಷಣ ನಿರ್ದೇಶಕರು), ದೀಪಕ್ ಕುಮಾರ್ (ನಾಯಕ). ನಿಂತಿರುವವರು- (ಮೊದಲ ಸಾಲು) ಸುಧೀರ್ ನಾಡಿಗ್, ಕಾರ್ತಿಕ್ ಪಿ., ಚಂಗಪ್ಪ, ಭರತ್ ಡಿ., ಕುಶಾಲ್ ಎನ್., ದರ್ಶನ್ ಆರ್., (ಮಧ್ಯದ ಸಾಲು)- ವಿನೋದ್ ಪಿ., ಉದಯ ಟಿ.ಜಿ., ಅಶ್ವಿನ್ ಎನ್., ಬ್ರಿಜೇಶ್ ಎನ್., ದೇಶವಂತಗೌಡ., ಭರತ್ ಜಿ.ಎಸ್., ಚೇತನ್ ಎನ್.ಎಸ್.

ಜನವಾಹಿನಿ

ಮಂಗಳವಾರ
ಅಕ್ಟೋಬರ್ 7, 2003



ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗೆ ಸಚಿವ ಕಾಗೋಡು ತಿಮ್ಮಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಸಚಿವೆ ನಫೀಜಾ ಫಜಲ್ ಮತ್ತಿತರರು ಉಪಸ್ಥಿತರಿದ್ದರು.



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯು 2002ನೇ ಸಾಲಿನಲ್ಲಿ ಅತಿ ಹೆಚ್ಚು ರಕ್ತ ಶೇಖರಿಸಿದ ವಿದ್ಯಾ ಸಂಸ್ಥೆ ಎಂಬ ರಾಜ್ಯ ಪ್ರಶಸ್ತಿ ಪಡೆದಿದೆ. ಈ ಪ್ರಶಸ್ತಿಯನ್ನು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನದ ಸಂದರ್ಭದಲ್ಲಿ ಸಚಿವೆ ನಫೀಸಾ ಫಜಲ್ ಅವರು ಸಂಸ್ಥೆಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ, ಸಹ ಕಾರ್ಯದರ್ಶಿ ಆರ್.ಕೃಷ್ಣ, ಉಪ ಪ್ರಾಂಶುಪಾಲ ಡಾ.ಪ್ರಕಾಶ್ ಮತ್ತು ಪ್ರಾಂಶುಪಾಲ ಪ್ರೊ.ಎಸ್.ಜಿ.ಮಣೂರ್ ಹಾಜರಿದ್ದರು.



ಅತಿ ಹೆಚ್ಚಿನ ಸ್ವಯಂ ಪ್ರೇರಿತ ರಕ್ತದಾನ ಶೇಖರಣೆ ಮಾಡಿದ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗೆ ಆರೋಗ್ಯ ಸಚಿವ ಕಾಗೋಡು ತಿಮ್ಮಪ್ಪ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವೆ ನಫೀಜಾ ಫಜಲ್ ಅವರು ಪ್ರಶಸ್ತಿ ನೀಡಿದರು. ಪ್ರಶಸ್ತಿಯನ್ನು ಶಿಕ್ಷಣ ಸಂಸ್ಥೆಯ ಪರವಾಗಿ ಡಬ್ಲ್ಯು.ಪಿ. ಕೃಷ್ಣ ಡಾ. ಸಿ.ಎಲ್.ಎನ್. ಪ್ರಕಾಶ್ ಹಾಗೂ ಪ್ರೊ. ಎಸ್.ಜಿ. ಮಣ್ಣೂರ್ ಸ್ವೀಕರಿಸಿದರು.

ಉದಯವಾಣಿ 6/12/2003

ಮಹಿಳೆ ಪುರುಷರಿಗೆ ಪ್ರತಿಸ್ಪರ್ಧಿಯಲ್ಲ- ಡಾ.ಮರಿಯಮ್ಮ



ಶೇಷಾದ್ರಿಪುರ

'ಮಹಿಳೆ ಎಂದೂ ಪುರುಷನನ್ನು ಪ್ರತಿಸ್ಪರ್ಧಿ ಎಂದು ಭಾವಿಸಬಾರದು. ಆಕೆ ತನ್ನಲ್ಲಿರುವ ಶಕ್ತಿಯನ್ನು ಜಾಗೃತಗೊಳಿಸಲು ಹೋರಾಡಬೇಕು' ಎಂದು 'ನ್ಯಾಕ್'ನ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ. ಮರಿಯಮ್ಮ ಎ ವರ್ಗೀಸ್ ಹೇಳಿದ್ದಾರೆ.

ಅವರು ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ 'ಚೇತನಾ- ಮಹಿಳಾ ವಿಕಸನ ವೇದಿಕೆ'ಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ತಮ್ಮ ಜೀವನದ ಸುದೀರ್ಘ ಅನುಭವವನ್ನು ಉದಾಹರಿಸುತ್ತಾ ಅವರು ವಿದ್ಯಾರ್ಥಿನಿಯರನ್ನೂ ಹುರಿದುಂಬಿಸಿದರು. ಇಂದು ಹಚ್ಚಿರುವ ಈ ದೀಪ ಮುಂದೆಂದೂ ಆರದೆ ಅದು ನಿಮ್ಮೆಲ್ಲರ ಬಾಳನ್ನು ಬೆಳಗಲಿ ಎಂದರು. ಮಹಿಳಾ ಮೀಸಲಾತಿಗೆ ಚಿಂತಿಸದೆ ಸಾಮರ್ಥ್ಯ ವೃದ್ಧಿಯ ಕಡೆಗೆ ಗಮನ ಕೊಡಿ ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದ ವಿಶೇಷ ಆಹ್ವಾನಿತರೂ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಡಬ್ಲ್ಯು.ಪಿ. ಕೃಷ್ಣ ಅವರು ಮಾತನಾಡಿ 'ಸ್ತ್ರೀಯು ಸಮಾನತೆಗೆ ಹೋರಾಡದೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಲು ಚಿಂತಿಸಬೇಕು' ಎಂಬ ವಿವೇಕಾನಂದರ ಮಾತುಗಳನ್ನು ಪುನರುಚ್ಚರಿಸಿದರು. ಏಳು ದಶಕಗಳ ಹಿಂದೆ ಈ ಶಿಕ್ಷಣ ಸಂಸ್ಥೆ ಪ್ರಾರಂಭವಾದದ್ದು ಸ್ತ್ರೀ ಸಮಾಜದಿಂದ ಎಂಬ ವಿಚಾರವನ್ನು ಅವರು ಸ್ಮರಿಸಿದರು.

ಶೇಷಾದ್ರಿಪುರಂ ಸಂಜೆ ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಎಂ.ಎಸ್. ನಟರಾಜ್ ಮಾತನಾಡಿ 'ಮಾಧ್ಯಮಗಳು ಇಂದಿನ ವಿದ್ಯಾರ್ಥಿಗಳನ್ನು ಅಡ್ಡ ದಾರಿಗೆಳೆಯುತ್ತಿವೆ. ಮಾಧ್ಯಮ ಚಿತ್ರಿಸುವ ಜೀವನಕ್ಕೂ ವಾಸ್ತವ ಬದುಕಿಗೂ ಬಹಳ ವ್ಯತ್ಯಾಸವಿದೆ. ಇಂತಹ ಸಂದರ್ಭದಲ್ಲಿ ಈ ರೀತಿಯ ವೇದಿಕೆಗಳು ಉತ್ತಮವಾಗಿ ಮಾರ್ಗ ದರ್ಶನ ಮಾಡಬಲ್ಲವು' ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳೂ ಸಮಾರಂಭದ ಅಧ್ಯಕ್ಷತೆ ವಹಿಸಿದ ಸರೋಜ ನಂಜಪ್ಪನವರು ಎಲ್ಲ ವಯಸ್ಸಿನಲ್ಲೂ ಮಹಿಳೆಯರು ಉನ್ನತಿಗಾಗಿ ಶ್ರಮಿಸಲು ಅವಕಾಶವಿದೆ ಎಂಬ ಮಾತುಗಳೊಂದಿಗೆ ವಿದ್ಯಾರ್ಥಿನಿಯರಿಗೆ ಶುಭ ಕೋರಿದರು. ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಸ್.ಜಿ. ಮಣೂರ್ ಸ್ವಾಗತಿಸಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗೆ ಪ್ರಶಸ್ತಿ



ಶೇಷಾದ್ರಿಪುರಂ

ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ 2002ನೇ ಸಾಲಿನಲ್ಲಿ ಅತಿ ಹೆಚ್ಚಿನ ಸ್ವಯಂಪ್ರೇರಿತ ರಕ್ತದಾನ ಶೇಖರಣೆ ಮಾಡಿದ ವಿದ್ಯಾಸಂಸ್ಥೆ ಎಂದು ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದಿದೆ.

ಪ್ರಶಸ್ತಿಯನ್ನು ಭಾರತೀಯ ವೈದ್ಯಕೀಯ ಸಚಿವೆ ನಫೀಸ ಫಜಲ್ ಇತ್ತೀಚೆಗೆ ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆದ ರಾಜ್ಯಮಟ್ಟದ ಸಮಾರಂಭವೊಂದರಲ್ಲಿ ಪ್ರದಾನ ಮಾಡಿದರು. ಸಂಸ್ಥೆಯ ಪರವಾಗಿ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಸಹ ಕಾರ್ಯದರ್ಶಿ ಆರ್. ಕೃಷ್ಣ ಶೇಷಾದ್ರಿಪುರಂ ಕಾಲೇಜಿನ ಉಪ ಪ್ರಾಂಶುಪಾಲ ಡಾ. ಸಿ.ಎಲ್.ಎನ್. ಪ್ರಕಾಶ್ ಮತ್ತು ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಸ್.ಜಿ. ಮಣೂರ್ ಅವರು ಪ್ರಶಸ್ತಿ ಸ್ವೀಕರಿಸಿದರು.

ಸಂಸ್ಥೆ ತನ್ನ ಮೂರು ಪದವಿ ಕಾಲೇಜುಗಳ ಮೂಲಕ 2002ನೇ ಸಾಲಿನಲ್ಲಿ ಸಾವಿರಕ್ಕೂ ಹೆಚ್ಚಿನ ಯೂನಿಟ್ ರಕ್ತ ಶೇಖರಿಸಿ ಈ ಪ್ರಶಸ್ತಿಗೆ ಪಾತ್ರವಾಗಿದೆ ಎಂದು ಸಂಸ್ಥೆಯ ಪ್ರಕಟಣೆ ಹೇಳಿದೆ.

ಬೆಂಗಳೂರು ವಿಜಯ
ಮಂಗಳವಾರ 30 ಸೆಪ್ಟೆಂಬರ್ 2003

‘ಮಹಿಳೆ ಪುರುಷನಿಗೆ ಎಂದಿಗೂ ಪ್ರತಿಸ್ಪರ್ಧಿಯಲ್ಲ’

ಬೆಂಗಳೂರು, ಸೆ.29- ಮಹಿಳೆ ಪುರುಷನ ಪ್ರತಿಸ್ಪರ್ಧಿ ಎಂದು ಭಾವಿಸಬಾರದು. ಬದಲಾಗಿ ಆಕೆಯು ತನ್ನಲ್ಲಿರುವ ಶಕ್ತಿಯನ್ನು ಜಾಗೃತಗೊಳಿಸಲು ಹೋರಾಡಬೇಕು ಎಂದು ನ್ಯಾಕ್‌ನ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ. ಮರಿಯಮ್ಮ ಎ. ವರ್ಗಿಸ್ ಕರೆ ನೀಡಿದ್ದಾರೆ.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ 'ಚೇತನಾ' ಮಹಿಳಾ ವಿಕಸನ ವೇದಿಕೆಯನ್ನು ಇತ್ತೀಚೆಗೆ ಉದ್ಘಾಟಿಸಿ ಮಾತನಾಡಿದರು.

ತಮ್ಮ ಜೀವನದ ಸುದೀರ್ಘ ಅನುಭವ ಹಂಚಿಕೊಂಡ ಅವರು, ಇಂದು ಹಚ್ಚಿರುವ ಈ ದೀಪ ಮುಂದೆಂದೂ ಆರದೆ, ನಿಮ್ಮೆಲ್ಲರ ಬಾಳು ಬೆಳಗುವಂತಾಗಲಿ ಎಂದು ಹಾರೈಸಿದರು. ಮಹಿಳೆಯರು ಮಹಿಳಾ ಮೀಸಲಾತಿ ಬಗ್ಗೆ ಚಿಂತಿಸದೆ ಸಾಮರ್ಥ್ಯ ವೃದ್ಧಿಯ ಕಡೆ ಗಮನ ಕೊಡಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಮಾತನಾಡಿ, ಸ್ತ್ರೀ ಸಮಾನತೆಗೆ ಹೋರಾಡದೆ ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಅವಕಾಶಗಳ ಕುರಿತು ಚಿಂತಿಸಬೇಕು. ಏಳು ದಶಕಗಳ ಹಿಂದೆ ಈ ಶಿಕ್ಷಣ ಸಂಸ್ಥೆ ಸ್ತ್ರೀ ಸಮಾಜದಿಂದ ಪ್ರಾರಂಭವಾಗಿತ್ತು ಎಂದು ಹೇಳಿದರು.

ಕಾಲೇಜಿನ ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಎಂ.ಎಸ್. ನಟರಾಜ್, ಮಾಧ್ಯಮಗಳು ಇಂದಿನ ವಿದ್ಯಾರ್ಥಿಗಳನ್ನು ಅಡ್ಡ ದಾರಿಗೆ ಎಳೆಯುತ್ತಿವೆ. ಮಾಧ್ಯಮ ಚಿತ್ರಿಸುವ ಜೀವನಕ್ಕೂ, ವಾಸ್ತವ ಬದುಕಿಗೂ ಬಹಳ ವ್ಯತ್ಯಾಸವಿದೆ. ಇಂತಹ ಪರಿಸ್ಥಿತಿಯಲ್ಲಿ ಈ ರೀತಿಯ ವೇದಿಕೆಗಳು ಉತ್ತಮ ಮಾರ್ಗದರ್ಶನ ನೀಡಲು ನೆರವಾಗಲಿದೆ ಎಂದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಂಸ್ಥೆಯ ಸರೋಜ ನಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾಲೇಜು ಪ್ರಾಚಾರ್ಯ ಪ್ರೊ. ಎಸ್.ಜಿ. ಮಣೂರ್ ಸ್ವಾಗತಿಸಿದರು.



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ 'ಚೇತನಾ' ಮಹಿಳಾ ವಿಕಸನ ವೇದಿಕೆಗೆ ನ್ಯಾಕ್‌ನ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ. ಮರಿಯಮ್ಮ ಎ. ವರ್ಗೀಸ್ ಚಾಲನೆ ನೀಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ, ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಎಂ.ಎಸ್. ನಟರಾಜ್, ದತ್ತಿಯ ಸಂಸ್ಥೆಯ ಸರೋಜ ನಂಜಪ್ಪ ಹಾಜರಿದ್ದರು.



ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಚೇತನ' - ಮಹಿಳಾ ವಿಕಸನ ವೇದಿಕೆಯ ಉದ್ಘಾಟನಾ ಸಮಾರಂಭವನ್ನು ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಮರಿಯಮ್ಮ ಎ. ವರ್ಗೀಸ್ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ಎಸ್. ಜಿ. ಮಣೂರ್, ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ. ಪಿ. ಕೃಷ್ಣ, ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷ ಎಂ. ಎಸ್. ನಟರಾಜ್, ದತ್ತಿಯ ಧರ್ಮದರ್ಶಿ ಸರೋಜ ನಂಜಪ್ಪ ಉಪಸ್ಥಿತರಿದ್ದರು.

ಮಹಿಳೆ ಪುರುಷರಿಗೆ ಪ್ರತಿಸ್ಪರ್ಧಿಯಲ್ಲ - ಡಾ. ಮರಿಯಮ್ಮ ಎ. ವರ್ಗೀಸ್

ಬೆಂಗಳೂರು, ಸೆ. ೨೮ - ಮಹಿಳೆಯು ಎಂದೂ ಪುರುಷನನ್ನು ಪ್ರತಿಸ್ಪರ್ಧಿ ಎಂದು ಭಾವಿಸಬಾರದು. ಆಕೆಯು ತನ್ನಲ್ಲಿರುವ ಶಕ್ತಿಯನ್ನು ಜಾಗೃತಗೊಳಿಸಲು ಹೋರಾಡಬೇಕು ಎಂದು ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಹಾಗೂ 'ನ್ಯಾಕ್' ಕಛೇರಿಯ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ. ಮರಿಯಮ್ಮ ಎ. ವರ್ಗೀಸ್ ಹೇಳಿದರು.

ಅವರು ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಹಮ್ಮಿಕೊಂಡಿದ್ದ 'ಚೇತನಾ' ಮಹಿಳಾ ವಿಕಸನ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ತಮ್ಮ ಜೀವನದ ಸುದೀರ್ಘ ಅನುಭವವನ್ನು ಉದಾಹರಿಸುತ್ತ ವಿದ್ಯಾರ್ಥಿನಿಯರನ್ನು ಹುರಿದುಂಬಿಸಿದ ಅವರು ಇಂದು ಹಚ್ಚಿರುವ ಈ ದೀಪ ಮುಂದೆಂದೂ ಆರದೆ ಅದು ನಿಮ್ಮೆಲ್ಲರ ಬಾಳನ್ನು ಬೆಳಗುವಂತಾಗಲಿ ಎಂದು ಭಾವುಕರಾಗಿ ನುಡಿದರು.

ಮಹಿಳಾ ಮೀಸಲಾತಿಗೆ ಚಿಂತಿಸದೆ ಸಾಮರ್ಥ್ಯ ವೃದ್ಧಿಯ ಕಡೆ ಗಮನ ಕೊಡಿ ಎಂದರು.

ಕಾರ್ಯಕ್ರಮದ ವಿಶೇಷ ಆಹ್ವಾನಿತರೂ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಬ್ಲ್ಯೂ. ಪಿ. ಕೃಷ್ಣ ಅವರು ಮಾತನಾಡಿ, ಸ್ತ್ರೀಯು ಸಮಾನತೆಗೆ ಹೋರಾಡದೆ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವತ್ತ ಚಿಂತಿಸಬೇಕು ಎಂಬ ವಿವೇಕಾನಂದ ಮಾತುಗಳನ್ನು ಪುನರುಚ್ಚರಿಸಿ, ೭ ದಶಕಗಳ ಹಿಂದೆ ಈ ಶಿಕ್ಷಣ ಸಂಸ್ಥೆ ಪ್ರಾರಂಭವಾದದ್ದು ಸ್ತ್ರೀ ಸಮಾಜದಿಂದ ಎಂಬ ವಿಚಾರವನ್ನು ನೆನಪಿಸಿಕೊಂಡರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಎಂ. ಎಸ್. ನಟರಾಜ್‌ರವರು ಮಾತನಾಡಿ, ಮಾಧ್ಯಮಗಳು ಇಂದಿನ ವಿದ್ಯಾರ್ಥಿಗಳನ್ನು ದಾರಿತಪ್ಪಿಸುತ್ತಿವೆ. ಮಾಧ್ಯಮ ಚಿತ್ರಿಸುವ ಜೀವನಕ್ಕೂ ವಾಸ್ತವ ಬದುಕಿಗೂ ಬಹಳ ವ್ಯತ್ಯಾಸವಿದೆ. ಇಂತಹ ಸಂದರ್ಭದಲ್ಲಿ ಈ ರೀತಿಯ ವೇದಿಕೆಗಳು ಉತ್ತಮವಾಗಿ ಮಾರ್ಗದರ್ಶನ ಮಾಡಬಲ್ಲವು ಎಂದು ಹೇಳಿ ವಿದ್ಯಾರ್ಥಿನಿಯರಿಗೆ ಶುಭ ಕೋರಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಧರ್ಮದರ್ಶಿಗಳೂ ಹಾಗೂ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸರೋಜ ನಂಜಪ್ಪನವರು ಎಲ್ಲಾ ವಯಸ್ಸಿನಲ್ಲೂ ಮಹಿಳೆಯರು ಉನ್ನತಿಗಾಗಿ ಶ್ರಮಿಸಲು ಅವಕಾಶವಿದೆ ಎಂಬ ತಮ್ಮ ಅನುಭವದ ಮಾತುಗಳೊಂದಿಗೆ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು.

ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಸ್. ಜಿ. ಮಣೂರ್‌ರವರು ಸಭಿಕರನ್ನು ಸ್ವಾಗತಿಸಿದರು.

ಕನ್ನಡಪ್ರಭ, ಸೋಮವಾರ, 29 ಸೆಪ್ಟೆಂಬರ್ 2003



ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಹಮ್ಮಿಕೊಂಡಿದ್ದ 'ಚೇತನಾ-ಮಹಿಳಾ ವಿಕಸನ ವೇದಿಕೆ'ಯನ್ನು ನ್ಯಾಕ್ ಸಮಿತಿಯ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ|ಮರಿಯಮ್ಮ ಎ.ವರ್ಗೀಸ್ ಉದ್ಘಾಟಿಸುತ್ತಿರುವುದು. ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ, ಕಾಲೇಜಿನ ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಎಂ.ಎಸ್.ನಟರಾಜ್ ಮತ್ತಿತರರು ಇದ್ದಾರೆ.



ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಚೇತನ' - ಮಹಿಳಾ ವಿಕಸನ ವೇದಿಕೆಯ ಉದ್ಘಾಟನಾ ಸಮಾರಂಭವನ್ನು ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ.ಮರಿಯಮ್ಮ ಎ. ವರ್ಗೀಸ್ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊ.ಎಸ್.ಜಿ. ಮಣೂರ್, ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ ಕೃಷ್ಣ, ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷ ಎಂ.ಎಸ್. ನಟರಾಜ್, ದತ್ತಿಯ ಧರ್ಮದರ್ಶಿ ಸರೋಜ ನಂಜಪ್ಪ ಉಪಸ್ಥಿತರಿದ್ದರು.

ಮಹಿಳೆ ಪುರುಷರಿಗೆ ಪ್ರತಿಸ್ಪರ್ಧಿಯಲ್ಲ - ಡಾ. ಮರಿಯಮ್ಮ ಎ. ವರ್ಗೀಸ್

ಬೆಂಗಳೂರು, ಸೆ.೨೯- ಮಹಿಳೆಯು ಎಂದೂ ಪುರುಷನನ್ನು ಪ್ರತಿಸ್ಪರ್ಧಿ ಎಂದು ಭಾವಿಸಬಾರದು, ಆಕೆಯು ತನ್ನಲ್ಲಿರುವ ಶಕ್ತಿಯನ್ನು ಜಾಗೃತಗೊಳಿಸಲು ಹೋರಾಡಬೇಕು ಎಂದು ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಹಾಗೂ "ನ್ಯಾಕ್" ಕಛೇರಿಯ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ. ಮರಿಯಮ್ಮ ಎ. ವರ್ಗೀಸ್ ಹೇಳಿದರು.

ಅವರು ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಹಮ್ಮಿಕೊಂಡಿದ್ದ "ಚೇತನಾ" ಮಹಿಳಾ ವಿಕಸನ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ತಮ್ಮ ಜೀವನದ ಸುದೀರ್ಘ ಅನುಭವವನ್ನು ಉದಾಹರಿಸುತ್ತ ವಿದ್ಯಾರ್ಥಿನಿಯರನ್ನು ಹುರಿದುಂಬಿಸಿದ ಅವರು ಇಂದು ಹಚ್ಚಿರುವ ಈ ದೀಪ ಮುಂದೆಂದೂ ಆರದೆ ಅದು ನಿಮ್ಮೆಲ್ಲರ ಬಾಳನ್ನು ಬೆಳಗುವಂತಾಗಲಿ ಎಂದು ಭಾವುಕರಾಗಿ ನುಡಿದರು.

ಮಹಿಳಾ ಮೀಸಲಾತಿಗೆ ಚಿಂತಿಸದೆ ಸಾಮರ್ಥ್ಯ ವೃದ್ಧಿಯ ಕಡೆ ಗಮನ ಕೊಡಿ ಎಂದರು.

ಕಾರ್ಯಕ್ರಮದ ವಿಶೇಷ ಆಹ್ವಾನಿತರೂ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಬ್ಲ್ಯೂ. ಪಿ. ಕೃಷ್ಣ ಅವರು ಮಾತನಾಡಿ '' ಸ್ತ್ರೀಯು ಸಮಾನತೆಗೆ ಹೋರಾಡದೆ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವತ್ತ ಚಿಂತಿಸಬೇಕು'' ಎಂಬ ವಿವೇಕಾನಂದ ಮಾತು ಗಳನ್ನು ಪುನರುಚ್ಚರಿಸಿ, ೭ ದಶಕಗಳ ಹಿಂದೆ ಈ ಶಿಕ್ಷಣ ಸಂಸ್ಥೆ ಪ್ರಾರಂಭವಾದದ್ದು ಸ್ತ್ರೀ ಸಮಾಜದಿಂದ ಎಂಬ ವಿಚಾರವನ್ನು ನೆನಪಿಸಿಕೊಂಡರು.

ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಎಂ.ಎಸ್. ನಟರಾಜ್‌ರವರು ಮಾತನಾಡಿ, ಮಾಧ್ಯಮಗಳು ಇಂದಿನ ವಿದ್ಯಾರ್ಥಿಗಳನ್ನು ಅಡ್ಡದಾರಿಗೆಳೆಯುತ್ತಿವೆ. ಮಾಧ್ಯಮ ಚಿತ್ರಿಸುವ ಜೀವನಕ್ಕೂ ವಾಸ್ತವ ಬದುಕಿಗೂ ಬಹಳ ವ್ಯತ್ಯಾಸವಿದೆ. ಇಂತಹ ಸಂದರ್ಭದಲ್ಲಿ ಈ ರೀತಿಯ ವೇದಿಕೆಗಳು ಉತ್ತಮವಾಗಿ ಮಾರ್ಗದರ್ಶನ ಮಾಡಬಲ್ಲವು ಎಂದು ಹೇಳಿ ವಿದ್ಯಾರ್ಥಿನಿಯರಿಗೆ ಶುಭ ಕೋರಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಧರ್ಮದರ್ಶಿಗಳು ಹಾಗೂ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸರೋಜ ನಂಜಪ್ಪನವರು ಎಲ್ಲಾ ವಯಸ್ಸಿನಲ್ಲೂ ಮಹಿಳೆಯರು ಉನ್ನತಿಗಾಗಿ ಶ್ರಮಿಸಲು ಅವಕಾಶವಿದೆ ಎಂಬ ತಮ್ಮ ಅನುಭವದ ಮಾತುಗಳೊಂದಿಗೆ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು.

ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಸ್. ಜಿ. ಮಣೂರ್‌ರವರು ಸಭಿಕರನ್ನು ಸ್ವಾಗತಿಸಿದರು.

'ಮಹಿಳೆ ಪುರುಷರಿಗೆ ಪ್ರತಿಸ್ಪರ್ಧಿಯಲ್ಲ'

ಬೆಂಗಳೂರು, ಸೆ. 28- ಮಹಿಳೆಯು ಎಂದೂ ಪುರುಷನನ್ನು ಪ್ರತಿಸ್ಪರ್ಧಿ ಎಂದು ಭಾವಿಸಬಾರದು. ಆಕೆಯು ತನ್ನಲ್ಲಿರುವ ಶಕ್ತಿಯನ್ನು ಜಾಗೃತಗೊಳಿಸಲು ಹೋರಾಡಬೇಕು ಎಂದು ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಹಾಗೂ 'ನ್ಯಾಕ್' ಕಚೇರಿಯ ಹಿರಿಯ ಶೈಕ್ಷಣಿಕ ಸಲಹೆಗಾರರಾದ ಡಾ. ಮರಿಯಮ್ಮ ಎ. ವರ್ಗೀಸ್ ಹೇಳಿದ್ದಾರೆ.

ಅವರು ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಹಮ್ಮಿಕೊಂಡಿದ್ದ 'ಚೇತನಾ' ಮಹಿಳಾ ವಿಕಸನ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ತಮ್ಮ ಜೀವನದ ಸುದೀರ್ಘ ಅನುಭವವನ್ನು ಉದಾಹರಿಸುತ್ತ ಅವರು ವಿದ್ಯಾರ್ಥಿನಿಯನ್ನು ಹುರಿದುಂಬಿಸಿದರು. 'ಇಂದು ಹಚ್ಚಿರುವ ಈ ದೀಪ ಮುಂದೆಂದೂ ಆರದೆ ಇದು ನಿಮ್ಮೆಲ್ಲರ ಬಾಳನ್ನು ಬೆಳಗುವಂತಾಗಲೀ', ಎಂದು ಭಾವುಕರಾಗಿ ನುಡಿದರು. ಮಹಿಳಾ ಮೀಸಲಾತಿಗೆ ಚಿಂತಿಸದೆ ಸಾಮರ್ಥ್ಯ ವೃದ್ಧಿಯ ಕಡೆ ಗಮನ ಕೊಡಿ ಎಂದರು.

ಕಾರ್ಯಕ್ರಮದ ವಿಶೇಷ ಆಹ್ವಾನಿತರೂ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಬ್ಲ್ಯೂ.ಪಿ. ಕೃಷ್ಣ ಅವರು 'ಸ್ತ್ರೀಯು ಸಮಾನತೆಗೆ ಹೋರಾಡದೆ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವೆಡೆಯಲ್ಲಿ ಚಿಂತಿಸಬೇಕು' ಎಂಬ ವಿವೇಕಾನಂದರ ಮಾತುಗಳನ್ನು ಪುನರುಚ್ಚರಿಸಿ 7 ದಶಕಗಳ ಹಿಂದೆ ಈ ಶಿಕ್ಷಣ ಸಂಸ್ಥೆ ಪ್ರಾರಂಭವಾದದ್ದು ಸ್ತ್ರೀ ಸಮಾಜದಿಂದ ಎಂಬ ವಿಚಾರವನ್ನು ನೆನಪಿಸಿಕೊಂಡರು.



ಬೆಂಗಳೂರಿನ ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಆಶ್ರಯದ ಚೇತನಾ ಮಹಿಳಾ ವಿಕಸನ ವೇದಿಕೆಯನ್ನು ಶಿಕ್ಷಣ ತಜ್ಞೆ ಡಾ. ಮರಿಯಮ್ಮ ವರ್ಗೀಸ್ ಉದ್ಘಾಟಿಸಿದ ಸಂದರ್ಭದಲ್ಲಿ ಡಬ್ಲ್ಯು.ಪಿ. ಕೃಷ್ಣ, ಎಂ.ಎಸ್. ನಟರಾಜ್, ಸರೋಜ ನಂಜಪ್ಪ, ಎಸ್.ಜಿ. ಮಣ್ಣೂರ್ ಹಾಜರಿದ್ದರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಎಂ.ಎಸ್. ನಟರಾಜ್‌ರವರು, ಮಾಧ್ಯಮಗಳು ಇಂದಿನ ವಿದ್ಯಾರ್ಥಿಗಳನ್ನು ಅಡ್ಡದಾರಿಗೆಳೆಯುತ್ತಿವೆ. ಮಾಧ್ಯಮ ಚಿತ್ರಿಸುವ ಜೀವನಕ್ಕೂ ವಾಸ್ತವ ಬದುಕಿಗೂ ಬಹಳ ವ್ಯತ್ಯಾಸವಿದೆ. ಇಂತಹ ಸಂದರ್ಭದಲ್ಲಿ ಈ ರೀತಿಯ ವೇದಿಕೆಗಳು ಉತ್ತಮವಾಗಿ ಮಾರ್ಗದರ್ಶನ ಮಾಡಬಲ್ಲವು ಎನ್ನುತ್ತಾ ವಿದ್ಯಾರ್ಥಿನಿಯರಿಗೆ ಶುಭ ಕೋರಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಶ್ರೀಮತಿ ಸರೋಜ ನಂಜಪ್ಪನವರು ಎಲ್ಲಾ ವಯಸ್ಸಿನಲ್ಲೂ ಮಹಿಳೆಯರು ಉನ್ನತಿಗಾಗಿ ಶ್ರಮಿಸಲು ಅವಕಾಶವಿದೆ ಎಂಬ ತಮ್ಮ ಅನುಭವದ ಮಾತುಗಳೊಂದಿಗೆ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು. ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಸ್.ಜಿ. ಮಣೂರ್‌ರವರು ಸಭಿಕರನ್ನು ಸ್ವಾಗತಿಸಿದರು.

ಉದಯವಾಣಿ

ಸೆಪ್ಟೆಂಬರ್ 27, 2003

'ವಿನಿಮಯ' ತರಬೇತಿ ವೇದಿಕೆ ಉದ್ಘಾಟನೆ

ಶೇಷಾದ್ರಿಪುರಂ

ಜಾಗತೀಕರಣದ ಹಿನ್ನೆಲೆಯಲ್ಲಿ ಸಾಗುತ್ತಿರುವ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ವಿದ್ಯಾರ್ಥಿಗಳು ಉತ್ತಮ ಬದುಕಿಗಾಗಿ ವಿಷಯ ಸಂಪನ್ನತೆ, ಸಾಮಾನ್ಯ ಜ್ಞಾನ, ಸಂವಹನ ಕೌಶಲ್ಯಗಳನ್ನು ಶ್ರದ್ಧೆ ಮತ್ತು ಪರಿಶ್ರಮಗಳಿಂದ ವರ್ಧಿಸಿಕೊಳ್ಳಬೇಕಾಗಿದೆ. ಕಾಲೇಜಿನಿಂದ ಕಚ್ಚಾ ವಸ್ತುಗಳಾಗಿ ಹೊರಹೋಗದೆ ಸಂಪೂರ್ಣ ಸಿದ್ಧವಸ್ತುವಾಗಿ ದೇಶದ ಹಿತ ಕಾಪಾಡುವವರಾಗಿ ಹೋಗಬೇಕಾಗಿದೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಅಬ್ದುಲ್ ಅಜೀಜ್ ಹೇಳಿದರು.



ಅವರು ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಇತ್ತೀಚೆಗೆ ಹಮ್ಮಿಕೊಂಡಿದ್ದ 'ವಿನಿಮಯ' ಬ್ಯಾಂಕ್ ವ್ಯವಹಾರ ತರಬೇತಿ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಮಾತನಾಡುತ್ತ, ಅಬ್ದುಲ್ ಅಜೀಜ್ ಅವರು ಇಂದಿನ ಸಮಾಜದ ನೈಜ ಸ್ಥಿತಿಯನ್ನು ವಿದ್ಯಾರ್ಥಿಗಳ ಮುಂದಿಟ್ಟಿದ್ದಾರೆ. ಸಂಜೆ ಕಾಲೇಜಿನ ಶ್ರಮಜೀವಿಗಳಾದ ವಿದ್ಯಾರ್ಥಿ ಗಳು ಅದನ್ನು ಪಾಲಿಸಿ, ಜೀವನದಲ್ಲಿ ಉನ್ನತ ಮಟ್ಟ ತಲುಪುತ್ತಾರೆ ಎಂದರು. ಪ್ರಾಚಾರ್ಯ ಪ್ರೊ. ಎಸ್.ಜಿ. ಮಣೂರ್ ಸ್ವಾಗತ ಕೋರಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಕಿರೀಟಕ್ಕೆ ಮತ್ತೊಂದು ಗರಿ

ಮಾಗಡಿ ರಸ್ತೆಯಲ್ಲಿ ಪದವಿ ಪೂರ್ವ ಕಾಲೇಜು

ಮಾಗಡಿ ಮುಖ್ಯ ರಸ್ತೆಯಲ್ಲಿ ನೂತನವಾಗಿ ಪ್ರಾರಂಭಿಸಿರುವ ಶೇಷಾದ್ರಿಪುರ ಸ್ವತಂತ್ರ ಪದವಿಪೂರ್ವ ಕಾಲೇಜಿನ ಉದ್ಘಾಟನೆ 16-9-2003ರ ಮಂಗಳವಾರ ದಂದು ನೆರವೇರಿತು.

ಪ್ರೊ.ಚಂದ್ರಶೇಖರ್ ಮತ್ತು ವಿದ್ಯಾರ್ಥಿಗಳ ತಂಡ ವೇದ ಘೋಷ ಮಾಡಿದರು.

ಸರಸ್ವತಿಯ ಈ ದೇಗುಲಕ್ಕೆ ಎಲ್ಲರನ್ನೂ



ಉದ್ಘಾಟನಾ ಸಮಾರಂಭದ ಒಂದು ಸಂತಸದಕ್ಷಣ: ಶಾಸಕ ವಿ.ಸೋಮಣ್ಣ, ಎನ್.ಆರ್.ಪಂಡಿತಾರಾಧ್ಯ, ಶ್ರೀಮತ್ ಸ್ವಾಮಿ ಶಾಂತಿಮಯಾನಂದ ಹಾಗೂ ಸಚಿವ ಬಿ.ಕೆ.ಸಿ.ಚಿತ್ರದಲ್ಲಿದ್ದಾರೆ.

ಶೇಷಾದ್ರಿಪುರ ಶಿಕ್ಷಣ ದತ್ತಿ ಆವರಣದ ರಾಷ್ಟ್ರಕವಿ ಕುವೆಂಪು ಬಯಲು ರಂಗ ಮಂದಿರದಲ್ಲಿ ಬೆಳಗ್ಗೆ 11-00 ಗಂಟೆಗೆ ನಡೆದ ಸರಳ, ಸುಂದರ ಸಮಾರಂಭದ ಸಾನಿಧ್ಯವನ್ನು ರಾಮಕೃಷ್ಣ ಮಠದ ಶ್ರೀಮತ್ ಸ್ವಾಮಿ ಶಾಂತಿ ಮಯಾನಂದ ವಹಿಸಿದ್ದರು. ದತ್ತಿಯ ಅಧ್ಯಕ್ಷ ಕೆ.ಎಂ.ನಂಜಪ್ಪ ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಅವರು ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಕೆ.ಚಂದ್ರಶೇಖರ್ ಉದ್ಘಾಟಿಸಿದರು. ಶಾಸಕರುಗಳಾದ ವಿ.ಸೋಮಣ್ಣ ಮತ್ತು ದಿನೇಶ್ ಗುಂಡೂರಾವ್ ಮುಖ್ಯ ಅತಿಥಿಗಳಾಗಿದ್ದರು.

ಚಂದ್ರಿಕಾ ಪುರಾಣಿಕ್ ಅವರು ನಿರೂಪಿಸಿದ ಈ ಕಾರ್ಯಕ್ರಮ ಪ್ರಥಮ ಪಿ.ಯು.ಸಿ.ವಿದ್ಯಾರ್ಥಿನಿ ಕು.ಗ್ರೀಷ್ಮಳ ಗಣಪತಿಸ್ತುತಿಯೊಂದಿಗೆ ಆರಂಭವಾಯಿತು.

ಸ್ವಾಗತಿಸಿದ ದತ್ತಿಯ ಗೌ|| ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ ಅವರು ನೂತನ ಕಾಲೇಜಿನ ಉಪನ್ಯಾಸಕರನ್ನು ಹಾಗೂ ಇತರ ಸಿಬ್ಬಂದಿ ವರ್ಗದವರನ್ನು ಪರಿಚಯಿಸಿದರು. "ನಮ್ಮ ಸಂಸ್ಥೆಯ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ನಮ್ಮ 18ನೇ ವಿದ್ಯಾಸಂಸ್ಥೆ ಆರಂಭಿಸುತ್ತಿದ್ದೇವೆ. 16000 ವಿದ್ಯಾರ್ಥಿಗಳು ನಮ್ಮ ವಿವಿಧ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ. ಸಿಬ್ಬಂದಿ ವರ್ಗದಲ್ಲಿ 800 ಜನ ಇದ್ದಾರೆ. Quality Education at affordable cost ನಮ್ಮ ಮುಖ್ಯ ಉದ್ದೇಶ. ಲಾಭದ ಉದ್ದೇಶ ಈ ಸಂಸ್ಥೆಗಿಲ್ಲ" ಎಂದು ಹೇಳಿದ ಕೃಷ್ಣ ಅವರು ಸಂಸ್ಥೆಯನ್ನು ಬೃಹದಾಕಾರವಾಗಿ ಕಟ್ಟಿ ಬೆಳೆಸಲು ತ್ಯಾಗ, ಬಲಿದಾನ ಮಾಡಿದ ಹಿರಿಯ ಚೇತನಗಳನ್ನು ಸ್ಮರಿಸಿಕೊಂಡರು. ಯಲಹಂಕದಲ್ಲಿ ಟಿ.ಸಿ.ಎಚ್. ಕಾಲೇಜು ಆರಂಭಿಸುವ ಉದ್ದೇಶವಿದೆ. ದಯಮಾಡಿ ಅನುಮತಿ ನೀಡಿ ಎಂದು ಸಚಿವರನ್ನು ಪ್ರಾರ್ಥಿಸಿ ಕೊಂಡರು.

ಬೆ ಂಗಳೂರಿನ ಸಂಚಾರ ಒತ್ತಡದಿಂದಾಗಿ ಯಾವುದೇ ಸಭೆ, ಸಮಾರಂಭಗಳಿಗೆ ಹೋಗಿ ಬರಲು ಕನಿಷ್ಠ 4-5 ಗಂಟೆ ಕಾಲ ಬೇಕಾಗುತ್ತದೆ. ಶೈಕ್ಷಣಿಕವಾಗಿ ಮಾರ್ಪಾಡು ತರುವಲ್ಲಿ ಆಸಕ್ತಿ ಇರುವ ನಾನು ಈ ರೀತಿ ಕಾಲ ವ್ಯಯಿಸಬಾರದು ಎಂದು ಶಾಲೆ, ಕಾಲೇಜುಗಳ ಸಭೆ, ಸಮಾರಂಭಗಳಿಗೆ ಹೋಗುವುದನ್ನು ಸಾಧ್ಯವಾದಷ್ಟು ತಪ್ಪಿಸುತ್ತೇನೆ ಎಂದು ತಮ್ಮ ಭಾಷಣದಲ್ಲಿ ಹೇಳಿದ ಸಚಿವ ಬಿ.ಕೆ.ಚಂದ್ರಶೇಖರ್ ಅವರು ಇದನ್ನು ನನ್ನ ಅಹಂಕಾರ ಎಂದು ಭಾವಿಸಬಾರದು ಎಂದು ಮನವಿ ಮಾಡಿಕೊಂಡರು. ಶಿಕ್ಷಣದ ಬಗೆಗೆ ಆಸಕ್ತಿ ವಹಿಸದೆ ಹೋದರೂ, ಪ್ರಭಾವಿ ರಾಜಕಾರಣಿಗಳು ಶಿಕ್ಷಕರ ವರ್ಗಾವಣೆಯ ಬಗೆಗೆ ಮಾತ್ರ ಒತ್ತಡ ತರುತ್ತಾರೆ ಎಂದು ವಿಷಾದಿಸಿದರು.

"ನಾನು ಇಂಗ್ಲೆಂಡಿನಲ್ಲಿ ಬಹಳ ವರ್ಷ ಇದ್ದವನು. ಅಲ್ಲಿ Transfer ಎಂಬ ಶಬ್ದವೇ ಕೇಳಿಸುತ್ತಿರಲಿಲ್ಲ. ಇಲ್ಲಿ ಈ ವರ್ಗಾವಣೆ ದಂಧೆಯೇ ನನ್ನ ಶೇ.30 ಸಮಯ ಕಬಳಿಸುತ್ತದೆ. ನಮ್ಮ ವ್ಯವಸ್ಥೆಯಲ್ಲೇ ಏನೋ ದೋಷವಿದೆ. ಬಹುತೇಕ ಸರ್ಕಾರಿ ಶಾಲೆಗಳ ಶಿಕ್ಷಕರು ಚೆನ್ನಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡುತ್ತಿರುತ್ತೇನೆ. ಎಲ್ಲೂ ಒಬ್ಬ ಉಪಾಧ್ಯಾಯರೂ Miss ಆಗಿದ್ದುದನ್ನು ನಾನು ನೋಡಿಲ್ಲ. ಸರ್ಕಾರಿ ಶಾಲೆಗಳ ಬಗೆಗೆ ಜನರ ಧೋರಣೆ ಬದಲಾಗಬೇಕು. ಖಾಸಗಿ ಸಂಸ್ಥೆಗಳಂತೆ ಇವುಗಳಿಗೂ ಪ್ರಚಾರ ಸಿಗಬೇಕು" ಎಂದು ನುಡಿದ ಸಚಿವರು ಶೇಷಾದ್ರಿಪುರ ಶಿಕ್ಷಣ ದತ್ತಿಯ ಡಬ್ಲ್ಯು.ಪಿ.ಕೃಷ್ಣ ಮತ್ತಿತರ ಪದಾಧಿಕಾರಿಗಳು ಪ್ರಾಮಾಣಿಕತೆ, ದಕ್ಷತೆಗಳಿಂದ ಸೇವೆ ಸಲ್ಲಿಸುತ್ತಿರುವದಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸರ್ಕಾರಿ ಶಿಕ್ಷಕರಿಗೆ ತರಬೇತಿ ನೀಡಬೇಕು ಎನ್ನುವ ಕೋರಿಕೆಯೊಂದಿಗೆ ಡಬ್ಲ್ಯು.ಪಿ.ಕೃಷ್ಣ ಅವರ ಬೇಡಿಕೆಗೆ (ಟಿ.ಸಿ.ಎಚ್.ಕಾಲೇಜು ಆರಂಭಿಸಲು ಅನುಮತಿ) ಸ್ಪಂದಿಸುವ ಭರವಸೆ ನೀಡಿದರು. ಸಚಿವರ ಕೋರಿಕೆಯನ್ನು ಆಡಳಿತ ಮಂಡಳಿ ಸ್ಥಳದಲ್ಲೇ ಪುರಸ್ಕರಿಸಿತು.

ತಮ್ಮ ಕ್ಷೇತ್ರದಲ್ಲಿ ಒಂದು ಪದವಿ ಪೂರ್ವ ಕಾಲೇಜು ಆರಂಭಿಸಿದುದಕ್ಕಾಗಿ ದತ್ತಿಗೆ ಕೃತಜ್ಞತೆಗಳನ್ನರ್ಪಿಸಿದ ಬಿನ್ನಿಪೇಟೆ ಶಾಸಕ ವಿ.ಸೋಮಣ್ಣ ಅವರು "ಮಾಗಡಿ ರಸ್ತೆ, ಗೋಪಾಲಪುರ, ಅಗ್ರಹಾರ ಮೊದಲಾದ ಬಡವರೇ ಹೆಚ್ಚಾಗಿರುವ ಪ್ರದೇಶದ ಮಕ್ಕಳಿಗೆ ಸಹಾಯ ಮಾಡಿದ್ದೀರಿ. ಒಳ್ಳೆಯ ಕೆಲಸ ಮಾಡುತ್ತಿರುವ ಬೆರಳೆಣಿಕೆಯಷ್ಟು ವಿದ್ಯಾಸಂಸ್ಥೆಗಳಲ್ಲಿ ನಿಮ್ಮದೂ ಒಂದು. ನಿಮ್ಮ ಟ್ರಸ್ಟಿಗಳಲ್ಲಿ ಯಾರೂ ಸ್ವಾರ್ಥಿಗಳಿಲ್ಲ ಎಂದು ಶ್ಲಾಘಿಸಿ, ಕುಗ್ರಾಮಗಳಲ್ಲೂ ಶಾಲೆ, ಕಾಲೇಜು ಆರಂಭಿಸುವಂತೆ ಮನವಿ ಮಾಡಿದರು. ತಮ್ಮ ಕ್ಷೇತ್ರದ ಆರ್.ಪಿ.ಸಿ ಮತ್ತು ಚಂದ್ರಾ ಬಡಾವಣೆಗಳಲ್ಲಿ ಕಾಲೇಜಿನ ಶಾಖೆ ಆರಂಭಿಸಿದರೆ-ತಾವು ಜಾಗ ಕೊಡಿಸುವುದಾಗಿ ಭರವಸೆ ನೀಡಿದರು.

ದಿನೇಶ್ ಗುಂಡೂರಾವ್ ಅವರು ತಾವು ಪ್ರತಿನಿಧಿಸುವ ಗಾಂಧಿನಗರ ವಿಧಾನ ಸಭಾಕ್ಷೇತ್ರದ ಅತ್ಯಂತ ಶ್ರೇಷ್ಠ ವಿದ್ಯಾಸಂಸ್ಥೆ ಇದೆಂದು ಅಭಿಪ್ರಾಯಪಟ್ಟರು. ಬಡ ಮಕ್ಕಳಿಗೆ ಸಹಾಯ ಮಾಡುವ ಉದ್ದೇಶದಿಂದ ಮಾತ್ರ Admission Season ನಲ್ಲಿ ನಿಮ್ಮ ಮೇಲೆ ಒತ್ತಡ ತರುತ್ತೇನೆಯೇ ಹೊರತು ಬೇರೆ ಉದ್ದೇಶವಿಲ್ಲ. ನಿಮ್ಮ ಸಂಸ್ಥೆ ಬಗೆಗೆ ನನಗೆ ಅಪಾರ ಗೌರವವಿದೆ ಎಂದರು.

ಶಾಂತಿ ಮಯಾನಂದ ಸ್ವಾಮೀಜಿ ಅವರು ಆಶೀರ್ವಚನ ಭಾಷಣ ಮಾಡುತ್ತಾ, ಕಳೆದ 73 ವರ್ಷಗಳಿಂದ ಮಾನವೀಯ ಸೇವೆ ಮಾಡುತ್ತಿರುವ ಸಂಸ್ಥೆಯನ್ನು ಶ್ಲಾಘಿಸಿದರು. ಕುಸಿಯುತ್ತಿರುವ ಮೌಲ್ಯಗಳನ್ನು ಪುನಃ ಸ್ಥಾಪಿಸಲು ಇಂತಹ ಸಂಸ್ಥೆಗಳು ಮುಂದಾಗುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಬಗೆಗೆ ಮಾತನಾಡುತ್ತಾರೆ. ಆದರೆ ಕರ್ತವ್ಯಗಳ ಬಗೆಗೆ ತುಟಿ ಬಿಚ್ಚುವುದಿಲ್ಲ. ಸ್ವಾಮಿ ವಿವೇಕಾನಂದ, ಸರ್.ಎಂ.ವಿಶ್ವೇಶ್ವರಯ್ಯ ಮೊದಲಾದವರು ಇತರರಿಗಾಗಿ ಬದುಕಿದರು. ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಉಮಾಶಂಕರ್ ವಂದಿಸಿದರು. ಪದವಿ ಕಾಲೇಜಿನ ಡಿ.ವಿನಯ್, ಮಧುಶ್ರೀ ಹಾಗೂ ಇತರ ವಿದ್ಯಾರ್ಥಿಗಳು ಆರ್.ಎನ್.ಜಯಗೋಪಾಲ್ ವಿರಚಿತ ಈ ಮಣ್ಣು ನಮ್ಮದು, ಈ ಗಾಳಿ ನಮ್ಮದು ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು.


ದತ್ತಿಯ ಮತ್ತೊಬ್ಬ ಉಪಾಧ್ಯಕ್ಷ ಡಬ್ಲ್ಯು.ಎಚ್.ಅನಿಲ್‌ಕುಮಾರ್, ಗೌ|| ಖಜಾಂಚಿ ಟಿ.ಎಸ್.ಹೆಂಜಾರಪ್ಪ, ಗೌ|| ಜಂಟಿ ಕಾರ್ಯದರ್ಶಿ ಎ.ಆರ್.ಶ್ರೀನಿವಾಸಯ್ಯ, ಗೌ|| ಸಹಾಯಕ ಕಾರ್ಯದರ್ಶಿ ಆರ್.ಕೃಷ್ಣ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಬಿ.ಎ.ಅನಂತರಾವ್, ಸರೋಜಮ್ಮ ಕೆ.ಎಂ.ನಂಜಪ್ಪ ಮತ್ತು ಟ್ರಸ್ಟಿಗಳಾದ ಎಸ್.ಷಡಕ್ಷರಿ, ಎಸ್.ವೀರಭದ್ರಯ್ಯ ಮೊದಲಾದ ಗಣ್ಯರು ವೇದಿಕೆ ಮೇಲಿದ್ದರು.

ಪ್ರಜಾವಾಣಿ, ಮಂಗಳವಾರ 23ನೇ ಸೆಪ್ಟೆಂಬರ್ 2003

ಶೇಷಾದ್ರಿಪುರಂ ಕಾಲೇಜಿನಲ್ಲಿ 'ವಿನಿಮಯ'

ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು 'ವಿನಿಮಯ' ಎಂಬ ಬ್ಯಾಂಕ್ ವ್ಯವಹಾರ ತರಬೇತಿ ವೇದಿಕೆಯನ್ನು ಪ್ರಾರಂಭಿಸಿದ್ದು, ಇದನ್ನು ಈಚೆಗೆ ಅರ್ಥಶಾಸ್ತ್ರಜ್ಞ ಡಾ. ಅಬ್ದುಲ್ ಅಜೀಜ್ ಉದ್ಘಾಟಿಸಿದರು. ಜಾಗತೀಕರಣದ ಹಿನ್ನಲೆಯಲ್ಲಿ ಸಾಗುತ್ತಿರುವ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಉತ್ತಮ ಬದುಕಿಗಾಗಿ ತಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಡಾ. ಅಜೀಜ್ ಹೇಳಿದರು. ಈ ಸಂದರ್ಭದಲ್ಲಿ ಕಾಲೇಜಿನ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಹಾಗೂ ಪ್ರಾಂಶುಪಾಲ ಪ್ರೊ ಎಸ್.ಜಿ. ಮಣೂರ್ ಉಪಸ್ಥಿತರಿದ್ದರು.

ಬೆಂಗಳೂರು ವಿಜಯ
ಮಂಗಳವಾರ 23 ಸೆಪ್ಟೆಂಬರ್ 2003



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ 'ವಿನಿಮಯ ಬ್ಯಾಂಕ್' ತರಬೇತಿ ವೇದಿಕೆ ಉದ್ಘಾಟನೆ ನೆರವೇರಿತು. ಖ್ಯಾತ ಅರ್ಥ ಶಾಸ್ತ್ರಜ್ಞ ಡಾ.ಅಬ್ದುಲ್ ಅಜೀಜ್, ಡಬ್ಲ್ಯೂ.ಪಿ.ಕೃಷ್ಣ ಮತ್ತು ಕಾಲೇಜಿನ ಪ್ರಾಚಾರ್ಯ ಎಸ್.ಜಿ.ಮಣೂರ್ ಭಾಗವಹಿಸಿದ್ದರು.

೨೦-೯-೨೦೦೩ ಶನಿವಾರ ಈ ಸಂಜೆ



ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ವಿನಿಮಯ' ಎಂಬ ಬ್ಯಾಂಕ್ ವ್ಯವಹಾರ ತರಬೇತಿಯನ್ನು ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಅಬ್ದುಲ್ ಅಜೀಮ್ ಉದ್ಘಾಟಿಸಿದರು. ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಕಾಲೇಜಿನ ಪ್ರಾಚಾರ್ಯ ಪ್ರೊ. ಎಸ್.ಜಿ. ಮಣೂರ್ ಪಾಲ್ಗೊಂಡಿದ್ದರು.

ಶಿಕ್ಷಣ ಇಲಾಖೆ: ವರ್ಗಾವಣೆಯಿಂದ ಸಮಯ ವ್ಯರ್ಥ

ಬೆಂಗಳೂರು, ಸೆ. 16- ಇಲಾಖೆ ಕೆಲಸ ಕಾರ್ಯದಲ್ಲಿ ಶೇ. 30 ರಷ್ಟು ಸಮಯ ಶಿಕ್ಷಕರ ವರ್ಗಾವಣೆ ಸಮಸ್ಯೆ ಇತ್ಯರ್ಥಕ್ಕೆ ವ್ಯರ್ಥವಾಗುತ್ತದೆ' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಕೆ. ಚಂದ್ರಶೇಖರ್ ವಿಷಾದ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಮಂಗಳವಾರ, ಶೇಷಾದ್ರಿಪುರಂ ಪದವಿ- ಪೂರ್ವ ಕಾಲೇಜು ಉದ್ಘಾಟಿಸಿದ ಅವರು, ವರ್ಗಾವಣೆಗೆ ಕಡಿವಾಣ ಅಗತ್ಯ ಎಂದರು.


ಸರಕಾರಿ ಶಾಲೆಗಳ ಬಹುತೇಕ ಶಿಕ್ಷಕರು ಉತ್ತಮ ಕೆಲಸ ಮಾಡುತ್ತಾರೆ. ಆದರೆ, ಪ್ರಚಾರ ಇಲ್ಲದ ಕಾರಣ ಸಾರ್ವಜನಿಕರು ತಪ್ಪು ತಿಳಿವಳಿಕೆಯಲ್ಲಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಜನಪ್ರತಿನಿಧಿಗಳು ಆಸಕ್ತಿ ತೋರಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದರು.

ತಮ್ಮ ಕ್ಷೇತ್ರಗಳಿಗೆ ಹೈಸ್ಕೂಲ್ ಪಡೆಯಲು ಶಾಸಕರು ಆಸಕ್ತರಾಗಿದ್ದಾರೆ. ಕಳೆದ 6-7 ತಿಂಗಳಲ್ಲಿ 190 ಹೈಸ್ಕೂಲ್ ಮಂಜೂರು ಮಾಡಲಾಗಿದೆ ಎಂದರು.

ಇದೇ ಶೈಕ್ಷಣಿಕ ವರ್ಷಕ್ಕೆ ಪಿಯುಸಿ ಪಠ್ಯ ಪರಿಷ್ಕರಿಸುವ ಉದ್ದೇಶ ಇತ್ತು. ಆದರೆ ನಿಗದಿತ ಸಮಯದಲ್ಲಿ ಅದನ್ನು ಸಾಧಿಸಲು ಸಾಧ್ಯವಾಗಿಲ್ಲ. ಪಠ್ಯ ಪರಿಷ್ಕರಣೆ ಸಮಿತಿಗೆ ಶಿಕ್ಷಕರನ್ನೇ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ಶಿಕ್ಷಕರ ವರ್ಗಾವಣೆ ದಂಧೆಯಲ್ಲಿ ರಾಜಕಾರಣಿಗಳು ಹಾಗೂ ಕೆಲವು ಅಧಿಕಾರಿಗಳ ಪಾತ್ರ ಇದೆ ಎಂದು ಮಾಜಿ ಸಚಿವ ಸೋಮಣ್ಣ ಟೀಕಿಸಿದರು.

ರಾಮಕೃಷ್ಣ ಮಠದ ಶಾಂತಿಮಯಾನಂದ ಸ್ವಾಮಿಜಿ, ಶಾಸಕ ದಿನೇಶ್ ಗುಂಡೂರಾವ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಕೆ. ಎಂ. ನಂಜಪ್ಪ, ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಹಾಜರಿದ್ದರು.



ಸಚಿವ ಬಿ. ಕೆ. ಚಂದ್ರಶೇಖರ್ ಬೆಂಗಳೂರಿನಲ್ಲಿ ಮಂಗಳವಾರ ಶೇಷಾದ್ರಿಪುರಂ ಪದವಿ- ಪೂರ್ವ ಕಾಲೇಜನ್ನು ಉದ್ಘಾಟಿಸಿದರು. ಮಾಜಿ ಸಚಿವ ವಿ. ಸೋಮಣ್ಣ, ಶಾಸಕ ದಿನೇಶ್ ಗುಂಡೂರಾವ್, ಶಾಂತಿಮಯಾನಂದ ಸ್ವಾಮಿಜಿ ಹಾಜರಿದ್ದರು.

ಸಿಬ್ಬಂದಿ ವರ್ಗಾವಣೆ: ಸಂಶೋಧನೆ ಅಗತ್ಯ

ಬೆಂಗಳೂರು, ಸೆ. 16– ದೊಡ್ಡ ಸಮಸ್ಯೆಯಾಗಿರುವ ಸಿಬ್ಬಂದಿಯ ವರ್ಗಾವಣೆ ಕುರಿತು ದೇಶದ ಯಾವ ವಿಶ್ವವಿದ್ಯಾಲಯ ಅಥವಾ ಖಾಸಗಿ ಸಂಸ್ಥೆಗಳು ಇದುವರೆಗೂ ಸಂಶೋಧನೆ ಮಾಡದಿರುವುದರ ಬಗ್ಗೆ ಪ್ರಾಥಮಿಕ ಶಿಕ್ಷಣ ಸಚಿವ ಪ್ರೊ.ಬಿ.ಕೆ. ಚಂದ್ರಶೇಖರ್ ಇಂದು ಇಲ್ಲಿ ತೀವ್ರ ವಿಷಾದ ವ್ಯಕ್ತಪಡಿಸಿದರು.

ಮಾಗಡಿ ಮುಖ್ಯರಸ್ತೆಯಲ್ಲಿ ಪ್ರಾರಂಭಿಸಿರುವ ಶೇಷಾದ್ರಿಪುರ ಸ್ವತಂತ್ರ ಪದವಿಪೂರ್ವ ಕಾಲೇಜನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಸಿಬ್ಬಂದಿ ವರ್ಗಾವಣೆಯಿಂದಾಗಿಯೇ ಹಲವು ಮುಖ್ಯ ಕೆಲಸ ಕಾರ್ಯಗಳ ಪ್ರಗತಿ ಕುಂಠಿತವಾಗುತ್ತಿದೆ' ಎಂದು ಅಭಿಪ್ರಾಯಪಟ್ಟರು.

'ಸರ್ಕಾರದಲ್ಲಿ ಅತಿ ದೊಡ್ಡ ಇಲಾಖೆಯಾದ ಶಿಕ್ಷಣ ಇಲಾಖೆಯಲ್ಲಿನ ಶಿಕ್ಷಕರ ವರ್ಗಾವಣೆ ಪ್ರತಿವರ್ಷ ದೊಡ್ಡ ಸಮಸ್ಯೆಯಾಗುತ್ತಲೇ ಇದೆ. ಇದಕ್ಕೆ ಎಲ್ಲಿಯೂ ಪರಿಹಾರ ಸಿಗುತ್ತಿಲ್ಲ. ಸಂಶೋಧನೆ ಕೂಡ ನಡೆದಿಲ್ಲ. ಈ ಕೆಲಸಗಳಿಗಾಗಿಯೇ ಶೇ. 30ರಷ್ಟು ಸಮಯ ವ್ಯಯವಾಗುತ್ತಿದೆ' ಎಂದು ಅವರು ಹೇಳಿದರು.

'ಸ್ಥಳೀಯ ಜನರ ಒತ್ತಡಕ್ಕೆ ಮಣಿಯುವ ಶಾಸಕರು ಕೂಡ ಶಿಕ್ಷಕರ ವರ್ಗಾವಣೆ ಪಟ್ಟಿಯನ್ನು ತಂದು ನನ್ನ ಮುಂದಿಡುತ್ತಾರೆ. ಅವುಗಳಲ್ಲಿ ಬಹುತೇಕ ಗಂಡ–ಹೆಂಡಿರ ವರ್ಗಾವಣೆ ಅರ್ಜಿಗಳೇ ಇರುತ್ತವೆ'. ಎಂದು ವ್ಯಂಗ್ಯವಾಡಿದರು.

ಸಚಿವ ಚಂದ್ರಶೇಖರ್

ಸರ್ಕಾರಿ ಶಾಲೆಗೆ ಪ್ರಚಾರವಿಲ್ಲ: 'ಸರ್ಕಾರಿ ಶಾಲೆಗಳ ಬಗ್ಗೆ ಪ್ರಚಾರ ಮಾಡುವವರೇ ಇಲ್ಲ. ಹೀಗಾಗಿ ಅವುಗಳಿಗೆ ಸರಿಯಾದ ಮಾನ್ಯತೆ ಸಿಗುತ್ತಿಲ್ಲ. ಹಳ್ಳಿಗಾಡಿನಲ್ಲಿ ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆ ಮತ್ತು ಕಾಲೇಜುಗಳಿಗೆ ಉತ್ತಮ ಬೇಡಿಕೆ ಕಾಣಿಸುತ್ತಿದೆ' ಎಂದ ಅವರು 'ಖಾಸಗಿ ಶಿಕ್ಷಣ ಸಂಸ್ಥೆಗಳ ಹಾಗೆ ಸರ್ಕಾರಿ ಶಾಲೆಗಳಿಗೂ ಪ್ರಚಾರ ಅಗತ್ಯ' ಎಂದರು.


'ಶಿಕ್ಷಣ ಇಲಾಖೆಯಲ್ಲಿ ಸುಧಾರಣೆ ತರಲು ಸಮಯ ಬೇಕಾಗುತ್ತದೆ. ಇವತ್ತು ಯೋಜನೆ ಹಾಕಿದರೆ ಅದರ ಫಲ ಸಿಗುವುದು ಐದು ವರ್ಷಗಳ ನಂತರ. ಹೀಗಾಗಿ ಈ ಯೋಜನೆಗೆ ಹೆಚ್ಚು ಪೂರ್ವಸಿದ್ಧತೆ ಮತ್ತು ಬದ್ಧತೆ ಬೇಕಿರುತ್ತದೆ. ಇಂತಹ ಕೆಲಸಗಳಿಗೆ ಶಿಕ್ಷಕ ವೃಂದ ಹೆಚ್ಚು ಸಹಕಾರ ನೀಡಬೇಕು' ಎಂದು ಅವರು ಕರೆ ನೀಡಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆ, ಯಲಹಂಕದಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಟಿ.ಸಿ.ಎಚ್ ಕಾಲೇಜಿಗೆ ಸಚಿವರು ಈ ಸಂದರ್ಭದಲ್ಲಿ ಅನುಮತಿ ನೀಡುವ ಭರವಸೆ ನೀಡಿದರು. ಸದರಿ ಕಾಲೇಜಿನಲ್ಲಿ ಸರ್ಕಾರಿ ಶಿಕ್ಷಕರಿಗೆ ತರಬೇತಿ ನೀಡಬೇಕು ಎಂದು ಕಾಲೇಜಿನ ಆಡಳಿತ ಮಂಡಲಿಯನ್ನು ಸಚಿವರು ಕೋರಿದರು. ಈ ಮನವಿಗೆ ಆಡಳಿತ ಮಂಡಲಿ ಸ್ಥಳದಲ್ಲಿಯೇ ಒಪ್ಪಿಗೆ ನೀಡಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಾಸಕ ವಿ.ಸೋಮಣ್ಣ ಅವರು, 'ವರ್ಗಾವಣೆ ದಂಧೆಗೆ ರಾಜಕಾರಣಿಗಳು ಎಷ್ಟು ಕಾರಣವೊ ಅಧಿಕಾರಿಗಳು ಕೂಡ ಅಷ್ಟೇ ಕಾರಣ' ಎಂದು ಅಭಿಪ್ರಾಯಪಟ್ಟರು.

ಶಾಸಕ ದಿನೇಶ್ ಗುಂಡೂರಾವ್ ಮತ್ತು ರಾಮಕೃಷ್ಣ ಮಠದ ಶಾಂತಿಮಯಾನಂದ ಸ್ವಾಮಿ ಮತ್ತಿತರ ಗಣ್ಯರು ಈ ಸಂದರ್ಭದಲ್ಲಿ ಮಾತನಾಡಿದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ ಸ್ವಾಗತಿಸಿದರು.

ಉದಯವಾಣಿ



ಮಂಗಳವಾರ ಬೆಂಗಳೂರಿನ ಮಾಗಡಿ ರಸ್ತೆಯ ಶೇಷಾದ್ರಿಪುರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಉದ್ಘಾಟನೆ ಸಮಾರಂಭದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವ ಪ್ರೊ| ಬಿ.ಕೆ. ಚಂದ್ರಶೇಖರ್, ಶಾಸಕರಾದ ವಿ. ಸೋಮಣ್ಣ, ದಿನೇಶ್‌ಗುಂಡೂರಾವ್, ರಾಮಕೃಷ್ಣ ಮಠದ ಶ್ರೀ ಸ್ವಾಮಿ ಶಾಂತಿಮಯಾನಂದ, ಡಬ್ಲ್ಯೂ. ಪಿ. ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಈ ಸಂಜೆ ಮಂಗಳವಾರ ೧೬-೯-೨೦೦೩



ಶೇಷಾದ್ರಿಪುರಂ ಶಿಕ್ಷಣದತ್ತಿ ಸಂಸ್ಥೆ ಮಾಗಡಿ ಮುಖ್ಯರಸ್ತೆಯಲ್ಲಿ ನೂತನವಾಗಿ ಪ್ರಾರಂಭಿಸಿರುವ ಸ್ವತಂತ್ರ ಪದವಿಪೂರ್ವ ಕಾಲೇಜಿನ ಸಮಾರಂಭವನ್ನು ಶಿಕ್ಷಣ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಉದ್ಘಾಟಿಸಿದರು. ಶ್ರೀ ಶಾಂತಿಮಯಾನಂದ ಸ್ವಾಮೀಜಿ, ಶಾಸಕರಾದ ವಿ. ಸೋಮಣ್ಣ, ದಿನೇಶ್ ಗುಂಡೂರಾವ್, ಡಬ್ಲ್ಯು.ಹೆಚ್. ಕೃಷ್ಣ, ಎನ್.ಆರ್. ಪಂಡಿತಾರಾಧ್ಯ, ಅನಿಲ್‌ಕುಮಾರ್, ಎ.ಆರ್. ಶ್ರೀನಿವಾಸಯ್ಯ, ಟಿ.ಎನ್. ಹೆಂಜಾರಪ್ಪ, ಕೃಷ್ಣ, ಬಿ.ವಿ. ಅನಂತರಾಮ್, ಪ್ರೊ. ಉಮಾಶಂಕರ್ ಪಾಲ್ಗೊಂಡಿದ್ದರು.


ಮಂಗಳವಾರ, 9 ಸೆಪ್ಟೆಂಬರ್ 2003



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಉದ್ಘಾಟನೆ ನಡೆಯಿತು. ಈ ಸಮಾರಂಭದಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿ ಡಾ। ಎಂ.ಎಸ್. ತಿಮ್ಮಪ್ಪ, ಯೋಜನೆ ಅಧಿಕಾರಿ ಡಾ। ಪುರುಷೋತ್ತಮ್, ಸಂಸ್ಥೆಯ ಅಧ್ಯಕ್ಷ ಕೆ.ಟಿ. ನಂಜಪ್ಪ, ಕಾಲೇಜಿನ ಪ್ರಾಂಶುಪಾಲ ಎಸ್.ಜಿ. ಮಣ್ಣೂರ್ ಅವರು ಭಾಗವಹಿಸಿದ್ದರು. /ಕನ್ನಡಪ್ರಭ ಚಿತ್ರ

ಈ ಸಂಜೆ

ಶುಕ್ರವಾರ 5-9-2003



ಶೇಷಾದ್ರಿಪುರ ಎಜುಕೇಷನ್ ಟ್ರಸ್ಟ್ ಏರ್ಪಡಿಸಿದ್ದ ಉಚಿತ ಕಾನೂನು ನೆರವು ಘಟಕದ ಉದ್ಘಾಟನೆಯನ್ನು ಇಂದು ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ನೆರವೇರಿಸಿದರು. ಸಮಾರಂಭದಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಪ್ರೊ. ರವಿವರ್ಮಕುಮಾರ್, ಟ್ರಸ್ಟ್ ಅಧ್ಯಕ್ಷ ಕೆ.ಎಂ. ನಂಜಪ್ಪ, ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಪ್ರಾಂಶುಪಾಲರಾದ ಪ್ರೊ. ಎ.ಜಿ. ಆಶಾ ಭಾಗವಹಿಸಿದ್ದರು.

ಉದಯವಾಣಿ



ಬೆಂಗಳೂರಿನ ಶೇಷಾದ್ರಿಪುರ ಕಾನೂನು ಕಾಲೇಜಿನಲ್ಲಿ ಶುಕ್ರವಾರ ಉಚಿತ ಕಾನೂನು ಸೇವಾ ಕೇಂದ್ರದ ಉದ್ಘಾಟನೆಯನ್ನು ಹೈಕೋರ್ಟ್ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ನೆರವೇರಿಸಿದರು. ಪ್ರೊ. ರವಿವರ್ಮಕುಮಾರ್, ಕೆ.ಎಂ. ನಂಜಪ್ಪ ಮತ್ತಿತರರು ಪಾಲ್ಗೊಂಡಿದ್ದರು.



ಶೇಷಾದ್ರಿ ಪುರಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಘಟಕವನ್ನು ಬೆಂಗಳೂರು ವಿ.ವಿ. ಕುಲಪತಿ ಡಾ. ಎಂ.ಎಸ್. ತಿಮ್ಮಪ್ಪ ಉದ್ಘಾಟಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾ ಅಧಿಕಾರಿ ಡಾ. ಪುರುಷೋತ್ತಮ್ ಮೊದಲಾದವರು ಭಾಗವಹಿಸಿದ್ದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಘಟಕ

ಇತ್ತೀಚೆಗೆ ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನ ಘಟಕ ಅಸ್ತಿತ್ವಕ್ಕೆ ಬಂದಿತು. ಘಟಕವನ್ನು ಬೆಂಗಳೂರು ವಿ.ವಿ. ಕುಲಪತಿ ಡಾ. ಎಂ.ಎಸ್. ತಿಮ್ಮಪ್ಪ ಉದ್ಘಾಟಿಸಿದರು.

ನಂತರ ಮಾತನಾಡುತ್ತಾ, ದಣವನ್ನು ನಿವಾರಿಸಿಕೊಳ್ಳುವ ಕಾಲದಲ್ಲಿ ಬಂದು ಆಸಕ್ತಿಯಿಂದ ಓದುವುದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ಸಾಹ ಮತ್ತು ಶ್ರದ್ಧೆಯಿಂದ ಭಾಗವಹಿಸುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದು ಸಂಜೆ ಕಾಲೇಜಿನ ವಿದ್ಯಾರ್ಥಿಗಳ ಕುರಿತಂತೆ ಸಂತಸ ವ್ಯಕ್ತಪಡಿಸಿದರು.

ಬುದ್ಧಿಯೊಂದಿಗೆ ಭಾವವು ಸಮ್ಮಿಶ್ರಗೊಂಡಾಗ ಮಾತ್ರ ನಿಜವಾದ ವ್ಯಕ್ತಿತ್ವ ರೂಪಿತವಾಗುತ್ತದೆ. ಇಂತಹ ಭಾವವನ್ನು ರಾಷ್ಟ್ರೀಯ ಸೇವಾ ಯೋಜನೆಯಿಂದ ಪಡೆಯಬಹುದು. ಎಚ್.ಐ.ವಿ. ಬಗೆಗಿನ ಜಾಗೃತಿ, ರಕ್ತದಾನ, ಶ್ರಮದಾನ, ಜನಾಂದೋಲನ ಹಾಗೂ ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಹೇಗೆ ತನ್ನ ಪಾತ್ರವನ್ನು ನಿರ್ವಹಿಸುತ್ತದೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವನ್ನು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾ ಅಧಿಕಾರಿ ಡಾ. ಪುರುಷೋತ್ತಮ್ ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಭಾಗವಹಿಸಿ ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವದ ಜೊತೆಗೆ ಯೋಜನೆ ಅನೇಕ ಅನುಕೂಲಗಳನ್ನು ಸವಿವರವಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಕೆ.ಎಂ. ನಂಜಪ್ಪ ವಹಿಸಿದ್ದರು. ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು. ಪಿ. ಕೃಷ್ಣ, ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಎಸ್. ಜಿ. ಮಣ್ಣೂರ್ ಸ್ವಾಗತಿಸಿದರು. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಬಿ.ಆರ್. ಲಕ್ಷ್ಮಣ್ ಅತಿಥಿಗಳನ್ನು ಪರಿಚಯಿಸಿದರು. ಚಂದ್ರಿಕಾ ಪುರಾಣಿಕ್ ಕಾರ್ಯಕ್ರಮ ನಿರೂಪಿಸಿದರು. ಆರ್. ಶ್ರೀನಾಥ್ ವಂದನಾರ್ಪಣೆ ಮಾಡಿದರು.

II ಬೆಂಗಳೂರು ವಿಜಯ
ಸೋಮವಾರ 25 ಆಗಸ್ಟ್ 2003

ಬೋಧಕೇತರ ಸಿಬ್ಬಂದಿ ವಿಶೇಷ ಕಾರ್ಯಾಗಾರ

ಬೆಂಗಳೂರು, ಆ.24- ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಬೋಧಕೇತರ ಸಿಬ್ಬಂದಿಗಾಗಿ 'ಕೇವಲ ಶೈಕ್ಷಣಿಕವಾಗಿಯಷ್ಟೇ ಅಲ್ಲದೆ, ಆಡಳಿತಾತ್ಮಕವಾಗಿಯೂ ಸುಧಾರಣೆ ತರಬೇಕು' ಕುರಿತ ಮೂರು ದಿನಗಳ ತರಬೇತಿ ಕಾರ್ಯಾಗಾರವು ಸಂಸ್ಥೆ ಸಭಾಂಗಣದಲ್ಲಿ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ, ಕಂದಾಯ ಇಲಾಖೆ ಕಾರ್ಯದರ್ಶಿ ಸಿ. ಕೃಷ್ಣಪ್ಪ ಮಾತನಾಡಿ, ಕೇವಲ ತರಬೇತಿಯಿಂದ ಆಡಳಿತ ಸರಿಯಾಗುವುದಿಲ್ಲ, ಬದಲಾಗಿ ಕಲಿತ ಮಾಹಿತಿಯನ್ನು ಪ್ರಯೋಗಾತ್ಮಕವಾಗಿ ಜಾರಿಗೆ ತಂದಾಗ ಮಾತ್ರ ಆಡಳಿತದಲ್ಲಿಯೂ ಸುಧಾರಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಅವರು ಕಚೇರಿ ಕೆಲಸಗಳಿಗೆ ಉಪಯುಕ್ತವಾಗುವ 'ಕಚೇರಿ ಮಾರ್ಗಸೂಚಿ' ಪುಸ್ತಕ ಬಿಡುಗಡೆಗೊಳಿಸಿದರು. ದತ್ತಿಯ ಅಧ್ಯಕ್ಷ ಕೆ.ಎಂ. ನಂಜಪ್ಪ, ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಪದಾಧಿಕಾರಿಗಳಾದ ಆರ್. ಕೃಷ್ಣ, ಎ.ಆರ್. ಶ್ರೀನಿವಾಸಯ್ಯ, ಸರೋಜಾ ನಂಜಪ್ಪ ಭಾಗವಹಿಸಿದ್ದರು.

3 ದಿನಗಳ ತರಬೇತಿ ಶಿಬಿರದಲ್ಲಿ ರಾಜ್ಯ ಖಜಾನೆ ಇಲಾಖೆ ನಿವೃತ್ತ ಲೆಕ್ಕಾಧಿಕಾರಿ ಎ.ಆರ್. ಸಾಂಗ್ಲಿ, ಕೃಷಿ ವಿವಿ ನಿವೃತ್ತ ಡೆಪ್ಯುಟಿ ಕಂಟ್ರೋಲರ್ ಆಫ್ ಅಕೌಂಟ್ಸ್‌ನ ಸಿ. ಮಾಯಣ್ಣ ಹಾಗೂ ರಾಜ್ಯ ಚುನಾವಣಾ ಆಯೋಗದ ನಿವೃತ್ತ ಜಂಟಿ ಆಯುಕ್ತ ಎನ್. ಕ್ಷೇತ್ರಪಾಲ್ ಪ್ರವಚನ ಹಾಗೂ ಪ್ರಾತ್ಯಕ್ಷಿಕೆ ನೀಡಿದರು.



ಬೆಂಗಳೂರಿನಲ್ಲಿ ಶನಿವಾರ ನಡೆದ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ-2003 ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ರಾಣಿ ಸತೀಶ್ ಅವರು ಭಿತ್ತಿಪತ್ರದ ಅನಾವರಣ ಮಾಡಿದರು. ರಾಜ್ಯಪಾಲ ಟಿ.ಎನ್. ಚತುರ್ವೇದಿ ಹಾಗೂ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಚಿತ್ರದಲ್ಲಿದ್ದಾರೆ.


ಪ್ರಜಾವಾಣಿ, 17/8/03

ಉದಯವಾಣಿ

ಭಾನುವಾರ 17 ಆಗಸ್ಟ್ 2003



ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರಿನ ಶೇಷಾದ್ರಿಪುರ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಐತಿಹಾಸಿಕ ಪರಂಪರೆ ಸಂರಕ್ಷಣೆ ಸಪ್ತಾಹ 2003' ಕಾರ್ಯಕ್ರಮದಲ್ಲಿ ರಾಜ್ಯಪಾಲ ಟಿ.ಎನ್. ಚತುರ್ವೇದಿ, ಕನ್ನಡ ಮತ್ತು ಸಂಸ್ಕೃತಿ ಸಚಿವೆ ರಾಣಿ ಸತೀಶ್, ಅಕಾಡೆಮಿಯ ಡಾ। ಸೂರ್ಯನಾಥ ಕಾಮತ್ ಮತ್ತಿತರರು ಭಾಗವಹಿಸಿದ್ದರು.



ಬೆಂಗಳೂರಿನ ಶೇಷಾದ್ರಿಪುರಂನ ಶಿಕ್ಷಣ ದತ್ತಿಯು ತನ್ನ ಬೋಧಕೇತರ ಸಿಬ್ಬಂದಿಗಾಗಿ ಕಚೇರಿಯ ಮಾರ್ಗಸೂಚಿ ಕುರಿತು ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಕಂದಾಯ ಇಲಾಖೆಯ ಕಾರ್ಯದರ್ಶಿ ಸಿ.ಕೃಷ್ಣಪ್ಪ ಕೆ.ಎಂ.ನಂಜಪ್ಪ, ಪಿ.ಕೃಷ್ಣ, ಆರ್.ಕೃಷ್ಣ ಶ್ರೀನಿವಾಸಯ್ಯ ಮುಂತಾದವರು ಭಾಗವಹಿಸಿದ್ದರು.

14 July 2003

ರಾಜ್ಯ ವಾರ್ತೆ

ಇಂದಿರಾಗಾಂಧಿ ಮುಕ್ತ ವಿವಿ:ಬಿಎಡ್ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಾಳೆ ಕಡೆ ದಿನ

ಕನ್ನಡಪ್ರಭ ವಾರ್ತೆ,ಬೆಂಗಳೂರು, ಜು.13

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಬಿಎಡ್ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕೊನೇ ದಿನಾಂಕ ಜು.15. ಇಗ್ನೋ ಜಿಲ್ಲಾ ಸ್ಟಡಿ ಸೆಂಟರ್‌ನಿಂದ ಅರ್ಜಿಯನ್ನು ಪಡೆಯಬಹುದು. ಅರ್ಜಿ ಶುಲ್ಕಕ್ಕೆ 500 ರುಪಾಯಿ ನಿಗದಿಪಡಿಸಲಾಗಿದೆ. ಅರ್ಜಿಯನ್ನು ಇಗ್ನೋ ಪ್ರಾದೇಶಿಕ ಕೇಂದ್ರ, ನಂ.293, 39ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು- 82 ಇಲ್ಲಿಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ 080- 6654747 ಸಂಪರ್ಕಿಸಬಹುದು.



■ **ರೆಡ್‌ಕ್ರಾಸ್ ಸಮಾವೇಶಕ್ಕೆ ಡಬ್ಲ್ಯು.ಪಿ.ಕೃಷ್ಣ:** ದೆಹಲಿಯಲ್ಲಿ ಜು.16ರಂದು ನಡೆಯಲಿರುವ ಭಾರತ ರೆಡ್ ಕ್ರಾಸ್ ಸಂಸ್ಥೆಯ ಸಮಾವೇಶಕ್ಕೆ ಬೆಂಗಳೂರಿನ ಐಆರ್‌ಸಿಎಸ್ ಖಜಾಂಜಿ ಡಬ್ಲ್ಯು.ಪಿ.ಕೃಷ್ಣ ಅವರು ಆಹ್ವಾನಿತರಾಗಿದ್ದಾರೆ.

■ **ಮೊಲ ಸಾಕಣೆ:** ಜು.16ರಿಂದ 18ರವರೆಗೆ ಮೊಲ ಸಾಕಣೆ ಬಗ್ಗೆ ಉಚಿತ ತರಬೇತಿಯನ್ನು ಹೆಸರಘಟ್ಟದ ಜಾನುವಾರು ಸಂವರ್ಧನಾ ಕೇಂದ್ರದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಭಾಗವಹಿಸಬಹುದು. ತರಬೇತಿ ಶಿಬಿರ ಜು.16ರಂದು ಬೆಳಗ್ಗೆ 10 ಗಂಟೆಗೆ ಆರಂಭವಾಗಲಿದೆ. ಬೆಂಗಳೂರಿನ ಕೆಆರ್ ಮಾರುಕಟ್ಟೆಯಿಂದ ನಗರ ಸಾರಿಗೆ ಬಸ್ ಸಂಖ್ಯೆ 251- ಎ ಮತ್ತು 266 ಒ ಹಾಗೂ ಖಾಸಗಿ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿದೆ.

■ **ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ:** ರಂಗಶ್ರೀ ಕಲಾಸಂಸ್ಥೆ ಜು.19ರಂದು ರಂಗಗೀತೆಗಳ ಗಾಯನ, ಮೂಕಾಭಿನಯ, ಏಕಪಾತ್ರಾಭಿನಯ ಸ್ಪರ್ಧೆ, ಜು.20ರಂದು ಜನಪದ ಗೀತೆ, ಭಾವಗೀತೆ, ಚಿತ್ರಗೀತೆಗಳ ಗಾಯನ ಸ್ಪರ್ಧೆ ಹಾಗೂ ಜು.23ರಂದು ಭರತನಾಟ್ಯ, ಜಾನಪದ ನೃತ್ಯ, ಚಲನಚಿತ್ರ ನೃತ್ಯ ಸ್ಪರ್ಧೆಯನ್ನು ಬೆಂಗಳೂರಿನಲ್ಲಿ ಏರ್ಪಡಿಸಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ 31851320 ಮೊಬೈಲ್ 98453 98006 ಸಂಪರ್ಕಿಸಬಹುದು.

■ **ಸಂಧ್ಯಾ ಪೈ, ದೊಡ್ಡರಂಗೇಗೌಡರಿಗೆ ಅತ್ತಿಮಬ್ಬೆ ಪ್ರಶಸ್ತಿ:** 2003ನೇ ಸಾಲಿನ ಅತ್ತಿಮಬ್ಬೆ ಪ್ರಶಸ್ತಿಯನ್ನು ತರಂಗ ವಾರಪತ್ರಿಕೆ ಸಂಪಾದಕಿ ಸಂಧ್ಯಾ ಎಸ್.ಪೈ ಮತ್ತು ಸಾಹಿತಿ ದೊಡ್ಡರಂಗೇಗೌಡರಿಗೆ ಪ್ರಕಟಿಸಲಾಗಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಜು.20ರಂದು ಭಾನುವಾರ ಬೆಳಗ್ಗೆ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆಯಲಿದೆ. ಸಮಾರಂಭದ ಅಧ್ಯಕ್ಷತೆಯನ್ನು ಕಮಲಾ ಹಂಪನಾ ಅವರು ವಹಿಸುವರು. ಹಂಪನಾ, ಡಾ|ಜಯಚಂದ್ರ, ಎನ್.ಬಸವಾರಾಧ್ಯ, ಬಿ.ಟಿ.ಲಲಿತಾ ನಾಯಕ್, ಎನ್.ಎಸ್.ಅಶೋಕ್ ಕುಮಾರ್ ಅವರೂ ಭಾಗವಹಿಸುವರು ಎಂದು ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕಿ ಪಿ.ಮನೋಹರಿ ಪಾರ್ಥಸಾರಥಿ ತಿಳಿಸಿದ್ದಾರೆ.

■ **ವಿದ್ಯಾರ್ಥಿಗಳಿಗೆ ನೆರವು:** ವೈದ್ಯ ಮತ್ತು ದಂತ ವೈದ್ಯ ಕೋರ್ಸಿಗೆ ಸೇರಬಯಸುವ ಐದು ಸಾವಿರ ಒಳಗಿನ ಸಿಇಟಿ ರ್‍ಯಾಂಕ್ ಪಡೆದ ಬಡ ವಿದ್ಯಾರ್ಥಿಗಳಿಗೆ ಡಿಎಚ್ ಕನ್ಸಲ್ಟೆನ್ಸಿ ಸಂಸ್ಥೆ ಹಣಕಾಸು ನೆರವು ಪಡೆಯಲು ಸೂಕ್ತ ಮಾರ್ಗದರ್ಶನ ನೀಡಲಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ 080-56985355 ಮೊಬೈಲ್ 94482 06172 ಸಂಪರ್ಕಿಸಬಹುದು.

ವಿಧ್ಯಾರ್ಥಿಗಳೇ ಮುಂದಿನ ಭವಿಷ್ಯ ನಿಮ್ಮ ಕೈಯಲ್ಲಿದೆ; ಸಾಂಗ್ಲಿಯಾನ

ಇತ್ತೀಚೆಗೆ ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಥಮ ಪದವಿ ತರಗತಿಗಳ ಉದ್ಘಾಟನಾ ಸಮಾರಂಭ ಕಾಲೇಜಿನ ಸಭಾಂಗಣದಲ್ಲಿ ಅರ್ಥಪೂರ್ಣವಾಗಿ ನಡೆಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಾ|| ಹೆಚ್. ಟಿ. ಸಾಂಗ್ಲಿಯಾನರವರು ತಿಮ್ಮ ಉದ್ಘಾಟನಾ ಭಾಷಣದಲ್ಲಿ ಮಾತನಾಡುತ್ತಾ-'' ಬೆಳಗಿನ ವೇಳೆ ಕೆಲಸ ಮಾಡಿ ಸಂಜೆ ಓದಲು ಬರುವ ನಿಮ್ಮನ್ನು ಕಂಡರೆ ಬಹಳ ಸಂತೋಷವಾಗುವುದರ ಜೊತೆಗೆ ಗೌರವ ಮೂಡುತ್ತದೆ. ನಾನು ಬಡ ಕುಟುಂಬದಿಂದ ಬಂದವನಾದ್ದರಿಂದ ಜೀವನದ ಕಷ್ಟಗಳನ್ನು ಅರಿತಿದ್ದೇನೆ'' ಎನ್ನುತ್ತಾ ತಮ್ಮ ಬಾಲ್ಯದ ಘಟನೆಗಳನ್ನು ಸ್ಮರಿಸಿಕೊಂಡರು. ಜೀವನದಲ್ಲಿ ನಾನು ..ರುವ ಹೃದಯವಂತಿಕೆಯ ಜನರೆಂದರೆ ಕನ್ನಡಿಗರು ಕರ್ನಾಟಕದರವರು ಈ ಹೊಗಳಿಕೆಗೆ ನಿಜವಾಗಲು ಅರ್ಹರೆಂದು ಭಾವುಕರಾಗಿ ನುಡಿದರು. ಇಂದಿನ ಯುವ ಜನಾಂಗವು ಕ್ರಮಬದ್ಧವಾದ ಅಭ್ಯಾಸದೊಂದಿಗೆ ವಿಧ್ಯಾರ್ಥಿ ಜೀವನವನ್ನು ರೂಪಿಸಿಕೊಳ್ಳುತ್ತಾ ಶ್ರದ್ಧೆ, ಆಸಕ್ತಿಗಳಿಂದ ಸಾಗಿದಾಗ ನೀವೂ ಸಹ ಐ|ಎ.ಎಸ್. ಐ.ಪಿ.ಎಸ್. ಅಧಿಕಾರಿಗಳಾಗುವಿರಿ ಎಂಬ ಯಶಸ್ಸಿನ ಗುಟ್ಟನ್ನು ತಿಳಿಸಿದರು. ಈ ದೇಶದ ಭವಿಷ್ಯ ನಿಮ್ಮ ಕೈಯಲ್ಲಿದೆ ಅದನ್ನು ಸರಿಯಾದ ಕಡೆಗೆ ಕೊಂಡೊಯ್ಯಿರಿ ಎಂದರು. ಇದೇ ಸಂದರ್ಭದಲ್ಲಿ ನಿವೃತ್ತ ಪೋಲಿಸ್ ಮಹಾ ನಿರ್ದೇಶಕರು (ಬಂದೀಖಾನೆ) ಸಾಂಗ್ಲಿಯಾನ ರವರನ್ನು ಸಂಜೆ ಪದವಿ ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಶ್ರೀ.ಕೆ.ಎಂ.ನಂಜಪ್ಪ ಅವರು ಅಧ್ಯಕ್ಷ ಭಾಷಣ ಮಾಡಿದರೆ, ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಡಬ್ಲ್ಯೂ.ಪಿ.. ಕೃಷ್ಣ ಅವರು ಹಾಗೂ ಸಂಜೆ ಕಾಲೇಜಿನ ಆಡಳಿತ ಪರಿಷತ್ತಿನ ಅಧ್ಯಕ್ಷರಾದ ಶ್ರೀ.ಎಂ.ಎಸ್. ನಟರಾಜ್ ಅವರು ವಿಧ್ಯಾರ್ಥಿಗಳಿಗೆ ಶುಭ ಕೋರಿದರು. ಕಾಲೇಜಿನ ಪ್ರಾಚಾರ್ಯರಾದ ಎಸ್.ಜಿ.ಮಣ್ಣೂರ್‌ರವರು ಸಭೆಯನ್ನು ಸ್ವಾಗತಿಸಿ ತಮ್ಮ ವಿಧ್ಯಾರ್ಥಿಗಳ ಸಾಧನೆಯನ್ನು ಮೆಲುಕು ಹಾಕಿದರು. ದತ್ತಿಯ ಇತರ ಧರ್ಮದರ್ಶಿಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.



ಅತಿಥಿಯಾಗಿ ಆಗಮಿಸಿದ್ದ ಡಾ|| ಹೆಚ್. ಟಿ. ಸಾಂಗ್ಲಿಯಾನರವರನ್ನು ಸನ್ಮಾನಿಸಲಾಯಿತು

.... 4ನೇ ಪುಟದಿಂದ

ಮೀಸಲಾತಿ ನೀಡಿದರು. 1922 ರಿಂದ ಬಾಬಾಸಾಹೇಬ್ ಅಂಬೇಡ್ಕರರು ರಾಜಕೀಯ ಹೋರಾಟವನ್ನು ಆರಂಭಿಸಿದರು. ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿಯನ್ನು ಸಂವಿಧಾನಬದ್ಧ ಹಕ್ಕನ್ನಾಗಿ (ಅನುಚ್ಛೇದ 7, 15 (4), 16 (7)) ಮಾಡಿದರು.

ಇಲ್ಲಿಯುತನಕ ಎಲ್ಲಾ ಪಕ್ಷಗಳೂ ಡಾ|| ಅಂಬೇಡ್ಕರ್ ರಚಿಸಿದ ಸಂವಿಧಾನದ ಮೇಲೆ ಪ್ರಮಾಣವಚನ ಸ್ವೀಕರಿಸಿಯೇ ಸರ್ಕಾರ ರಚನೆ ಮಾಡಿದರೂ. ಯಾವ ಸರ್ಕಾರವೂ ಎಸ್ .ಸಿ/ ಎಸ್.ಟಿ ಗಳಿಗೆ ಪೂರ್ಣ ಪ್ರಮಾಣದ ನೌಕರಿಯನ್ನಾಗಲೀ, ಶಿಕ್ಷಣವನ್ನಾಗಲೀ ನೀಡಿಲ್ಲ. ಓ.ಬಿ.ಸಿ ಗಳಿಗಂತೂ 1992 ತನಕ ಮೀಸಲಾತಿಯನ್ನು ಘೋಷಿಸಿಲ್ಲ ಇದೀಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಈ ಸರ್ಕಾರಗಳು ಸರ್ಕಾರಿ ಇಲಾಖೆ ಮತ್ತು ಉದ್ದಿಮೆ ಹಾಗೂ ಹುದ್ದೆಗಳನ್ನು ಕಡಿತಗೊಳಿಸುತ್ತಿವೆ. ಶಿಕ್ಷಣ ಸಂಸ್ಥೆಗಳನ್ನು ಸಹ ಖಾಸಗಿಯವರಿಗೆ ಮಾರಾಟ ಮಾಡುತ್ತಿವೆ. ಇದರಿಂದಾಗ ಬಹುಜನ ಸಮಾಜದಲ್ಲಿ ನಿರುದ್ಯೋಗ , ಬಡತನ ಹೆಚ್ಚುತ್ತಿದೆ. ಶೋಷಣೆಯೂ ಹೆಚ್ಚುತ್ತಿದೆ. ವಿದ್ಯಾವಂತ ಯುವಜನಾಂಗದಲ್ಲಿ ಹತಾಶೆ ಹೆಚ್ಚಾಗಿ ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರು ಸಮಾಜ ವಿರೋಧಿಗಳ ಕೈಗೊಂಬೆಯಾಗುತ್ತಿದ್ದಾರೆ.

ಇಂತಹ ದುರಂತ ಸಮಯ ಸನ್ನಿವೇಶದಲ್ಲಿ ಬಹುಜನ ಸಮಾಜ ಪಾರ್ಟಿ ರಾಜ್ಯ ಸಮಿತಿಯು ದಿನಾಂಕ: 6-7-2003 ರಂದು ಭಾನುವಾರ ಬಸವನಗುಡಿ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ''ಮೀಸಲಾತಿ ಅಂದೋಲನ ಶತಮಾನೋತ್ಸವ'' ದ ಅಂಗವಾಗಿ ''ಮೀಸಲಾತಿ ಭರ್ತಿಮಾಡಿ ಇಲ್ಲವೇ ಕುರ್ಚಿ ಖಾಲಿ ಮಾಡಿ'' ಎಂಬ ಬೃಹತ್. ರ್‍ಯಾಲಿಯನ್ನು ಹಮ್ಮಿಕೊಂಡಿತ್ತು ಸುಮಾರು 27 ಜಿಲ್ಲೆಗಳಿಂದ ಪ್ರತಿಭಟನಕಾರರು ಆಗಮಿಸಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ನಗರ ಜಿಲ್ಲೆಯಿಂದಲೇ ಸುಮಾರು 50 ಸಾವಿರಕ್ಕೂ ಹೆಚ್ಚು ಪ್ರತಿಭಟನಕಾರರು ಆಗಮಸಿದ್ದರು.

..11ನೇ ಪುಟಕ್ಕೆ

ಕನ್ನಡಪ್ರಭ

ಬುಧವಾರ, 9 ಜುಲೈ 2003

ಕನ್ನಡಿಗರು ಹೃದಯವಂತರು: ಎಚ್.ಟಿ. ಸಾಂಗ್ಲಿಯಾನ ಪ್ರಶಂಸೆ

ಕನ್ನಡಪ್ರಭ ವಾರ್ತೆ, ಬೆಂಗಳೂರು, ಜು.8

'ಜೀವನದಲ್ಲಿ ನಾನು ಕಂಡಿರುವ ಹೃದಯವಂತಿಕೆಯ ಜನರೆಂದರೆ ಕನ್ನಡಿಗರು, ಕರ್ನಾಟಕದವರು. ಈ ಹೊಗಳಿಕೆಗೆ ನಿಜವಾಗಿಯೂ ಇವರು ಅರ್ಹರು'.

ನಿವೃತ್ತ ಪೋಲೀಸ್ ಮಹಾನಿರ್ದೇಶಕ ಎಚ್.ಟಿ.ಸಾಂಗ್ಲಿಯಾನರ ಅವರ ಭಾವುಕ ನುಡಿಗಳಿವು.


ನಗರದ ಶೇಷಾದ್ರಿಪುರದ ಸಂಜೆ ಪದವಿ ಕಾಲೇಜಿನ ಪ್ರಥಮ ಪದವಿ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಸಾಂಗ್ಲಿಯಾನ ಅವರು, ಕ್ರಮಬದ್ಧವಾಗಿ ಅಧ್ಯಯನ ನಡೆಸಿ ವಿದ್ಯಾರ್ಥಿ ಜೀವನವನ್ನು ರೂಪಿಸಬೇಕು ಎಂದು ಕರೆ ನೀಡಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಕೆ.ಎಂ.ನಂಜಪ್ಪ,ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣಪ್ಪ ಮತ್ತು ಸಂಜೆ ಕಾಲೇಜಿನ ಆಡಳಿತ ಪರಿಷತ್ತಿನ ಅಧ್ಯಕ್ಷ ಎಂ.ಎಸ್.ನಟರಾಜ್ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಪುಟ ೬ ಈ ಸಂಜೆ ಬುಧವಾರ ೯-೭-೨೦೦೩



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಥಮ ಪದವಿ ತರಗತಿಗಳ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಎಚ್.ಟಿ.ಸಾಂಗ್ಲಿಯಾನ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ದತ್ತಿಯ ಅಧ್ಯಕ್ಷ ಕೆ.ಎಂ.ನಂಜಪ್ಪ, ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ, ಸಂಜೆ ಕಾಲೇಜಿನ ಆಡಳಿತ ಪರಿಷತ್ತಿನ ಅಧ್ಯಕ್ಷ ಎಂ.ಎಸ್.ನಟರಾಜ್ ಉಪಸ್ಥಿತರಿದ್ದರು.



ಇತ್ತೀಚೆಗೆ ನಡೆದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಥಮ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಚ್.ಟಿ. ಸಾಂಗ್ಲಿಯಾನ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಎಸ್.ಜಿ. ಮಣ್ಣೂರ್, ಅಧ್ಯಕ್ಷ ಕೆ.ಎಂ. ನಂಜಪ್ಪ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಜೀವನದಲ್ಲಿ ಶಿಸ್ತು ಪಾಲಿಸಿ: ವಿದ್ಯಾರ್ಥಿಗಳಿಗೆ ಕರೆ

ಬೆಂಗಳೂರು, ಜು. ೯- ಇಂದಿನ ಯುವ ಜನಾಂಗವು ಕ್ರಮಬದ್ಧವಾದ ಅಭ್ಯಾಸದೊಂದಿಗೆ ವಿದ್ಯಾರ್ಥಿ ಜೀವನವನ್ನು ರೂಪಿಸಿಕೊಳ್ಳುತ್ತಾ ಶ್ರದ್ಧೆ, ಆಸಕ್ತಿಗಳಿಂದ ಸಾಗಿದಾಗ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಾಗಬಹುದೆಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಬಂಧಿಖಾನೆ) ಎಚ್.ಟಿ. ಸಾಂಗ್ಲಿಯಾನ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅವರು ಇತ್ತೀಚೆಗೆ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಥಮ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಬೆಳಗಿನ ವೇಳೆ ಕೆಲಸ ಮಾಡಿ ಸಂಜೆ ಓದಲು ಬರುವ ನಿಮ್ಮನ್ನು ಕಂಡರೆ ಬಹಳ ಸಂತೋಷವಾಗುವುದರ ಜತೆಗೆ ಗೌರವ ಮೂಡುತ್ತದೆ. ನಾನೂ ಬಡ ಕುಟುಂಬದಿಂದ ಬಂದವನಾದ್ದರಿಂದ ಜೀವನದ ಕಷ್ಟಸುಖಗಳನ್ನೆಲ್ಲಾ ಅರಿತಿದ್ದೇನೆ ಎಂದರು.

ಸಂಜೆ ಪದವಿ ಕಾಲೇಜಿನ ವತಿಯಿಂದ ಸಾಂಗ್ಲೀಯಾನಾರವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಕೆ.ಎಂ. ನಂಜಪ್ಪ, ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಸಂಜೆ ಕಾಲೇಜಿನ ಆಡಳಿತ ಪರಿಷತ್ತಿನ ಅಧ್ಯಕ್ಷ ಎಂ.ಎಸ್. ನಟರಾಜ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.


ಆ ಕೃಷ್ಣನನ್ನು ಮೀರಿಸಿದ ಈ ಕೃಷ್ಣ!

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಜು. ೯- ರಾಜ್ಯದಲ್ಲಿನ ವಿರೋಧ ಪಕ್ಷಗಳನ್ನು ಒಡೆಯಲು ಕುತಂತ್ರ ಮಾಡುವುದರಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮಹಾಭಾರತದ ಕೃಷ್ಣನನ್ನು ಮೀರಿಸಿದ್ದಾರೆ ಎಂದು ಸಂಯುಕ್ತ ಜನತಾದಳದ ಮುಖಂಡ ಪಿ.ಜಿ.ಆರ್. ಸಿಂಧ್ಯಾ ಕಟುವಾಗಿ ಟೀಕಿಸಿದರು.

ಸಂಯುಕ್ತ ಯುವ ಜನತಾದಳದ ಕಾರ್ಯಕರ್ತರ ಸಭೆ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ವಿರೋಧ ಪಕ್ಷಗಳನ್ನು ಒಡೆಯುವಲ್ಲಿ ಕೃಷ್ಣ ನಿಸ್ಸೀಮರು, ಬಿಜೆಪಿ ಒಡೆದರು, ದೇವೇಗೌಡರ ಪಕ್ಷ ಒಡೆದರು ಮತ್ತು ಪಕ್ಷೇತರರ ಜತೆ ಸೇರಿ ಅತಂತ್ರ ಸ್ಥಿತಿ ನಿರ್ಮಿಸಿದರೆಂದು ಅವರು ಲೇವಡಿ




ಉಪನ್ಯಾಸಕರಿಗೆ ಡಾಕ್ಟರೇಟ್

ಬೆಂಗಳೂರು, ಜು. ೯- ನಗರದ ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಕಾಮಗಾರಿ ವಿಭಾಗದ ಉಪನ್ಯಾಸಕ ಕೆ.ವಿ. ಲೋಕೇಶ್ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯ ಪಿ.ಎಚ್.ಡಿ ಪದವಿ ಲಭಿಸಿದೆ.

ಲೋಕೇಶ್ ಅವರು ಡಾ.ಬಿ. ಶಿವಲಿಂಗಯ್ಯನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ 'ಕರ್ನಾಟಕದ ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ನೀರಿನ ಮೂಲಕ ಮಲಿನ ವಸ್ತುಗಳು ಅಂತರ್ಜಲ ಸೇರುತ್ತಿರುವ ಸಮಸ್ಯೆಗಳು ಮತ್ತು ಅದನ್ನು ತಡೆಗಟ್ಟುವುದು ಹೇಗೆ' ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ಸಂದಿದೆ.



ವಿಶ್ವ ರೆಡ್ ಕ್ರಾಸ್ ದಿನಾಚರಣೆ ಅಂಗವಾಗಿ 'ಆರೋಗ್ಯ ಶಿಬಿರ' ಏರ್ಪಡಿಸಿದ ವರ್ತೂರಿನ ಸ್ವಾಮಿ ವಿವೇಕಾನಂದ ಸೇವಾ ಸಮಿತಿಯ ಕಾರ್ಯದರ್ಶಿ ಸಿ.ಮಹೇಂದ್ರ ಅವರಿಗೆ ರಾಜ್ಯಪಾಲ ಟಿ.ಎನ್. ಚತುರ್ವೇದಿ ಟ್ರೋಫಿ ನೀಡಿ ಗೌರವಿಸಿದರು. ಆರ್ಥಿಕ ತಜ್ಞ ಡಾ. ಡಿ.ಎಂ. ನಂಜುಂಡಪ್ಪ, ಜಿಲ್ಲಾಧಿಕಾರಿ ಡಾ. ಅಶ್ವಥ್ ಮತ್ತಿತರರು ಹಾಜರಿದ್ದರು.



ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಘಟಿಕೋತ್ಸವ ಸಮಾರಂಭವನ್ನು ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಉದ್ಘಾಟಿಸುತ್ತಿರುವುದು.

ರಾಜ್ಯಮಟ್ಟದ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು, ಮೇ 12– ರಾಜ್ಯ ಮಟ್ಟದ ವಿವಿಧ ಸಂಘ–ಸಂಸ್ಥೆಗಳಿಗೆ ಈ ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ :

ಕರ್ನಾಟಕ ಸ್ಟೇಟ್ ಜುಡೀಶಿಯಲ್ ಆಫೀಸರ್ಸ್ ಅಸೋಸಿಯೇಷನ್ : ಕೆ.ಎನ್.ಕೇಶವ ನಾರಾಯಣ (ಅಧ್ಯಕ್ಷ), ಎಚ್.ಎಂ.ಭರತೇಶ (ಉಪಾಧ್ಯಕ್ಷ), ಸಿ.ವಿ.ಮರಗೂರ್ (ಕಾರ್ಯದರ್ಶಿ), ಶ್ರೀಕಾಂತ ಶಿಂಪಿ (ಜಂಟಿ ಕಾರ್ಯದರ್ಶಿ), ಬಿ.ವಿ.ಪಾಟೀಲ (ಖಜಾಂಚಿ).

ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘ: ಜಿ.ಪ್ರಕಾಶ್ (ಅಧ್ಯಕ್ಷ), ಕೆ.ಬಿ.ರುದ್ರಪ್ಪ (ಉಪಾಧ್ಯಕ್ಷ) ಸಿ.ಎಂ.ಪಾಟೀಲ (ಕಾರ್ಯದರ್ಶಿ).

ಕರ್ನಾಟಕ ಪ್ರೈವೇಟ್ ಪೋಸ್ಟ್ ಗ್ರಾಜ್ಯುಯೇಟ್ ಕಾಲೇಜಿಸ್ ಅಸೋಸಿಯೇಷನ್ : ಸಿ.ಎನ್.ಕೃಷ್ಣಾರೆಡ್ಡಿ (ಅಧ್ಯಕ್ಷ), ಬಿ.ಜಿ.ಮಹೇಶ (ಉಪಾಧ್ಯಕ್ಷ), ಡಬ್ಲ್ಯು.ಪಿ.ಕೃಷ್ಣ (ಕಾರ್ಯದರ್ಶಿ), ಪ್ರೊ.ಎಂ.ಪ್ರಕಾಶ್ (ಖಜಾಂಚಿ).

ಕರ್ನಾಟಕ ಲೋಕಾಯುಕ್ತರ ನೌಕರರ ಸಂಘ : ಕೆ.ಚಂದ್ರಶೇಖರ್ (ಅಧ್ಯಕ್ಷ), ಬಿ.ಎಸ್.ಶ್ರೀನಿವಾಸ್ ಮತ್ತು ಕೆ.ಎನ್.ಕರೇಗೌಡ (ಉಪಾಧ್ಯಕ್ಷರು), ಎಂ.ಪಿ.ಮೋಹನಕುಮಾರ್ (ಪ್ರಧಾನ ಕಾರ್ಯದರ್ಶಿ), ಎಚ್.ಟಿ.ತಿರುಮಲಯ್ಯ (ಖಜಾಂಚಿ), ಎಂ.ಟಿ.ಸತೀಶ್ (ಜಂಟಿ ಕಾರ್ಯದರ್ಶಿ), ಎನ್.ಮಲ್ಲಪ್ಪ (ಆಂತರಿಕ ಲೆಕ್ಕ ಪರಿಶೋಧಕ), ವಿ.ಜಿ.ನಾಗರತ್ನ (ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯದರ್ಶಿ), ಪಳನಿ (ಸಂಘಟನಾ ಕಾರ್ಯದರ್ಶಿ).

ಕರ್ನಾಟಕ ರಾಜ್ಯ ಮೋಟಾರು ವಾಹನ ಇಲಾಖಾ ನೌಕರರ ಸಂಘ : ಭೀಮಸೇನ ಗುಡಿ (ಅಧ್ಯಕ್ಷ), ಗೋಪಾಲರಾವ್ (ಉಪಾಧ್ಯಕ್ಷ), ಬಿ.ವಿಜಯಕುಮಾರ್ (ಪ್ರಧಾನ ಕಾರ್ಯದರ್ಶಿ), ಧರ್ಮೇಗೌಡ (ಜಂಟಿ ಕಾರ್ಯದರ್ಶಿ), ಎಚ್.ಎಲ್.ವೇಣುಗೋಪಾಲ್ (ಸಂಘಟನಾ ಕಾರ್ಯದರ್ಶಿ), ಎಂ.ಕೃಷ್ಣ (ಖಜಾಂಚಿ).

ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ : ಡಿ.ವೈ.ರಡ್ಡೇರ (ಅಧ್ಯಕ್ಷ), ಸಿ.ಪಿ.ಬ್ರಹ್ಮನಪಾಡ್ (ಉಪಾಧ್ಯಕ್ಷ), ಡಾ.ಎಂ.ಮಧುಮತಿ (ಉಪಾಧ್ಯಕ್ಷೆ), ಎ.ವಿ.ವೆಂಕಟರಾಮರೆಡ್ಡಿ (ಕಾರ್ಯದರ್ಶಿ), ವಿ.ಸ್ವಾಂಬಾಜಿರಾವ್, ಜೆ.ಸಿ.ರಾಧಾ (ಜಂಟಿ ಕಾರ್ಯದರ್ಶಿಗಳು), ಬಿ.ಚಂದ್ರಶೇಖರ್ (ಖಜಾಂಚಿ). ವಲಯ ಅಧ್ಯಕ್ಷರು : ಬಿ.ವಿ.ಕೃಷ್ಣಪ್ಪ (ಬೆಂಗಳೂರು) ಕೆ.ಎಸ್.ರಾಮಪ್ರಸಾದ್ (ಮೈಸೂರು). ಕೆ.ಪಿ.ಸುಬ್ರಹ್ಮಣ್ಯ ಭಟ್ (ಮಂಗಳೂರು) ಎಸ್.ನಂಜಾನಾಯ್ಕ (ಶಿವಮೊಗ್ಗ).

ರಾಷ್ಟ್ರೀಯ ಜನತಾದಳ : ಪಕ್ಷದ ಮಹಿಳಾ ವಿಭಾಗದ ರಾಜ್ಯ ಘಟಕದ ಅಧ್ಯಕ್ಷೆಯಾಗಿ ರೂಪಾ ರಾಜೇಂದ್ರ ಜೈನ್ ಅವರನ್ನು ನೇಮಿಸಲಾಗಿದೆ ಎಂದು ಆರ್.ಜೆ.ಡಿ ರಾಜ್ಯ ಸಂಚಾಲಕ ಎಂ.ಕೃಷ್ಣಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಯುವ ಜನತಾದಳ (ಎಸ್) : ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸಿ.ಎಚ್.ಗೌಡರ (ಜಂಗಮುರಾಳ) ಅವರನ್ನು ನೇಮಿಸಲಾಗಿದೆ ಎಂದು ಅಧ್ಯಕ್ಷ ಗುರುರಾಜ ಹುಣಸೀಮರದ್ ತಿಳಿಸಿದ್ದಾರೆ.

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ : ಸಮಿತಿಯ ರಾಜ್ಯ ಕಾರ್ಯದರ್ಶಿಯಾಗಿ ಹೊಸಪೇಟೆಯ ಫಹೀಂಬಾಷಾ ಅಬ್ದುಲ್ ಗಫೂರ್ ಮೋಮಿನ್ ಅವರನ್ನು ನೇಮಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ದಿನೇಶ ಗುಂಡುರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಖಿಲ ಭಾರತ ಪಾರಂಪರಿಕ ವೈದ್ಯ ಪರಿಷತ್ತು : ಪಂಡಿತ ಎಸ್.ಬಾಷಾಜಾನ್ (ಸಭಾಧ್ಯಕ್ಷ), ಎನ್.ಆರ್.ತೇರದಾಳ (ಅಧ್ಯಕ್ಷ), ಎಂ.ಎಂ.ಶೋಯೆಬ್ (ಪ್ರಧಾನ ಕಾರ್ಯದರ್ಶಿ).

ಅಖಿಲ ಕರ್ನಾಟಕ ಆನ್‌ಲೈನ್ ಲಾಟರಿ ಲಾಟರಿ ಮಾರಾಟಗಾರರ ಕ್ಷೇಮಾಭಿವೃದ್ಧಿ ಸಂಘ : ಕೆ.ಗಂಗಾಧರ (ಅಧ್ಯಕ್ಷ), ಜಿ.ಪುರುಷೋತ್ತಮ, ಬಿ.ಭಾಸ್ಕರ ಶೆಟ್ಟಿ ಮತ್ತು ಎಸ್.ಶೇಷಾದ್ರಿ (ಉಪಾಧ್ಯಕ್ಷರು), ಎನ್.ಗೋಪಾಲರಾವ್ (ಕಾರ್ಯದರ್ಶಿ), ಜಿ.ರಮೇಶ್, ಆರ್.ವಡಿವೇಲನ್ (ಉಪಕಾರ್ಯದರ್ಶಿಗಳು), ಎಚ್.ಆರ್.ರಂಗೇಶ್ (ಸಂಘಟನಾ ಕಾರ್ಯದರ್ಶಿಗಳು), ಕೆ.ಎಲ್.ಸುರೇಶ್ (ಖಜಾಂಚಿ).

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ : ಸೇವಾದಳದ ಮುಖ್ಯ ಸಂಘಟಕರಾಗಿ ಧಾರವಾಡದ ಶಂಕರಗೌಡ ಎಚ್.ಪಾಟೀಲ ಅವರನ್ನು ನೇಮಿಸಲಾಗಿದೆ.

ಈ ಹುದ್ದೆಯಲ್ಲಿ ಇದ್ದ ಬಿ.ಲಕ್ಕೇಗೌಡರು ಈಚೆಗೆ ನಿಧನರಾದ ನಂತರ ತೆರವಾಗಿದ್ದ ಸ್ಥಾನದಲ್ಲಿ ಪಾಟೀಲರನ್ನು ನೇಮಿಸಲಾಗಿದೆ ಎಂದು ಅಖಿಲ ಭಾರತ ಕಾಂಗ್ರೆಸ್ ಸೇವಾದಳದ ಮುಖ್ಯ ಸಂಘಟಕರಾದ ಪ್ರಹ್ಲಾದ ಯಾದವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ರೈತ ಮತ್ತು ಕಾರ್ಮಿಕ ವಿಭಾಗ: ಮೈಸೂರು ಗ್ರಾಮಾಂತರ ಜಿಲ್ಲಾ ರೈತ ಮತ್ತು ಕಾರ್ಮಿಕ ವಿಭಾಗದ ಅಧ್ಯಕ್ಷರಾಗಿ ತಲಕಾಡು ಶಿವಕುಮಾರ್ ಅವರನ್ನು ನೇಮಿಸಿ ರಾಜ್ಯ ವಿಭಾಗದ ಅಧ್ಯಕ್ಷರಾದ ಮಾಜಿ ಸಚಿವ ಮಾಲಿಕಯ್ಯ ಗುತ್ತೇದಾರ್ ತಿಳಿಸಿದ್ದಾರೆ.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಕರ್ನಾಟಕ ಶಾಖೆ) : ಕೆ.ಅಪ್ಪಿರೆಡ್ಡಿ (ಅಧ್ಯಕ್ಷ), ಕೆ.ಎಲ್.ಮೋಹನರಾವ್ (ಕಾರಾಧ್ಯಕ್ಷ), ಕೆ.ಸುಬ್ರಮಣಿ (ಉಪಾಧ್ಯಕ್ಷ), ಕೆ.ಎಸ್.ಸೋಮೇಶ್ವರ ರೆಡ್ಡಿ (ಕಾರ್ಯದರ್ಶಿ), ಆರ್.ಜೆ.ಶ್ರೀನಿವಾಸ್ (ಜಂಟಿ ಕಾರ್ಯದರ್ಶಿ), ಎ.ಚಾಮರಾಜರೆಡ್ಡಿ (ಖಜಾಂಚಿ) ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಜಾವಾಣಿ, ಬೆಂಗಳೂರು - 13.5.2003

ಅಂಗವಿಕಲರ ನೆರವಿಗೆ ರೆಡ್‌ಕ್ರಾಸ್ ಕ್ರಿಯಾಯೋಜನೆ

ಬೆಂಗಳೂರು, ಮೇ 8– ಅಂಗವಿಕಲರಿಗೆ ನೆರವು ನೀಡುವ ಉದ್ದೇಶದಿಂದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕ್ರಿಯಾ ಯೋಜನೆಯೊಂದನ್ನು ರೂಪಿಸಿದೆ. ಮೂರು ವರ್ಷಗಳಲ್ಲಿ ಇದನ್ನು ಹಂತಹಂತವಾಗಿ ಜಾರಿಗೊಳಿಸಲಾಗುವುದು ಎಂದು ಸಂಸ್ಥೆಯ ರಾಜ್ಯ ಘಟಕದ ಉಪಾಧ್ಯಕ್ಷ ಡಾ.ಡಿ.ಎಂ. ನಂಜುಂಡಪ್ಪ ಇಂದು ಇಲ್ಲಿ ತಿಳಿಸಿದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜ್ಯ ಘಟಕ ಆಯೋಜಿಸಿದ್ದ 'ಜಾಗತಿಕ ರೆಡ್‌ಕ್ರಾಸ್ ದಿನಚಾರಣೆ' ಸಮಾರಂಭದಲ್ಲಿ ಅವರು ಈ ವಿಷಯ ತಿಳಿಸಿದರು.

ದೇಶದಲ್ಲಿ ಶೇ 10ರಷ್ಟು ಜನ ಅಂಗವಿಕಲರಿದ್ದಾರೆ. ಉಳಿದ ಶೇ 90ರಷ್ಟು ಜನ ಸಹಕಾರ ನೀಡಿದರೆ ಇವರನ್ನೂ ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯ. ಅಂಗವಿಕಲರ ಬಗ್ಗೆ ತಾತ್ಸಾರ ಭಾವನೆ ತೋರದೇ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಬೇಕಿದೆ ಎಂದರು.

ಜಾಗೃತಿ ಮೂಡಿಸಲು ಕರೆ: ಸುಳ್ಳು ಮಾಹಿತಿಯಿಂದ ಏಯ್ಡ್ಸ್ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆಗಳು ಮನೆ ಮಾಡಿವೆ. ಹೀಗಾಗಿ ಏಯ್ಡ್ಸ್ ರೋಗಿಗಳನ್ನು ಅಮಾನವೀಯ ದೃಷ್ಟಿಯಿಂದ ನೋಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸರಿಯಾದ ತಿಳಿವಳಿಕೆ ನೀಡುವ ಕಾರ್ಯವನ್ನು ವಿದ್ಯಾವಂತರು ಮತ್ತು



ಅತಿ ಹೆಚ್ಚು ವ್ಯಕ್ತಿಗಳಿಂದ ರಕ್ತದಾನ ಮಾಡಿಸಿದ ಸಂಸ್ಥೆಗೆ ರೆಡ್‌ಕ್ರಾಸ್ ಸಂಸ್ಥೆ ನೀಡುವ ಯೋಗಿ ನಾರಾಯಣ ಎಜ್ಯುಕೇಷನ್ ಟ್ರಸ್ಟ್ ಪರ್ಯಾಯ ಪಾರಿತೋಷಕವು ಬೆಂಗಳೂರು ಮಹಾನಗರ ಲಯನ್ಸ್ ಕ್ಲಬ್‌ಗೆ ಲಭಿಸಿದೆ. ಬೆಂಗಳೂರಿನಲ್ಲಿ ಗುರುವಾರ ನಡೆದ 'ಜಾಗತಿಕ ರೆಡ್‌ಕ್ರಾಸ್ ದಿನಾಚರಣೆ' ಸಮಾರಂಭದಲ್ಲಿ ಸಂಸ್ಥೆಯ ಪರವಾಗಿ ರಾಜು ಚಂದ್ರಶೇಖರ ಅವರು ರಾಜ್ಯಪಾಲ ಟಿ.ಎನ್. ಚತುರ್ವೇದಿ ಅವರಿಂದ ಪಾರಿತೋಷಕ ಸ್ವೀಕರಿಸಿದರು. ರೆಡ್‌ಕ್ರಾಸ್ ಸಂಸ್ಥೆಯ ಡಬ್ಲ್ಯೂ.ಪಿ. ಕೃಷ್ಣ, ಕರ್ನಾಟಕ ಘಟಕದ ಉಪಾಧ್ಯಕ್ಷ ಡಾ.ಡಿ.ಎಂ. ನಂಜುಂಡಪ್ಪ ಮತ್ತು ಬೆಂಗಳೂರು ನಗರ ಜಿಲ್ಲಾ ಜಿಲ್ಲಾಧಿಕಾರಿ ಡಾ.ಡಿ.ಎಸ್. ಅಶ್ವತ್ಥ್ ಉಪಸ್ಥಿತರಿದ್ದರು.

ಸ್ವಯಂ ಸೇವಾ ಸಂಸ್ಥೆಗಳು ಮಾಡಬೇಕು ಎಂದು ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಟಿ.ಎನ್. ಚತುರ್ವೇದಿ ಕರೆ ನೀಡಿದರು.

ಸ್ವಯಂ ಸೇವಾ ಸಂಸ್ಥೆಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದಾಗ ಅಂಥ ಸಂಸ್ಥೆಗಳ ಬಗ್ಗೆ ಜನರಲ್ಲಿ ನಂಬಿಕೆ ಮೂಡಿಸಲು ಸಾಧ್ಯ. ಯಾವುದೇ ಸಂಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ವಿಶ್ವಾಸ ಉಂಟಾದರೆ ಜನತೆ ತಾವಾಗಿಯೇ ನೆರವು ನೀಡಲು ಮುಂದೆ ಬರುತ್ತಾರೆ ಎಂದು ಅವರು ಹೇಳಿದರು.

2001 ಮತ್ತು 2002ನೇ ಸಾಲಿನಲ್ಲಿ ಅತಿಹೆಚ್ಚು ರಕ್ತದಾನ ಮಾಡಿಸಿದ 31 ಸಂಸ್ಥೆಗಳಿಗೆ ಸಮಾರಂಭದಲ್ಲಿ ಪರ್ಯಾಯ ಪಾರಿತೋಷಕಗಳನ್ನು ಪ್ರದಾನ ಮಾಡಲಾಯಿತು. ಆ ಪೈಕಿ ರಾಜ್ಯಪಾಲರ ಹೆಸರಿನಲ್ಲಿ ನೀಡಲಾಗುವ ಪಾರಿತೋಷಕವನ್ನು ಜಯನಗರ ಲಯನ್ಸ್ ಕ್ಲಬ್ ಮತ್ತು ಮುಖ್ಯಮಂತ್ರಿಗಳ ಹೆಸರಿನಲ್ಲಿ ಕೊಡಮಾಡುವ ಪಾರಿತೋಷಕವನ್ನು ಬಸವನಗುಡಿಯ ಎಲ್ಬಿನ್ ಸೊಸೈಟಿಗಳು ಪಡೆದುಕೊಂಡವು.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಹತ್ತು ಮಂದಿ ಅಂಗವಿಕಲರಿಗೆ ತ್ರಿಚಕ್ರ ಸೈಕಲ್ ಮತ್ತು ಅಂಧರಿಗೆ ಬ್ರೈಲ್ ಕೈ ಗಡಿಯಾರಗಳನ್ನು ರಾಜ್ಯಪಾಲರು ವಿತರಿಸಿದರು. ಬೆಂಗಳೂರು ನಗರ ಜಿಲ್ಲಾ ಜಿಲ್ಲಾಧಿಕಾರಿ ಡಾ.ಡಿ.ಎಸ್. ಅಶ್ವತ್ಥ್ ಸ್ವಾಗತಿಸಿದರು. ಗ್ರಾಮಾಂತರ ಜಿಲ್ಲಾ ಜಿಲ್ಲಾಧಿಕಾರಿ ಜಿ.ಎಸ್. ನಾರಾಯಣ ಸ್ವಾಮಿ ವಂದಿಸಿದರು.

'ಏಯ್ಡ್ಸ್ ಕುರಿತ ಸತ್ಯವನ್ನು ಜನತೆಗೆ ತಲುಪಿಸಿ' ಎನ್ನುವುದು ರೆಡ್‌ಕ್ರಾಸ್ ಸಂಸ್ಥೆಯ 2003ನೇ ಸಾಲಿನ ಘೋಷವಾಕ್ಯವಾಗಿದೆ.

ಗುರುವಾರ
ಮೇ ೮, 2003

ಶೇಷಾದ್ರಿಪುರಂ ಕಾಲೇಜಿನಲ್ಲಿ ಘಟಿಕೋತ್ಸವ-2003

ಬೆಂಗಳೂರು, ಮೇ 7: ಅದಮ್ಯ ಶಕ್ತಿ, ಚೈತನ್ಯಗಳ ಸಂಗ್ರಹ ಮನುಷ್ಯನಲ್ಲಿದೆ, ಇದನ್ನು ಸ್ವಹಿತದ ಜೊತೆಗೆ ಲೋಕದ ಹಿತಕ್ಕೂ ಬಳಸಿಕೊಳ್ಳಬೇಕು. ಇಂದಿನ ಯುವಜನಾಂಗ ಗುರುಹಿರಿಯರನ್ನು, ಆಡುವ ಭಾಷೆಯನ್ನು, ನೆಲವನ್ನು ಹಾಗೂ ಪಾಲಿಸುವ ಸಂಸ್ಕೃತಿಯನ್ನು ಗೌರವಿಸುವುದನ್ನು ಕಲಿಯಬೇಕು ಎಂದು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತಿಯವರು ತಿಳಿಸಿದರು.

ಅವರು ಇತ್ತೀಚೆಗೆ ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಕಾಲೇಜಿನ ಘಟಿಕೋತ್ಸವ-2003 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಕೆ.ಎಂ.ನಂಜಪ್ಪ ಅವರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ, ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ, ಆಡಳಿತ ಸಲಹಾ ಪರಿಷತ್ತಿನ ಎಂ.ಎಸ್. ನಟರಾಜ್ ಭಾಗವಹಿಸಿದ್ದರು. ಪ್ರಾಂಶುಪಾಲರಾದ ಪ್ರೊ. ಎಸ್.ಜಿ.ಮಣ್ಣೂರ ಸ್ವಾಗತಿಸಿದರು.



ಈಚೆಗೆ ನಡೆದ ಶೇಷಾದ್ರಿಪುರಂ ಸಂಜೆ ಕಾಲೇಜಿನ ಘಟಿಕೋತ್ಸವ-2003 ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಕೆ.ಎ. ನಂಜಪ್ಪ, ಸ್ವಾಮಿ ವಿವೇಕಾನಂದ ಮತ್ತಿತರರು ಪಾಲ್ಗೊಂಡಿದ್ದರು.

17/03/2003.

'ಇಂದಿನ ಸಮಾಜಕ್ಕೆ ಆದರ್ಶ ಶಿಕ್ಷಕರು ಬೇಕಾಗಿದ್ದಾರೆ'



ತುಮಕೂರು

ಇಂದಿನ ಸಮಾಜಕ್ಕೆ ಆದರ್ಶ ಶಿಕ್ಷಕರ ಅಗತ್ಯವಿದೆ ಎಂದು ತುಮಕೂರು ವಿವೇಕಾನಂದ ಆಶ್ರಮದ ಮುಖ್ಯಸ್ಥ ವೀರೇಶಾನಂದ ಸರಸ್ವತಿ ಸ್ವಾಮೀಜಿ ಅವರು ಅಭಿಪ್ರಾಯಪಟ್ಟರು.

ಇತ್ತೀಚೆಗೆ ತಮ್ಮ ಆಶ್ರಮದಲ್ಲಿ ನಡೆದ 'ಶಿಕ್ಷಣ ಅವಲೋಕನ' ಎಂಬ ವಿವೇಕ ಚಿಂತನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಿಗೆ ಪೂರಕವಾದ ಶಿಕ್ಷಣ ದೊರಕುತ್ತಿಲ್ಲ ಎಂದು ವಿಷಾದಿಸಿದ ಅವರು, ಮಕ್ಕಳು ಸಮಾಜದಲ್ಲಿ ಹೇಗೆ ಬದುಕಬೇಕು ಎನ್ನುವ ಶಿಕ್ಷಣವನ್ನು ನೀಡಬೇಕು ಎಂದರು.

'ದುಷ್ಟನಿಗೆ ಸಮಾಜದಲ್ಲಿ ಸ್ಥಾನವಿದೆ. ಆದರೆ ಆತ್ಮವಂಚಕನಿಗೆ ಮಾತ್ರ ಸ್ಥಾನವಿಲ್ಲ' ಎಂಬ ವಿವೇಕಾನಂದರ ವಾಣಿಯನ್ನು ನೆನಪಿಸಿಕೊಂಡ ಅವರು, ದೇವರಿಗಿಂತ ಮನುಷ್ಯ ಸೃಷ್ಟಿ ಅದ್ಭುತ. ಮನುಷ್ಯ ಇಂದು ಅದ್ಭುತವಾಗಿ ಬೆಳೆದಿದ್ದಾನೆ ಎಂದು ಅವರು ಹೇಳಿದರು.

ವೀರೇಶಾನಂದ ಸರಸ್ವತಿ ಸ್ವಾಮೀಜಿ ಅಭಿಮತ


ಶಿಕ್ಷಣ ಕ್ಷೇತ್ರದಲ್ಲಿ ಗುರುವಿನ ಪಾತ್ರ ಮಹತ್ವದ್ದು. ಇಲ್ಲಿ ಗುರು ದೇವರ ಸಾನಿಧ್ಯ ತೋರಿಸುವ ವ್ಯಕ್ತಿ ಎಂದು ತಿಪಟೂರಿನ ಅಡವಪ್ಪ ಪ್ರಥಮ ದರ್ಜೆ ಕಾಲೇಜ್‌ನ ನಿವೃತ್ತ ಪ್ರಾಚಾರ್ಯರಾದ ಚನ್ನಬಸಪ್ಪ ತಿಳಿಸಿದರು.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಉದ್ಯೋಗದ ಭರವಸೆ ಇಲ್ಲ. ಗುರು ವೃಂದದಿಂದ ಆಧ್ಯಾತ್ಮಿಕ ಚಿಂತನೆಯನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದರು.

ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸುಮಾರು 150 ಶಿಕ್ಷಕರಿಗೆ ಏರ್ಪಡಿಸಿದ್ದ ಈ ಶಿಕ್ಷಣ ವಿವೇಕ ಚಿಂತನ ಕಾರ್ಯಕ್ರಮದಲ್ಲಿ ವೇದ ಘೋಷ, ಭಗವನ್ನಾಮ ಸಂಕೀರ್ತನೆ ಹಾಗೂ ಕಬೀರ ಬೀರಿದ ಬೆಳಕು ಮುಂತಾದ ಗಾನ ಪ್ರವಚನವನ್ನು ಸ್ವಾಮಿಜಿ ನಡೆಸಿಕೊಟ್ಟರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಅಧ್ಯಕ್ಷ ಕೆ.ಎಂ.ನಂಜಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ, ಎ.ಆರ್. ಶ್ರೀನಿವಾಸಯ್ಯ, ಬಿ.ಜಿ. ಶಿವಶಂಕರ್, ಅರಿಯೂರು ನರಸಿಂಹಮೂರ್ತಿ ಮೊದಲಾದವರು ಉಪಸ್ಥಿತರಿದ್ದರು.

Sanjevani dt. 16th March 2003.



ತುಮಕೂರಿನಲ್ಲಿ ಇತ್ತೀಚೆಗೆ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿ ಆಯೋಜಿಸಿದ್ದ ಶಿಕ್ಷಕರಿಗೆ ಶಿಕ್ಷಕ ಅವಲೋಕನ ಎಂಬ ವಿವೇಕ ಚಿಂತನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥ ವೀರೇಶಾನಂದ ಸರಸ್ವತಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವಾಧ್ಯಕ್ಷ ಪ್ರೊ. ಚನ್ನಬಸಪ್ಪ, ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಎ.ಆರ್. ಶ್ರೀನಿವಾಸಯ್ಯ ಹಾಗೂ ಆರ್. ಕೃಷ್ಣ.

ಗಂಗಾವಾಹಿನಿ ಕನ್ನಡ ದಿನಪತ್ರಿಕೆ

ಬುಧವಾರ 7 ಮೇ -2003


ಸದೃಢ ಸಮಾಜ ನಿರ್ಮಾಣದಲ್ಲಿ ಯುವಕರ ಪಾತ್ರ ಮಹತ್ವದ್ದು

ತುಮಕೂರು : ಮೇ : 6 : ಸದೃಢ ಸಮಾಜವನ್ನು ಕಟ್ಟುವಲ್ಲಿ ಯುವ ಜನತೆಯ ಪಾತ್ರ ಮಹತ್ವದ್ದು ಎಂದು ಪ.ನಾ.ಹಳ್ಳಿಯ ಶ್ರೀ ಗುರುಗುಂಡ ಬ್ರಹ್ಮೇಶ್ವರಮಠಾಧ್ಯಕ್ಷಶ್ರೀ ನಂಜಾವಧೂತ ಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರುಇತ್ತೀಚೆಗೆ ಬೆಂಗಳೂರಿನ ವಸಂತ ನಗರದ ಕುಂಚಿಟಿಗರ, ಸಾರ್ವಜನಿಕವಿದ್ಯಾರ್ಥಿ ನಿಲಯದಲ್ಲಿ ಶ್ರೀ ಗುರುಗುಂಡ ಬ್ರಹ್ಮೇಶ್ವರ ಯುವ



ವೇದಿಕೆ ವತಿಯಿಂದ ಶ್ರೀ ನಂಜಾವಧೂತರ 25 ನೇ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಸಮಾಜದ ಗಣ್ಯರಿಗೆ ಸನ್ಮಾನಿಸಿ ಮಾತನಾಡಿ , ಒಂದು ಸದೃಢಸಮಾಜದನಿರ್ಮಾಣ ಮಾಡುವಲ್ಲಿ ಯುವಜನತೆ ಮುಂದಾಗಬೇಕು ಎಂದು ತಿಳಿಸಿದ ಅವರು ಧೀಮಂತ ನಾಯಕರುಗಳಾದ ಬಿ.ಎಲ್.ಗೌಡ , ಮಾಲಿ ಮರಿಯಪ್ಪ ಅವರುಗಳ ಆದರ್ಶಗಳನ್ನುಶ್ರೀಗಳು ಶ್ಲಾಘಿಸಿದರು.ಡಬ್ಲ್ಯೂ ಪಿ.ಕೃಷ್ಣ ಮಾತ ನಾಡಿ , ಯುವಕರು ಸಮಾಜದಲ್ಲಿ ಮಾಡುವಂತಹ ಒಳ್ಳೆಯ ಕೆಲಸ ಕಾರ್ಯಗಳು ಸದಾ ನಮ್ಮನ್ನು ಹಿಂಬಾಲಿಸುತ್ತವೆ ಎಂದು ಅಭಿಪ್ರಾಯಪಟ್ಟ ಅವರು , ಈ ನಿಟ್ಟಿನಲ್ಲಿ ಯುವಜನತೆ ಉತ್ತಮ ಕಾರ್ಯ ಮಾಡುವಂತೆ ಕರೆ ನೀಡಿದರು. ಆರ್.ಮಂಜುನಾಥ್ ಸನ್ಮಾನ ಸ್ವೀಕರಿಸಿ ಮಾತನಾಡಿ , ಕುಂಚಿಟಿಗರ ಕ್ಷೇಮಾಭಿವೃದ್ಧಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಜಂಟಿ ಕಾರ್ಯದರ್ಶಿ ಎ.ಆರ್.ಶ್ರೀನಿವಾಸಯ್ಯ ಮಾತನಾಡಿ ,ಪ.ನಾ.ಹಳ್ಳಿ ಶ್ರೀಕ್ಷೇತ್ರದ ಸಾಧನೆಗಳನ್ನು ವಿವರಿಸಿದ ಅವರು ಯುವಜನತೆ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.ಕೆ.ಎಸ್.ವಿ.ಅಧ್ಯಕ್ಷ ಟಿ.ವಿ.ಮಾರುತಿ ರಾಜ್ಯ ಚುನಾವಣಾ ಆಯುಕ್ತ ಸಿ.ಚಿಕ್ಕಣ್ಣ ; ಕುಂಚಿಟಿಗರ ಕ್ಷೇಮಾಭಿವೃದ್ಧಿ ಮಂಡಳಿ ಅಧ್ಯಕ್ಷ ಎನ್.ಎಸ್.ಕೆಂಗರಾಮಯ್ಯ ಮತ್ತಿತರರು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕೆ.ಎಸ್.ವಿ. ಯ ಕಾರ್ಯದರ್ಶಿ ಎಚ್.ಚಂದ್ರಶೇಖರ್ ವಹಿಸಿದ್ದರು. ಕೆ.ಎಸ್.ವಿ. ಯ ವಿದ್ಯಾರ್ಥಿಗಳಿಂದ ಪ್ರಾರ್ಥನೆ ನೆರವೇರಿತು. ವೇದಿಕೆಯ ಅಧ್ಯಕ್ಷ ದೊಡ್ಡೇಗೌಡ ಸ್ವಾಗತಿಸಿ ದರು. ಶ್ರೀ ಗುರುಗುಂಡ ಬ್ರಹ್ಮೇಶ್ವರ ಯುವ ವೇದಿಕೆಯ ಖಚಾಂಚಿ ಬಸವಲಿಂಗಯ್ಯ ವಂದಿಸಿದರೆ , ವೇದಿಕೆಯ ಉಪಾಧ್ಯಕ್ಷ ಕಾರ್ಯಕ್ರಮವನ್ನು ನಿರೂಪಿಸಿದರು. ತದನಂತರ ವೇದಿಕೆಯ ಪದಾಧಿಕಾರಿಗಳಾದ ರವಿಕುಮಾರ್ ನೇತೃತ್ವದಲ್ಲಿ ರಕ್ತದಾನ ಶಿಬಿರ ಹಾಗೂ ಕೆ.ಸಿ.ಜನರಲ್ ಆಸ್ಪತ್ರೆಯ ರೋಗಿಗಳಿಗೆ ಉಚಿತವಾಗಿ ಹಣ್ಣು ವಿತರಣೆ ಮಾಡಲಾಯಿತು.



ಪತ್ರಿಕಾ ಚಳವಳಿ ನಗರದಲ್ಲಿಂದು ಏರ್ಪಡಿಸಿದ್ದ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಚಿವ ಎಚ್.ಎಂ.ರೇವಣ್ಣ, ಶಾಸಕ ಸುರೇಶ್‌ಕುಮಾರ್, ಬೆಂಗಳೂರು ವಿ.ವಿ. ಉಪಕುಲಪತಿ ಡಾ. ಎಂ.ಎಸ್.ತಿಮ್ಮಪ್ಪ, ಅಕಾಡೆಮಿ ಅಧ್ಯಕ್ಷ ಎನ್.ಅರ್ಜುನದೇವ, ಶೇಷಾದ್ರಿಪುರಂ ದತ್ತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಡೊನೇಷನ್ ಹಾವಳಿ ಮುಕ್ತ ಕಾಲೇಜು

ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ದುಬಾರಿ ವಂತಿಗೆ ನೀಡಿ ವ್ಯಾಸಂಗ ಮಾಡುವುದು ಮಧ್ಯಮ ವರ್ಗದವರಿಗೆ ಕನಸಿನ ಮಾತು. ಬಡವರ ಪಾಲಿಗಂತು ಕೈಗೆ ಟುಕದ ಗಗನ ಕುಸುಮ.

ಎಲ್.ಕೆ.ಜಿ.ಯಿಂದಲೆ ಈ ಡೊನೇಷನ್ ಹಾವಳಿ ಆರಂಭ. ಪೋಷಕರ ಆಸೆ ಸಾಲ ಮಾಡಿಯಾದರೂ ಸಹ ಡೊನೇಷನ್ ನೀಡಿ ಮಕ್ಕಳನ್ನು ಶಾಲೆಗೆ ಸೇರಿಸಬೇಕು ಎಂಬ ಹುಚ್ಚು ನಿರ್ಧಾರವೇ ಖಾಸಗಿ ಶಾಲೆಗಳ ಡೊನೇಷನ್ ಹಾವಳಿಗೆ ಇನ್ನಷ್ಟು ಉತ್ತೇಜನ ನೀಡಿದಂತಾಗಿದೆ.



ಕಂಪ್ಯೂಟರ್ ಲ್ಯಾಬ್

ಡೊನೇಷನ್ ಹಾವಳಿ ನಡುವೆ ಇದಕ್ಕೆ ವ್ಯತಿರಿಕ್ತವಾಗಿ ಡೊನೇಷನ್ ಮುಕ್ತ ಖಾಸಗಿ ಕಾಲೇಜುಗಳು ತೀರಾ ಅಪರೂಪ ವಿರಳ. ಅಂತಹ ಅಪರೂಪದ ಕಾಲೇಜುಗಳಲ್ಲಿ ಸದಾಶಿವನಗರದ ಯುವ ಸಂಘವು ನಾಗಶೆಟ್ಟಿಹಳ್ಳಿಯಲ್ಲಿ ನಡೆಸಿಕೊಂಡು ಬರುತ್ತಿರುವ ಕಾಲೇಜು ಒಂದು.



ನಾಗಶೆಟ್ಟಿಹಳ್ಳಿಯ ಸುಸಜ್ಜಿತ ಕಾಲೇಜು ಕಟ್ಟಡ

ಸಮಾಜ ಸೇವೆಯನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು ಯಾವುದೇ ಲಾಭದ ಉದ್ದೇಶವಿಲ್ಲದೆ ರಕ್ತದಾನ, ಉಚಿತ ಆರೋಗ್ಯ, ತಪಾಸಣಾ ಶಿಬಿರಗಳು ವನಮಹೋತ್ಸವ ಬಡಾವಣೆ ಸ್ವಚ್ಛತೆ, ಪರಿಸರ ಸಂರಕ್ಷಣೆ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆ ಹತ್ತು ಹಲವು ಕಾರ್ಯಕ್ರಮಗಳನ್ನು ಯುವಕ ಸಂಘ ನಡೆಸಿಕೊಂಡು ಬರುತ್ತಿದೆ.

1988ರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಈ ಸಂಘ ಪಾದಾರ್ಪಣೆ ಮಾಡಿತು. ಡೊನೇಷನ್ ಹಾವಳಿಯಿಂದ ಬಳಲುತ್ತಿರುವ ಬಡ ಮತ್ತು ಮಧ್ಯಮ ವರ್ಗದವರಿಗೆ ಆಸರೆಯಾಗಲು ಶಾಶ್ವತ ಅನುದಾನರಹಿತ ಪದವಿ ಪೂರ್ವ ಕಾಲೇಜು ಆರಂಭಿಸಲಾಯಿತು.



ಸದಾಶಿವನಗರ ಯೂತ್ ಅಸೋಸಿಯೇಷನ್ ಸ್ಥಾಪಕ ಡಬ್ಲ್ಯು.ಪಿ. ಶಿವಕುಮಾರ್, ತುಮಕೂರಿನ ಸ್ವಾಮಿ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸ್ವಾಮೀಜಿಯವರೊಂದಿಗೆ

ಗೆದ್ದಲಹಳ್ಳಿಯಲ್ಲಿ ಬಾಡಿಗೆ ಕೊಠಡಿಗಳನ್ನು ಪಡೆದು ಪದವಿ [illegible] ಕಾಲೇಜು ಆರಂಭಿಸಲಾಯಿತು. ಪ್ರಾರಂಭದಲ್ಲಿ ಸಾಕಷ್ಟು ಎದರು [illegible] ಕಂಡು ಬಂದವು ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳದ ಯುವಕರು [illegible] ಮುನ್ನಡೆಸಿದರು.

ಸದ್ಯಕ್ಕೆ ಪಿ.ಸಿ.ಎಂ.ಬಿ., ಪಿ.ಸಿ.ಎಂ.ಸಿ ಮತ್ತು ವಾಣಿಜ್ಯ ವಿಭಾಗಗಳನ್ನು [illegible] ತೆರೆಯಲಾಯಿತು. ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪ್ರವೇಶ [illegible] ನೀಡಲಾಯಿತು.

ಸಾಕಷ್ಟು ಎಡರು-ತೊಡರುಗಳ ನಡುವೆಯೂ ಸ್ವಂತ ಕಟ್ಟಡದ [illegible] ಯುವಕರದ್ದು. ದಾನಿಗಳನ್ನು ಅರಸಿದರು. ಹಣ ಸಂಗ್ರಹಿಸಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿದರು.

ವಂತಿಗೆ ವಸೂಲಿ ಮಾಡದೆ, ಸರ್ಕಾರದಿಂದ, ಅನುದಾನ ಪಡೆಯದೆ [illegible] ಕಾಲೇಜು ನಿರ್ವಹಣೆ ಮಾಡುವುದು ಕಷ್ಟ ಸಾಧ್ಯ. ಈ ಎಲ್ಲ ಕಷ್ಟ [illegible] ನಡುವೆಯೂ ಉತ್ತಮ ಗುಣಮಟ್ಟದ ಬೋಧಕರನ್ನು [illegible]



ರಾಸಾಯನಶಾಸ್ತ್ರ ಲ್ಯಾಬ್

ಭ್ಯಗಳನ್ನು ಈ ಕಾಲೇಜುಗಳಲ್ಲಿ ಒದಗಿಸಿರುವುದು ಈ ಯುವಕರ [illegible]

ಎನ್.ಸಿ.ಸಿ., ಎನ್.ಎಸ್.ಎಸ್ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಯನ್ನು [illegible] ಕೊಡಲಾಗುತ್ತಿದೆ.

ನಾಗಶೆಟ್ಟಿಹಳ್ಳಿಯ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸುಸಜ್ಜಿತ ಕಂಪ್ಯೂಟರ್ ಮತ್ತು ವಿಜ್ಞಾನ ಪ್ರಯೋಗ[illegible] ಸೌಲಭ್ಯ ಇಲ್ಲುಂಟು.

ಈ ಕಾಲೇಜಿನ ರೂವಾರಿ ಡಬ್ಲ್ಯುಪಿ ಕೃಷ್ಣ, ರಾಜ್ಯ ಯುವ ಪ್ರಶಸ್ತಿ [illegible] ಕ್ರಿಯಾಶೀಲ ವ್ಯಕ್ತಿ. ನನಗೆ ಹತ್ತು ಜನ ಬಲಿಷ್ಠ ಯುವಕರನ್ನು [illegible] ಭವಿಷ್ಯ ಬದಲಾಯಿಸುವೆ ಎಂಬ ಸ್ವಾಮಿ ವಿವೇಕಾನಂದರ [illegible] ಸ್ಫೂರ್ತಿ ಪಡೆದು 1981ರಲ್ಲಿ ಸದಾಶಿವನಗರ ಯುವಕ ಸಂಘ ಕಟ್ಟ[illegible]



ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ಶಾಖೆಯು ನಗರದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ನೆರವಿನೊಂದಿಗೆ ಜಿನಿವಾ ಸಮಾವೇಶ ಪ್ರಯುಕ್ತ ರೋಗಿಗಳ ಹಾರೈಕೆ ಹಾಗೂ ಚಿಕಿತ್ಸೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಪ್ರಧಾನ ಕಾರ್ಯದರ್ಶಿ ಡಾ. ಎನ್. ಜಿ. ನಾರಾಯಣ, ಡಬ್ಲ್ಯೂ. ಪಿ. ಕೃಷ್ಣ, ರಾಜು ಚಂದ್ರಶೇಖರ್, ಎಂ. ಮುನಿಯಮ್ಮ ಹಾಜರಿದ್ದರು.

ಶೇಷಾದ್ರಿಪುರಂಗೆ – ಹಂಪಿ!

ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಹೆಚ್. ಜೆ. ಲಕ್ಕಪ್ಪ ಗೌಡರು ೧೭-೦೩-೨೦೦೩ರಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಕಛೇರಿಗೆ ಭೇಟಿ ನೀಡಿದರು. ಕನ್ನಡದಲ್ಲಿ ನಾಲ್ಕು ವರ್ಷಗಳ ಎಂ.ಎ. ಪಿಹೆಚ್.ಡಿ. ಸಮಗ್ರ ಅಧ್ಯಯನವನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಹಾಯದಿಂದ ಸ್ಥಾಪಿಸುವ ಉದ್ದೇಶದ ಈ ಭೇಟಿ ಫಲಪ್ರದವಾಗಲಿ ಎಂಬುದೇ ನಮ್ಮ ಹಾರೈಕೆ. ದತ್ತಿಯ ಪದಾಧಿಕಾರಿಗಳಾದ ಶ್ರೀ ಡಬ್ಲ್ಯೂ. ಪಿ. ಕೃಷ್ಣ, ಶ್ರೀ ಎ. ಆರ್. ಶ್ರೀನಿವಾಸಯ್ಯ, ಪ್ರೊ. ಹೆಚ್. ಆರ್. ದಾಸೇಗೌಡರು ಈ ಸಂದರ್ಭದಲ್ಲಿ ಚರ್ಚೆಯಲ್ಲಿ ಪಾಲ್ಗೊಂಡರು.



ಮಂಗಳವಾರ, 8 ಏಪ್ರಿಲ್ 2003

ಕನ್ನಡಪ್ರಭ 3

ಪತ್ರಿಕೆಗಳು ಮುಕ್ತ ವಿವಿಗಳಂತೆ: ಅರ್ಜುನದೇವ

ಕನ್ನಡಪ್ರಭ ವಾರ್ತೆ, ಬೆಂಗಳೂರು, ಏ.7

ಪತ್ರಿಕೆಗಳು ಮುಕ್ತ ವಿಶ್ವವಿದ್ಯಾಲಯವಿದ್ದಂತೆ ಎಂದು ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಎನ್.ಅರ್ಜುನದೇವ ಅಭಿಪ್ರಾಯಪಟ್ಟಿದ್ದಾರೆ.

ಸೋಮವಾರ ನಗರದ ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ಚಳವಳಿಯ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಕೇವಲ ಪಠ್ಯಪುಸ್ತಕಗಳಿಂದಷ್ಟೇ ಜ್ಞಾನ ಲಭಿಸುವುದಿಲ್ಲ. ಮನೆ ಬಾಗಿಲಿಗೇ ಬಂದು ಬೀಳುವ ಪತ್ರಿಕೆಗಳು ಸಾಕಷ್ಟು ಜ್ಞಾನ ನೀಡುತ್ತವೆ. ಎಲೆಕ್ಟ್ರಾನಿಕ್ ಮಾಧ್ಯಮ ಹಾಗೂ ಮುದ್ರಣ ಮಾಧ್ಯಮಗಳ ನಡುವೆ ಪೈಪೋಟಿಯಿದೆ ಎಂದು ಹೇಳಲಾಗುತ್ತದೆ. ಇದು ಸರಿಯಲ್ಲ. ಎರಡೂ ಮಾಧ್ಯಮಗಳು ಪರಸ್ಪರ ಪೂರಕವಾಗಿವೆ ಎಂದು ಅವರು ಹೇಳಿದರು.

ಸಮಾರಂಭ ಉದ್ಘಾಟಿಸಿದ ರೇಷ್ಮೆ ಮತ್ತು ಜವಳಿ ಸಚಿವ ಎಚ್.ಎಂ.ರೇವಣ್ಣ ಅವರು ಮಾತನಾಡಿ, ಪತ್ರಕರ್ತರು ಇತರರ ಮೇಲಿನ ಸಿಟ್ಟನ್ನು ಪೆನ್ನು, ಪತ್ರಿಕೆ ಮೂಲಕ ತೀರಿಸಿಕೊಳ್ಳುವುದು ಸರಿಯಲ್ಲ ಎಂದು ತಮ್ಮ ಸ್ವಂತ ಅನುಭವ ಹಂಚಿಕೊಂಡರು. ಶಾಸಕ ಎಸ್.ಸುರೇಶ್‌ಕುಮಾರ್ ಅವರು ಮಾತನಾಡಿ, ಈಚೆಗೆ ಪತ್ರಿಕೆಗಳು ಅರ್ಧ ಲೋಟ ಕಾಫಿಗಿಂತ ಕಡಿಮೆ ದರದಲ್ಲಿ ಲಭ್ಯವಿದ್ದರೂ ಓದುಗರು ಆಲಸ್ಯರಾಗಿದ್ದಾರೆ. ಪತ್ರಿಕಾ ಚಳವಳಿಗೆ ರಾಜ್ಯಾದ್ಯಂತ ವ್ಯಾಪಕ ಬೆಂಬಲ ನೀಡಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ।ಎಂ.ಎಸ್.ತಿಮ್ಮಪ್ಪ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಡಾ।ಬಿ.ಕೆ.ರವಿ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ, ಪತ್ರಿಕಾ ಚಳವಳಿ ಅಧ್ಯಕ್ಷ ಬಸವರಾಜ್ ದೊಡ್ಡಮನಿ ಅವರು ಪಾಲ್ಗೊಂಡಿದ್ದರು.

8-4-2003

ಸಂಯುಕ್ತ ಕರ್ನಾಟಕ

'ಪತ್ರಿಕೆಗಳು ಮುಕ್ತ ವಿ.ವಿ. ಇದ್ದಂತೆ'

ಬೆಂಗಳೂರು, ಏ. 7- ಪಠ್ಯಕ್ರಮಕ್ಕಿಂತ ವಿಶಿಷ್ಟ ಜ್ಞಾನ ನೀಡುವ ಪತ್ರಿಕೆಗಳು ಮುಕ್ತ ವಿಶ್ವವಿದ್ಯಾಲಯ ಇದ್ದ ಹಾಗೆ ಎಂದು ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಎನ್. ಅರ್ಜುನದೇವ್ ಹೇಳಿದರು.

ನಗರದ ಸೆಂಟ್ರಲ್ ಕಾಲೇಜಿನ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾ ಚಳವಳಿಯ ಪ್ರಥಮ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅರ್ಜುನದೇವ್ ಅವರು, ಕಾಲೇಜಿಗೆ ಹೋಗಿ ಕರಾರುವಕ್ಕಾಗಿ ಪಠ್ಯದಿಂದ ಜ್ಞಾನ ಪಡೆಯುವುದಕ್ಕಿಂತ ಭಿನ್ನವಾಗಿ ಮನೆಯಲ್ಲಿಯೇ ಕುಳಿತು ದಿನನಿತ್ಯದ ಆಧುನಿಕ ಮಾಹಿತಿ ಶಿಕ್ಷಣವನ್ನು ಪತ್ರಿಕೆಗಳು ನೀಡುತ್ತವೆ ಎಂದರು.

ಎಲೆಕ್ಟ್ರಾನಿಕ್ ಹಾಗೂ ಮುದ್ರಣ ಮಾಧ್ಯಮಗಳು ಪೈಪೋಟಿಯಲ್ಲ, ಬದಲಾಗಿ ಅವು ಒಂದಕ್ಕೊಂದು ಪೂರಕ ಎಂದ ಅರ್ಜುನದೇವ್ ಪತ್ರಿಕೆಗಳನ್ನು ಅನುಕೂಲವಾದಾಗ ಓದಬಹುದು, ಜೊತೆಗೆ ಸುದ್ದಿಯನ್ನು ಖಚಿತ ಮಾಡಿಕೊಳ್ಳಬಹುದು. ಈ ಅಂಶಗಳಿಂದ ಮುದ್ರಣ ಮಾಧ್ಯಮ ಹೆಚ್ಚು ಪ್ರಸ್ತುತವಾಗುತ್ತದೆ ಎಂದು ತಿಳಿಸಿದರು.

ಪತ್ರಿಕೆ ಓದುವುದರಿಂದ ವಂಚಿತರಾದರೆ ಜ್ಞಾನದಿಂದ ವಂಚಿತರಾಗುತ್ತಾರೆಂದ ಅರ್ಜುನದೇವ್, ಓದುವ ಹವ್ಯಾಸ ಬೆಳೆಸುವ ಈ ಚಳವಳಿ ರಾಜ್ಯಾದ್ಯಂತ ನಡೆಯಲಿ ಎಂದು ಆಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರೇಷ್ಮೆ ಹಾಗೂ ಜವಳಿ ಸಚಿವ ಎಚ್.ಎಂ. ರೇವಣ್ಣ ಪತ್ರಿಕಾ ರಂಗವು ಜನರ ಜೀವನಾಡಿಯಾಗಿದ್ದು, ಅದರ ವರದಿಗಳು ಸತ್ಯಕ್ಕೆ ಹತ್ತಿರವಾಗಿರಬೇಕೆಂದು ಅಭಿಪ್ರಾಯಪಟ್ಟರು.

ರಾಜಕೀಯಕ್ಕೆ ಸಂಬಂಧಿಸಿದಂತೆ ಕೆಲವು ವೈಯಕ್ತಿಕ ಅಭಿಪ್ರಾಯಗಳು ಪೆನ್ನು ಹಾಳೆಯ ಮೂಲಕ ಮುದ್ರಿತವಾಗುವ ಮೂಲಕ ಅರ್ಧ ಸತ್ಯದ ಅನಾಹುತಕ್ಕೆ ಎಡೆ ಮಾಡಿಕೊಡುತ್ತದೆ. ಈ ನಿಟ್ಟಿನಲ್ಲಿ ಪತ್ರಿಕೆಗಳ ವರದಿಗಳು ಸತ್ಯಾಂಶದಿಂದ ಕೂಡಿರಬೇಕೆಂದರು.

ಚಳವಳಿ ಮೂಲಕ ರಾಜ್ಯದ, ರಾಷ್ಟ್ರದ ವಿಚಾರ ಜನರಿಗೆ ನೇರವಾಗಿ ತಲುಪಿಸುವ ಚಿಂತನೆ ಶ್ಲಾಘನೀಯವೆಂದ ಸಚಿವರು, ಪತ್ರಿಕೆಗಳನ್ನು ಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ವಿಧಾನಸಭಾ ಸದಸ್ಯ ಎಸ್. ಸುರೇಶ್ ಕುಮಾರ್, ಪತ್ರಿಕೆ ಓದುವ ಹವ್ಯಾಸ ಜನರಿಗೆ ಅಂಟುರೋಗ ಹಿಡಿದಂತಾಗಬೇಕೆಂದು ಆಶಿಸುತ್ತಾ ಪತ್ರಿಕೆಗಳು ಗುಣಮಟ್ಟವನ್ನು ಕಾಪಾಡಿಕೊಂಡು ಸತ್ಯಾಂಶದ ಎಲ್ಲ ತೆರನಾದ ಸುದ್ದಿಯನ್ನು ಒಳಗೊಂಡಿರಬೇಕೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಎಂ.ಎಸ್. ತಿಮ್ಮಪ್ಪನವರು ಮಾತನಾಡುತ್ತಾ, ಪತ್ರಿಕೆಗಳನ್ನು ವೃದ್ಧಿಗೊಳಿಸುವ ಕಾರ್ಯವೆಂದರೆ ಶೈಕ್ಷಣಿಕ ಅಭಿವೃದ್ಧಿ ಅಂತವೇ ಅರ್ಥ. ವಿಶ್ವವಿದ್ಯಾಲಯದ ಕಾಲೇಜುಗಳ ಎಲ್ಲ ಸಹಾಯವನ್ನು ಈ ಚಳವಳಿಗೆ ನೀಡುವುದಾಗಿ ಭರವಸೆ ನೀಡಿದರು.

ಕನ್ನಡದ ಪ್ರಮುಖ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡ ಪ್ರಭ, ಉದಯವಾಣಿ, ಜನವಾಹಿನಿ, ವಿಜಯಕರ್ನಾಟಕದ ಸಹಕಾರದೊಂದಿಗೆ ಪ್ರತಿ ಓದುಗನಿಗೊಂದು ಪತ್ರಿಕೆ, ಪ್ರತಿ ಪತ್ರಿಕೆಗೊಬ್ಬ ಓದುಗ ಎಂಬ ಧ್ಯೇಯವನ್ನಿರಿಸಿಕೊಂಡು ಜನ್ಮ ತಳೆದ ಈ ಪತ್ರಿಕಾ ಚಳವಳಿ ಇದೀಗ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿಯ 30 ಹಳ್ಳಿಗಳು ಸೇರಿದಂತೆ ರಾಜ್ಯದ ಮತ್ತಿತರ ಹಳ್ಳಿಯ ಕಡೆ ವ್ಯಾಪಿಸಲು ಉದ್ದೇಶಿಸಿದೆ ಎಂದು ಅಧ್ಯಕ್ಷ ಬಸವರಾಜ್ ದೊಡ್ಡಮನಿ ತಿಳಿಸಿದರು.

ಸಮಾರಂಭದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಡಾ. ಬಿ.ಕೆ. ರವಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ನಿಖರ ಮಾಹಿತಿ: ಪತ್ರಿಕೆಗಳಿಗೆ ಸಚಿವ ರೇವಣ್ಣ ಕಿವಿಮಾತು

ಬೆಂಗಳೂರು, ಏ. 7: ರಾಜಕಾರಣಿಗಳು ಮತ್ತು ಪತ್ರಕರ್ತರ ನಡುವಿನ ಸಂಬಂಧದ ಎಳೆ ತಪ್ಪಿದ ಸಂದರ್ಭದಲ್ಲಿ ಅದನ್ನು ಪೆನ್ನು- ಪೇಪರ್ ಮೂಲಕ ವ್ಯಕ್ತಪಡಿಸುವುದರಿಂದ ರಾಜಕೀಯಕ್ಕೆ ಧಕ್ಕೆಯುಂಟಾಗುತ್ತದೆ ಎಂದು ರೇಷ್ಮೆ ಮತ್ತು ಜವಳಿ ಸಚಿವ ಎಚ್.ಎಂ. ರೇವಣ್ಣ ಇಂದು ಇಲ್ಲಿ ಹೇಳಿದರು.

ಪತ್ರಿಕಾ ಚಳವಳಿ ಸಂಘಟನೆಯು ನಗರದಲ್ಲಿ ಏರ್ಪಡಿಸಿದ್ದ 'ಪ್ರತಿ ಓದುಗನಿಗೊಂದು ಪತ್ರಿಕೆ ಹಾಗೂ ಪ್ರತಿ ಪತ್ರಿಕೆಗೊಬ್ಬ ಓದುಗ' ಪ್ರಥಮ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜಕಾರಣಿಗಳು ಮತ್ತು ಪತ್ರಕರ್ತರ ನಡುವೆ ಸಂಬಂಧ ಹದಗೆಟ್ಟ ಸಂದರ್ಭದಲ್ಲಿ, ಸತ್ಯಾಂಶವನ್ನು ಬಿಟ್ಟು ಸುಳ್ಳು ಮಾಹಿತಿ ನೀಡಲು ಪ್ರಯತ್ನಿಸಿದಲ್ಲಿ ರಾಜಕೀಯ ವ್ಯಕ್ತಿ ಸೇರಿದಂತೆ ಜನತೆಗೆ ದ್ರೋಹ ಬಗೆದಂತಾಗುತ್ತದೆ ಎಂದರು.

ವರದಿಗಾರ ಸತ್ಯಾಂಶವನ್ನು ಬಿಟ್ಟು ಸುಳ್ಳು ಮಾಹಿತಿಗಳನ್ನು ಬರೆಯುವ ಪ್ರಯತ್ನ ಮಾಡಬಾರದು. ಇದರಿಂದ ಜನರನ್ನೂ ದಾರಿತಪ್ಪಿಸಿದಂತಾಗುತ್ತದೆ. ಅಲ್ಲದೇ ಜನತೆ ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಸತ್ಯ ಎಂದು ನಂಬುವುದರಿಂದ ವರದಿಗಾರರು ಸತ್ಯವನ್ನು ಬಿಟ್ಟು ಬೇರೆ ವಿಚಾರಗಳನ್ನು ಬರೆಯುವುದರಿಂದ ಕೆಲವೊಮ್ಮೆ ಅನಾಹುತಗಳಾಗುವ ಸಾಧ್ಯತೆಗಳಿವೆ ಎಂದರು.

ಶಾಸಕ ಸುರೇಶ್‌ಕುಮಾರ್ ಮಾತನಾಡಿ, ಒಂದು ಕಪ್ ಕಾಫಿಗಿಂತ ಕಡಿಮೆ ದರದಲ್ಲಿ ಪತ್ರಿಕೆ ಲಭ್ಯವಿದ್ದರೂ ಕೊಂಡು ಓದುವವರ ಕೊರತೆ ಇದೆ ಎಂದು ವಿಷಾದಿಸಿದರು.

ರಾಜ್ಯದಲ್ಲಿ ಪತ್ರಿಕೆ ಓದುವವರ ಸಂಖ್ಯೆ ಶೇ. 16ರಷ್ಟಿದ್ದರೆ, ಟಿ.ವಿ. ವೀಕ್ಷಕರ ಸಂಖ್ಯೆ ಶೇ. 70ರಷ್ಟಿದೆ ಎಂದು ಹೇಳಿದ ಅವರು, ಜನತೆ ಪತ್ರಿಕೆ ಓದುವಿಕೆಗೆ ಅಂಟಿಕೊಳ್ಳುವಂತಾಗಬೇಕು. ಆ ಹಾದಿಯಲ್ಲಿ ನಡೆಯಲಿರುವ ಪತ್ರಿಕಾ ಚಳವಳಿಗೆ ತಮ್ಮ ಬೆಂಬಲ ಇದೆ ಎಂದರು.

ಮುಕ್ತ ವಿಶ್ವವಿದ್ಯಾಲಯ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಅರ್ಜುನದೇವ ಮಾತನಾಡಿ, ಪತ್ರಿಕೆಗಳು ಒಂದು ರೀತಿಯಲ್ಲಿ ಮುಕ್ತ ವಿಶ್ವವಿದ್ಯಾಲಯಗಳಿದ್ದಂತೆ ಎಂದರು.

ಪತ್ರಿಕೆಗಳಿಂದ ಸಕಾಲಿಕ ಶಿಕ್ಷಣ ಪಡೆಯಬಹುದು. ಪತ್ರಿಕೆಗಳನ್ನು ಓದುವುದರಿಂದ ಶೈಕ್ಷಣಿಕ ಪೂರೈಕೆ ಸಾಧ್ಯ ಎಂದು ಹೇಳಿದ ಅವರು, ಈ ನಿಟ್ಟಿನಲ್ಲಿ 'ಪತ್ರಿಕಾ ಚಳವಳಿ'ಯ ಪ್ರಯತ್ನ ಜನತೆಯಲ್ಲಿ ಉತ್ತಮ ಹವ್ಯಾಸ ಬೆಳೆಸುವಂತಹದ್ದು ಎಂದು ಶ್ಲಾಘಿಸಿದರು.

ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಪೈಪೋಟಿ ಇದೆ ಎಂಬ ಭಾವನೆಯಿದೆ. ಆದರೆ ಇವೆರಡೂ ಒಂದಕ್ಕೊಂದು ಪೂರಕ. ಹಾಗೆಯೇ ಪತ್ರಿಕೆಗಳನ್ನು ಯಾವಾಗ ಬೇಕಾದರೂ ಓದಬಹುದು. ಆದರೆ ಟಿವಿ ಮಾಧ್ಯಮದ ಕಾರ್ಯಕ್ರಮಗಳನ್ನು ಆಯಾ ಸಮಯದಲ್ಲೇ ನೋಡಬೇಕಾಗುತ್ತದೆ ಎಂದರು.

ಅರ್ಥವಾಗದಿದ್ದರೆ ಪತ್ರಿಕೆಯನ್ನು ಮತ್ತೊಮ್ಮೆ ಓದಿ ಸತ್ಯವನ್ನು ಖಚಿತಪಡಿಸಿಕೊಳ್ಳಬಹುದು ಎಂದು ಹೇಳಿದ ಅವರು, ಪತ್ರಿಕೆ ಓದದವರು ಜ್ಞಾನ ವಂಚಿತರಾಗುತ್ತಾರೆ. ಜನತೆಯ ಜ್ಞಾನ ಹೆಚ್ಚಳಕ್ಕೆ ಪೂರಕವಾಗಿರುವ ಪತ್ರಿಕಾ ಚಳವಳಿಗೆ ಸರಕಾರ ಸಹಕಾರ ಮತ್ತು ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಬೆಂಗಳೂರು ವಿವಿ ಕುಲಪತಿ ಡಾ| ಎಂ.ಎಸ್. ತಿಮ್ಮಪ್ಪ, ಹಿಂದುಳಿದ ವರ್ಗಗಳ ಆಯೋಗ ಸದಸ್ಯ ಡಾ| ಬಿ.ಕೆ. ರವಿ, ಶೇಷಾದ್ರಿಪುರ ಶಿಕ್ಷಣ ದತ್ತಿ ಗೌ| ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಮಾತನಾಡಿದರು. ಪತ್ರಿಕಾ ಚಳವಳಿ ಅಧ್ಯಕ್ಷ ಬಸವರಾಜ್ ದೊಡ್ಡಮನಿ ಪ್ರಾಸ್ತಾವಿಕ ಮಾತನಾಡಿದರು.



ಪತ್ರಿಕಾ ಚಳವಳಿ ಸಂಘಟನೆ ಬೆಂಗಳೂರಿನಲ್ಲಿ ಸೋಮವಾರ ಏರ್ಪಡಿಸಿದ್ದ 'ಪ್ರತಿ ಓದುಗನಿಗೊಂದು ಪತ್ರಿಕೆ ಹಾಗೂ ಪ್ರತಿ ಪತ್ರಿಕೆಗೊಬ್ಬ ಓದುಗ' ಪ್ರಥಮ ವಾರ್ಷಿಕೋತ್ಸವದಲ್ಲಿ ರೇಷ್ಮೆ ಮತ್ತು ಜವಳಿ ಸಚಿವ ಎಚ್.ಎಂ. ರೇವಣ್ಣ, ಶಾಸಕ ಸುರೇಶ್‌ಕುಮಾರ್, ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಅರ್ಜುನದೇವ, ಬೆಂಗಳೂರು ವಿವಿ ಕುಲಪತಿ ಡಾ| ಎಂ. ಎಸ್. ತಿಮ್ಮಪ್ಪ ಮತ್ತಿತರರು ಭಾಗವಹಿಸಿದ್ದರು.

'ಪತ್ರಿಕಾ ಚಳವಳಿ'ಗೆ ಒಂದು ವರ್ಷ

ಭಾಷೆ, ನೆಲ, ಜಲ ರಕ್ಷಣೆಗಾಗಿ ನಮ್ಮ ನಾಡಿನಲ್ಲಿ ಹಲವು ಹೋರಾಟಗಳು ನಡೆದಿವೆ. ಈ ಹೋರಾಟಗಳು ನಂತರ 'ಚಳವಳಿ' ಸ್ವರೂಪ ಪಡೆದುಕೊಂಡಿವೆ. ಹಲವು ಧ್ಯೇಯಗಳನ್ನಿಟ್ಟುಕೊಂಡು ಜನ್ಮ ತಳೆದಿರುವ ಚಳುವಳಿಗಳಲ್ಲಿ ಕೆಲವೊಂದು ನಿರಂತರವಾಗಿ ನಡೆದುಕೊಂಡು ಬಂದಿದ್ದರೆ, ಇನ್ನು ಕೆಲವು ಅಷ್ಟೇ ವೇಗವಾಗಿ ಸತ್ತು ಹೋಗಿವೆ. ಬಹುಶಃ ಗೋಕಾಕ್ ಚಳುವಳಿಯಷ್ಟು ತೀವ್ರವಾದ ಚಳುವಳಿ ಇನ್ನೊಂದು ಚಳುವಳಿ ನಮ್ಮ ನಾಡಿನಲ್ಲಿ ನಡೆದಿಲ್ಲ.

ಕಂಪ್ಯೂಟರ್, ಟಿವಿಯುಗದ ಭರಾಟೆಯಲ್ಲಿ ಕನ್ನಡ ಪತ್ರಿಕೋದ್ಯಮದ ಉಳಿವಿಗಾಗಿ ವಿಶಿಷ್ಟ ಆಂದೋಲನ ಕಳೆದ ವರ್ಷ 'ಪತ್ರಿಕಾ ಚಳುವಳಿ' ಎಂಬ ಹೆಸರಿನಲ್ಲಿ ಜನ್ಮತಾಳಿದೆ.

'ಪ್ರತಿ ಓದುಗನಿಗೊಂದು ಪತ್ರಿಕೆ. ಪ್ರತಿ ಪ್ರತಿಕೆಗೊಬ್ಬ ಓದುಗ' ಎಂಬ ಧ್ಯೇಯದೊಂದಿಗೆ ಆರಂಭಗೊಂಡ ಚಳುವಳಿಯೇ ಪತ್ರಿಕಾ ಚಳುವಳಿ.

ಕನ್ನಡ ದಿನಪತ್ರಿಕೆ ಗಳನ್ನು ಕೊಂಡು ಓದುವ ಹವ್ಯಾಸ ಬೆಳೆಸುವುದರ ಜೊತೆಗೆ ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸಿ ಸಾಕ್ಷರತೆ ಪ್ರಮಾಣವನ್ನು ಹೆಚ್ಚಿಸುವುದು ಕೂಡ ಇದರ ಪ್ರಮುಖ ಉದ್ದೇಶವಾಗಿದೆ.

ಕನ್ನಡ ಪತ್ರಿಕೆಗಳನ್ನು ಕೊಂಡು ಓದುವರ ಸಂಖ್ಯೆ ಕಡಿಮೆ. ಅದರಲ್ಲೂ ನಗರ ಪ್ರದೇಶಗಳಲ್ಲಿ ಇಂಗ್ಲಿಷ್ ವ್ಯಾಮೋಹಕ್ಕೆ ಸಿಲುಕಿರುವ ಜನ ಕನ್ನಡ ಪತ್ರಿಕೆಗಳನ್ನು ಓದುವುದನ್ನೇ ಮರೆತು ಬಿಟ್ಟಿದ್ದಾರೆ. ಇನ್ನೂ ಗ್ರಾಮೀಣ ಭಾಗದಲ್ಲಿ ಓದುವ ಆಸಕ್ತಿಯುಳ್ಳವರು ಇದ್ದರೂ ಪತ್ರಿಕೆಗಳು ಅಲ್ಲಿಗೆ ತಲುಪುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಓದುಗ ಮತ್ತು ಪತ್ರಿಕೆಗಳ ನಡುವೆ ಸಂಪರ್ಕ ಸೇತುವೆಯಾಗಿ ಪತ್ರಿಕಾ ಚಳುವಳಿ ನಿಂತಿದೆ.

ಕನ್ನಡ ಪತ್ರಿಕೆಗಳು ತಲುಪದ ಹಳ್ಳಿಗಳಲ್ಲಿ ಓದುವ ಹವ್ಯಾಸವನ್ನೇ ಬೆಳೆಸಿಕೊಂಡಿರದ ಪ್ರದೇಶಗಳಲ್ಲಿ ನಿರಂತರವಾಗಿ ಮೂರು ತಿಂಗಳ ಕಾಲ ಎರಡು ರೂ ಮುಖ ಬೆಲೆಯ ಕನ್ನಡ ದಿನಪತ್ರಿಕೆಗಳನ್ನು ಕೇವಲ 50 ಪೈಸೆಗೆ ಓದುಗರಿಗೆ ತಲುಪಿಸಿ ಅವರಲ್ಲಿ ಪತ್ರಿಕೆಗಳ ಬಗ್ಗೆ ಅರಿವನ್ನು ಮೂಡಿಸಿ ನಂತರ ಪತ್ರಿಕೆಗಳನ್ನು ಕೊಂಡು ಓದುವ ಪ್ರವೃತ್ತಿಯನ್ನು ಜನರಲ್ಲಿ ಬೆಳೆಸುವುದೇ ಪತ್ರಿಕಾ ಚಳುವಳಿಯ ಮುಖ್ಯ ಗುರಿಯಾಗಿದೆ.

ಕೇವಲ 50 ಪೈಸೆಗೆ ಪತ್ರಿಕೆಯನ್ನು ಮೂರು ತಿಂಗಳ ಕಾಲ ಕೊಂಡು ಓದಿದ ನಂತರ ಅದರ ಮುಖ ಬೆಲೆ ತೆತ್ತು ಓದುವ ಹವ್ಯಾಸ ಜನರಲ್ಲಿ ಹುಟ್ಟಿಕೊಂಡಿರುತ್ತದೆ. ಪತ್ರಿಕಾ ಚಳುವಳಿಯ ಕಾರ್ಯ ಬರೀ ಇಷ್ಟೆ ಅಲ್ಲ. ಹೊಸದಾಗಿ ಪತ್ರಿಕೆ ಓದುಗರಿಗೆ ಪತ್ರಿಕೆಯ ಅಂಕಣಗಳು ಹಾಗೂ ಸುದ್ದಿ ಮೌಲ್ಯಗಳ ಬಗ್ಗೆ ಚಳು ವಳಿಯ ಸಮಯದಲ್ಲಿ ಸಂವಾದ ಕಾರ್ಯಕ್ರಮವನ್ನೂ ಏರ್ಪಡಿಸಲಾಗುತ್ತದೆ.

'ಎರಡು ರೂ ಬೆಲೆಯ ಪತ್ರಿಕೆಗಳನ್ನು ಕೇವಲ 50 ಪೈಸೆಗೆ ನೀಡಲಿದೆ. ಪತ್ರಿಕಾ ಚಳುವಳಿಯು 50 ಪೈಸೆ, ಪತ್ರಿಕೆಗಳು 50 ಪೈಸೆ ಹಾಗೂ ಇನ್ನುಳಿದ 50 ಪೈಸೆಯನ್ನು ಪ್ರಾಯೋಜಕರ ನೆರವಿನಿಂದ ಭರಿಸಲಾಗುವುದು. ಒಟ್ಟಾರೆ ಕನ್ನಡ ಪತ್ರಿಕೆಗಳನ್ನು ಕೊಂಡು ಓದುವ ಹವ್ಯಾಸವನ್ನು ಬೆಳೆಸುವುದು ನಮ್ಮ ಮುಖ್ಯ ಗುರಿಯಾಗಿದೆ' ಎನ್ನುತ್ತಾರೆ ಪತ್ರಿಕಾ ಚಳುವಳಿಯ ಅಧ್ಯಕ್ಷ ಬಸವರಾಜ್ ದೊಡ್ಡಮನಿ.

ಕಳೆದ ಮಾರ್ಚ್ 25ರಂದು ಬೆಂಗಳೂರಿನ ವಿಜಯನಗರದ ಕೊಳಗೇರಿಯಲ್ಲಿ ಪ್ರಾರಂಭವಾದ ಚಳವಳಿ ಇದೀಗ ನಾಡಿನಾದ್ಯಂತ ಪಸರಿಸಿದೆ.

ಹೊಸ ಹೊಸ ಓದುಗರನ್ನು ಸೃಷ್ಟಿಸುವಲ್ಲಿ ದಾಪುಗಾಲು ಹಾಕಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಪತ್ರಿಕೆಗಳನ್ನು ಕಾಣದ ಮಾಗಡಿ ತಾಲ್ಲೂಕಿನ ಚನ್ನಮನ ಪಾಳ್ಯಕ್ಕೆ ಕಾಲಿಟ್ಟ ಪತ್ರಿಕಾ ಚಳವಳಿ 100 ಹೊಸ ಓದುಗರನ್ನು ಹುಟ್ಟು ಹಾಕಿದೆ.

ಕನಕಪುರ ತಾಲ್ಲೂಕಿನ ಕಡಸಿಕೊಪ್ಪ, ಮಾಗಡಿ ತಾಲ್ಲೂಕಿನ ಕದೂರು, ಚಿಕ್ಕಮಗಳೂರು ಜಿಲ್ಲೆಯ ಅಂತರಗಟ್ಟೆ ಸೇರಿದಂತೆ ಬೆಂಗಳೂರಿನ ಹಲವಾರು ಕೊಳಗೇರಿಗಳಲ್ಲಿ ಯಶಸ್ವಿಯಾಗಿರುವ ಪತ್ರಿಕಾ ಚಳುವಳಿ ಇದೀಗ ಒಂದು ವರ್ಷ ಪೂರೈಸಿದೆ.

ಉದಯವಾಣಿ, ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡ ಪ್ರಭ, ಜನವಾಹಿನಿ ಹಾಗೂ ವಿಜಯಕರ್ನಾಟಕ ಪತ್ರಿಕೆಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿರುವ ಪತ್ರಿಕಾ ಚಳುವಳಿ ಸಹಸ್ರಾರು ಸಂಖ್ಯೆಯಲ್ಲಿ ಹೊಸ ಓದುಗರನ್ನು ಸೃಷ್ಟಿಸಿದೆ.

ಆರಂಭದಲ್ಲೇ ಸಾಕಷ್ಟು ಯಶ ಕಂಡಿರುವ ಈ ಚಳವಳಿ ಇದೀಗ ಹುಬ್ಬಳ್ಳಿ, ಬಳ್ಳಾರಿ, ಕೋಲಾರ, ತುಮಕೂರು ಜಿಲ್ಲೆಗಳಿಗೂ ಕಾಲಿಡಲಿದೆ.

ಯುವ ಪತ್ರಕರ್ತರಾದ ಅನಿಲ್ ಗುಮ್ಮನಹಳ್ಳಿ, ಎಂ. ರಮೇಶ್, ಶಿವಾನಂದ, ಮಂಜುನಾಥ, ಕೆ.ಎಸ್. ಜಗನ್ನಾಥ್, ನಾರಾಯಣ ಸ್ವಾಮಿ, ಶ್ರೀಕಂಠ ಗಂಗಾಧರ್ ಮೂರ್ತಿ ಹಾಗೂ ಹಲವಾರು ಸದಸ್ಯರನ್ನೊಳಗೊಂಡಿರುವ ಪತ್ರಿಕಾ ಚಳುವಳಿ ಇದೀಗ ಒಂದು ವರ್ಷ ತುಂಬಿದ್ದು, ಇದರ ಪ್ರಥಮ ವಾರ್ಷಿಕೋತ್ಸವ ಏಪ್ರಿಲ್ 7ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜ್‌ನ ಸೆನೆಟ್ ಸಭಾಂಗಣದಲ್ಲಿ ನಡೆಯಲಿದೆ.

ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷ ಅರ್ಜುನ ದೇವ ಅಧ್ಯಕ್ಷತೆಯಲ್ಲಿ ರೇಷ್ಮೆ ಮತ್ತು ಜವಳಿ ಖಾತೆ ಸಚಿವ ಎಚ್.ಎಂ. ರೇವಣ್ಣ ಅವರು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿವಿ ಉಪಕುಲಪತಿ ಡಾ. ಎಂ.ಎಸ್. ತಿಮ್ಮಪ್ಪ, ವಿಧಾನ ಸಭಾ ಸದಸ್ಯ ಎಸ್. ಸುರೇಶ್ ಕುಮಾರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಗುಡಿಹಳ್ಳಿ ನಾಗರಾಜು, ಹಿಂದುಳಿದ ಆಯೋಗದ ಸದಸ್ಯ ಡಾ. ಟಿ.ಕೆ. ರವಿ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ ಮೊದಲಾದವರು ಭಾಗವಹಿಸಲಿದ್ದಾರೆ.

– ಕಾಶಿ ಜಗನ್ನಾಥ್

2 THE VIJAY TIMES
TUESDAY 8 APRIL 2003

Report only truth, Revanna tells press

VIJAY TIMES NEWS



Bangalore: "Newspapers should emphasise on reporting the truth in order to gain the appreciation of the public," said Sericulture and Textiles Minister H.M Revanna (in picture).

Speaking at a function to mark the first anniversary of the Press Movement, he said if reporters do not report the truth, it could cause unnecessary damage to the image and reputation of people.

He also called upon journalists not to express their personal views while filing in a report. Speaking on the Press Movement, he said it should go on to ensure that the readership in the state increases. BJP MLA Suresh Kumar, who was present as the chief guest expressed that people should get addicted to newspapers. He also quoted the example of Kerala where the readership was high.

The MLA was all praises for Vijay Karnataka, which he felt had captured the market due to its low price and good reach. He said if all newspapers worked in this direction, the readership in the state will increase.

President of the Pathrika Academy, Arjun Dev, Vice-Chancellor of Bangalore University, M S Thimappa, President of the Working Journalists' Association, Gudihalli Nagraj, member of the Backward and Minorities Commission, Dr B K Ravi, Honourary Secretary of the of Sheshadripuram Education Trust, W P Krishna and President of the Press Movement, Basavaraju Doddamani, were present.

ಬೆಂಗಳೂರು ಸಂಜೀವಾಣಿ ಸೋಮವಾರ 7 ಏಪ್ರಿಲ್ 2003 ಪುಟ 5

ಪತ್ರಿಕೆಯವರಿಗೆ ಸಚಿವ ರೇವಣ್ಣ ಬುದ್ಧಿವಾದ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಏ. ೭- ಪತ್ರಿಕಾರಂಗ ಜನರ ಜೀವನಾಡಿ ಹಾಗಾಗಿ ಪತ್ರಿಕೆಗಳ ಬರಹಗಳು, ವರದಿಗಳು ಸತ್ಯಕ್ಕೆ ಹತ್ತಿರವಾಗಿರಬೇಕು ಎಂದು ರೇಷ್ಮೆ ಮತ್ತು ಜವಳಿ ಖಾತೆ ಸಚಿವ ಹೆಚ್.ಎಂ. ರೇವಣ್ಣ ಅವರು ಇಂದಿಲ್ಲಿ ಅಭಿಪ್ರಾಯಪಟ್ಟರು.

ವರದಿಗಾರರು ಸತ್ಯಾಂಶವನ್ನು ಬದಿಗೊತ್ತಿ ವಸ್ತುಸ್ಥಿತಿಯನ್ನು ಮರೆಮಾಚಿದರೆ ತೊಂದರೆ ಉಂಟಾಗುವುದು ಸಹ. ಇಂತಹ ತೊಂದರೆಗಳು ರಾಜಕಾರಣಿಗಳಲ್ಲಿಯೇ ಹೆಚ್ಚು ಇದರ ಅನುಭವ ನನಗೂ ಆಗಿದೆ ಎಂದರು.

ಪ್ರತಿದಿನ ಎದ್ದೊಡನೆ ರಾಜಕಾರಣಿಗಳು ಪತ್ರಿಕೆಗಳನ್ನು ಓದುತ್ತಾರೆ ಎಂದ ಅವರು ಪತ್ರಿಕೆಗಳು ಪ್ರತಿ ಕುಗ್ರಾಮಕ್ಕು ತಲುಪಬೇಕು ಎಂದರು.

ಪತ್ರಿಕಾ ಚಳವಳಿಯ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಪ್ರತಿಯೊಬ್ಬರು ಕೊಂಡು ಓದುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಕೇರಳ ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಿರುವುದರಿಂದಲೇ ಪತ್ರಿಕೆಗಳ ಪ್ರಸಾರ ಸಂಖ್ಯೆಯು ಹೆಚ್ಚಿವೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಾಸಕ ಸುರೇಶ್‌ಕುಮಾರ್ ಅವರು ಮಾತನಾಡಿ ಟಿ.ವಿ. ನೋಡುವವರ ಸಂಖ್ಯೆ ಶೇ. 75. ಆದರೆ ಪತ್ರಿಕೆಗಳನ್ನು ಓದುವವರ ಸಂಖ್ಯೆ ಕೇವಲ ಶೇ. 16 ರಷ್ಟು ಇದು ಬದಲಾಗಬೇಕು. ಜನರು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಕೆಲವು ಪತ್ರಿಕೆಗಳು ಸುದ್ದಿ ಪತ್ರಿಕೆಗಳಾಗಿ ಉಳಿದಿಲ್ಲ. ಅನೇಕರನ್ನು ಬಲಿಪಶುವನ್ನಾಗಿಸಲು ಪತ್ರಿಕೆಗಳನ್ನು ಉಳಿಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ರಾಜ್ಯದ ಜನರಲ್ಲಿ ಓದುವ ಕಿಚ್ಚು ಹೆಚ್ಚಿಸಬೇಕು. ಕನ್ನಡ ಪ್ರಧಾನ ಪತ್ರಿಕೆಗಳು ಇತರೆ ರಾಜ್ಯದ ಪತ್ರಿಕೆಗಳಿಗೆ ಮಾದರಿಯಾಗಬೇಕು ಎಂದರು.


ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಎಂ.ಎಸ್. ತಿಮ್ಮಪ್ಪ ಅವರು ಮಾತನಾಡಿ ಪತ್ರಿಕೆಗಳು ರಾಜಕೀಯವನ್ನು ಹೆಚ್ಚೆಚ್ಚು ಬಳಸಿಕೊಳ್ಳುತ್ತಿವೆ ಎಂದು ದೂರಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಎನ್. ಅರ್ಜುನದೇವ ಅವರು ಮಾತನಾಡಿ ಪತ್ರಿಕೆಗಳನ್ನು ಓದುವುದರಿಂದ ವಂಚಿತರಾದವರು ಜ್ಞಾನದಿಂದಲೇ ವಂಚಿತರಾಗುತ್ತಾರೆ ಎಂದು ಎಚ್ಚರಿಸಿದರು.

ಪತ್ರಿಕೆಗಳನ್ನು ಓದುವುದರಿಂದ ತಕ್ಷಣದ ತಾಜಾ ಸುದ್ದಿ ಸಿಗುತ್ತದೆ. ಶಾಲಾ-ಕಾಲೇಜುಗಳಲ್ಲಿ ಪಠ್ಯಪುಸ್ತಕಗಳನ್ನು ಅಧ್ಯಯನ ಮಾಡಬಹುದು. ಆದರೆ ಪತ್ರಿಕೆಗಳನ್ನು ಓದುವುದರಿಂದ ಅದಕ್ಕೂ ಹೆಚ್ಚು ಜ್ಞಾನ ಸಿಗುತ್ತದೆ ಎಂದರು.

ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಡಾ. ಬಿ.ಕೆ. ರವಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಪತ್ರಿಕಾ ಚಳವಳಿಯ ಅಧ್ಯಕ್ಷ ಬಸವರಾಜ ದೊಡ್ಡಮನಿ ಅವರು [illegible].

ಪುಟ ೬ ಈ ಸಂಜೆ ಸೋಮವಾರ ೭-೪-೨೦೦೩



ಪತ್ರಿಕಾ ಚಳವಳಿ ನಗರದಲ್ಲಿಂದು ಏರ್ಪಡಿಸಿದ್ದ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಚಿವ ಎಚ್.ಎಂ.ರೇವಣ್ಣ, ಶಾಸಕ ಸುರೇಶ್‌ಕುಮಾರ್, ಬೆಂಗಳೂರು ವಿ.ವಿ. ಉಪಕುಲಪತಿ ಡಾ. ಎಂ.ಎಸ್.ತಿಮ್ಮಪ್ಪ ಅಕಾಡೆಮಿ ಅಧ್ಯಕ್ಷ ಎನ್.ಅರ್ಜುನದೇವ, ಶೇಷಾದ್ರಿಪುರಂ ದತ್ತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಬೆಂಗಳೂರು ಸಂಜೆವಾಣಿ. ಸೋಮವಾರ 7 ಏಪ್ರಿಲ್ 2003 ಪುಟ 5

ಪತ್ರಿಕೆಯವರಿಗೆ ಸಚಿವ ರೇವಣ್ಣ ಬುದ್ಧಿವಾದ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಏ. ೭- ಪತ್ರಿಕಾರಂಗ ಜನರ ಜೀವನಾಡಿ ಹಾಗಾಗಿ ಪತ್ರಿಕೆಗಳ ಬರಹಗಳು, ವರದಿಗಳು ಸತ್ಯಕ್ಕೆ ಹತ್ತಿರವಾಗಿರಬೇಕು ಎಂದು ರೇಷ್ಮೆ ಮತ್ತು ಜವಳಿ ಖಾತೆ ಸಚಿವ ಹೆಚ್.ಎಂ. ರೇವಣ್ಣ ಅವರು ಇಂದಿಲ್ಲಿ ಅಭಿಪ್ರಾಯಪಟ್ಟರು.

ವರದಿಗಾರರು ಸತ್ಯಾಂಶವನ್ನು ಬದಿಗೊತ್ತಿ ವಸ್ತುಸ್ಥಿತಿಯನ್ನು ಮರೆಮಾಚಿದರೆ ತೊಂದರೆ ಉಂಟಾಗುವುದು ಸಹ. ಇಂತಹ ತೊಂದರೆಗಳು ರಾಜಕಾರಣಿಗಳಲ್ಲಿಯೇ ಹೆಚ್ಚು ಇದರ ಅನುಭವ ನನಗೂ ಆಗಿದೆ ಎಂದರು.

ಪ್ರತಿದಿನ ಎದ್ದೊಡನೆ ರಾಜಕಾರಣಿಗಳು ಪತ್ರಿಕೆಗಳನ್ನು ಓದುತ್ತಾರೆ ಎಂದ ಅವರು ಪತ್ರಿಕೆಗಳು ಪ್ರತಿ ಕುಗ್ರಾಮಕ್ಕು ತಲುಪಬೇಕು ಎಂದರು.

ಪತ್ರಿಕಾ ಚಳವಳಿಯ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಪ್ರತಿಯೊಬ್ಬರು ಕೊಂಡು ಓದುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಕೇರಳ ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಿರುವುದರಿಂದಲೇ ಪತ್ರಿಕೆಗಳ ಪ್ರಸಾರ ಸಂಖ್ಯೆಯು ಹೆಚ್ಚಿವೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಾಸಕ ಸುರೇಶ್‌ಕುಮಾರ್ ಅವರು ಮಾತನಾಡಿ ಟಿ.ವಿ. ನೋಡುವವರ ಸಂಕ್ಯೆ ಶೇ. 75. ಆದರೆ ಪತ್ರಿಕೆಗಳನ್ನು ಓದುವವರ ಸಂಖ್ಯೆ ಕೇವಲ ಶೇ. 16 ರಷ್ಟು ಇದು ಬದಲಾಗಬೇಕು. ಜನರು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಕೆಲವು ಪತ್ರಿಕೆಗಳು ಸುದ್ದಿ ಪತ್ರಿಕೆಗಳಾಗಿ ಉಳಿದಿಲ್ಲ. ಅನೇಕರನ್ನು ಬಲಿಪಶುವನ್ನಾಗಿಸಲು ಪತ್ರಿಕೆಗಳನ್ನು ಉಳಿಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ರಾಜ್ಯದ ಜನರಲ್ಲಿ ಓದುವ ಕಿಚ್ಚು ಹೆಚ್ಚಿಸಬೇಕು. ಕನ್ನಡ ಪ್ರಧಾನ ಪತ್ರಿಕೆಗಳು ಇತರೆ ರಾಜ್ಯದ ಪತ್ರಿಕೆಗಳಿಗೆ ಮಾದರಿಯಾಗಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಎಂ.ಎಸ್. ತಿಮ್ಮಪ್ಪ ಅವರು ಮಾತನಾಡಿ ಪತ್ರಿಕೆಗಳು ರಾಜಕೀಯವನ್ನು ಹೆಚ್ಚೆಚ್ಚು ಬಳಸಿಕೊಳ್ಳುತ್ತಿವೆ ಎಂದು ದೂರಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಎನ್. ಅರ್ಜುನದೇವ ಅವರು ಮಾತನಾಡಿ ಪತ್ರಿಕೆಗಳನ್ನು ಓದುವುದರಿಂದ ವಂಚಿತರಾದವರು ಜ್ಞಾನದಿಂದಲೇ ವಂಚಿತರಾಗುತ್ತಾರೆ ಎಂದು ಎಚ್ಚರಿಸಿದರು.

ಪತ್ರಿಕೆಗಳನ್ನು ಓದುವುದರಿಂದ ತಕ್ಷಣದ ತಾಜಾ ಸುದ್ದಿ ಸಿಗುತ್ತದೆ. ಶಾಲಾ-ಕಾಲೇಜುಗಳಲ್ಲಿ ಪಠ್ಯಪುಸ್ತಕಗಳನ್ನು ಅಧ್ಯಯನ ಮಾಡಬಹುದು. ಆದರೆ ಪತ್ರಿಕೆಗಳನ್ನು ಓದುವುದರಿಂದ ಅದಕ್ಕೂ ಹೆಚ್ಚು ಜ್ಞಾನ ಸಿಗುತ್ತದೆ ಎಂದರು.

ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಡಾ. ಬಿ.ಕೆ. ರವಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ, ಪತ್ರಿಕಾ ಚಳವಳಿಯ ಅಧ್ಯಕ್ಷ ಬಸವರಾಜ ದೊಡ್ಡಮನಿ ಅವರು ಮಾತನಾಡಿದರು.

ಉದಯವಾಣಿ

ಏಪ್ರಿಲ್ 5, 2003

ಜಸ್ಟ್‌ಪಾಸ್‌ನಿಂದ ಫಸ್ಟ್‌ಕ್ಲಾಸ್‌ವರೆಗೆ...

(ಒಂದನೇ ಪುಟದಿಂದ)

'ಕೇವಲ ಹಣ ಮಾಡಬೇಕೆಂಬ ಉದ್ದೇಶದಿಂದ ಈ ಕಾಲೇಜು ಸ್ಥಾಪಿಸಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಕೋರ್ಸ್‌ಗಳನ್ನು ಹೆಚ್ಚಿಸಬೇಕೆಂಬ ಹಂಬಲವೂ ಇಲ್ಲ. ಬಡ ಹಾಗೂ ಕಡಿಮೆ ಅಂಕ ಪಡೆದ ವಿದ್ಯಾ ರ್ಥಿಗಳಿಗೆ ಪ್ರತಿಷ್ಠಿತ ಕಾಲೇಜಿಗಿಂತ ಕಡಿಮೆಯಿಲ್ಲದ ಶಿಕ್ಷಣ ನೀಡಬೇಕೆಂದೇ ಈ ಪ್ರಯತ್ನಕ್ಕೆ ಮುಂದಾಗಿದ್ದೇವೆ' ಎಂದು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಡಬ್ಲ್ಯೂ. ಪಿ. ಕೃಷ್ಣ ಹೇಳುತ್ತಾರೆ. ಕಾಲೇಜು ನಿರ್ಮಾಣದಲ್ಲಿ ಕೃಷ್ಣರ ಸಾಹಸಕ್ಕೆ ಕೈ ಜೋಡಿಸಿದವರೆಂದರೆ ಸಂಘದ ಅಧ್ಯಕ್ಷ ಡಬ್ಲ್ಯೂ. ಪಿ. ಶಿವಕುಮಾರ್, ಎಸ್. ಸತ್ಯನಾರಾಯಣ ರಾವ್ ಮುಂತಾದವರು. ಅಲ್ಲದೆ ಅಂದಿನ ಶಿಕ್ಷಣ ಸಚಿವ ಜೀವರಾಜ್ ಆಳ್ವರಿಂದಲೂ ಸಾಕಷ್ಟು ಸಹಕಾರ ದೊರೆಯಿತು.

ರಾಮಕೃಷ್ಣಪರಮಹಂಸ, ಸ್ವಾಮಿ ವಿವೇಕಾನಂದ ಪ್ರಭಾವಕ್ಕೊಳಗಾಗಿರುವ ಸಂಘದ



ಈ ಒಂದೆ ಕಾಲೇಜಿನ ತರಗತಿಗಳು ನಡೆಯುತ್ತಿದ್ದ ಸ್ಥಳ

ಸದಸ್ಯರು ತಮ್ಮ ಕಾಲೇಜಿನ ವಿದ್ಯಾರ್ಥಿಗಳೂ ಸಚ್ಚಾರಿತ್ರ್ಯ, ಶಿಸ್ತು-ಸಂಯಮ, ಆತ್ಮಶಕ್ತಿ ಸದ್ಗುಣಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂಥ ವಾತಾವರಣವನ್ನು ನಿರ್ಮಿಸಿದ್ದಾರೆ. ಅಂತೆಯೇ ಕನ್ನಡ ಮಾಧ್ಯಮದ ಹಾಗೂ ಕಡಿಮೆ ಅಂಕ ಪಡೆದು ಕೀಳರಿಮೆಯಿಂದ ಮತ್ತು 'ವಿಜ್ಞಾನ ಭಯ'ದಿಂದ ಕಾಲೇಜು ಸೇರುವ ವಿದ್ಯಾರ್ಥಿಗಳು ಎರಡು ವರ್ಷಗಳಲ್ಲಿ ಸಂಪೂರ್ಣ ಬದಲಾಗಿರುತ್ತಾರೆ. ಉತ್ತಮ ಅಂಕಗಳು, ಸುಂದರ ಭವಿಷ್ಯ ಜೊತೆಗೆ ಏನನ್ನಾದರೂ ಸಾಧಿಸಿಯೇನೆಂಬ ಆತ್ಮವಿಶ್ವಾಸವನ್ನು ಮಡಿಲಿಗೆ ಹಾಕಿಕೊಂಡು ಹೊರ ಬೀಳುತ್ತಾರೆ.

'ನಮ್ಮಲ್ಲಿರುವ ಅರ್ಪಣಾ ಭಾವದ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗಿನ ಸಕಾರಾತ್ಮಕ ಬಾಂಧವ್ಯ, ಆಗಿಂದಾಗ್ಗೆ ನಡೆಸುವ ವಿಚಾರ ಸಂಕಿರಣಗಳು, ವಿದ್ಯಾರ್ಥಿಗಳನ್ನು ಶಿಕ್ಷಣದಲ್ಲಿ ಸೂಕ್ತ ರೀತಿಯಲ್ಲಿ ತೊಡಗಿಸುವುದು ಮುಂತಾದ ಕ್ರಮಗಳಿಂದ 'ಜಸ್ಟ್ ಪಾಸ್' ಆಗಿ ಬರುವ ವಿದ್ಯಾರ್ಥಿಯನ್ನು 'ಫಸ್ಟ್ ಕ್ಲಾಸ್' ಮಟ್ಟಕ್ಕೆ ಏರಿಸಲು ಸಾಧ್ಯವಾಗುತ್ತೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ ಕಾಲೇಜು ಪ್ರಾಂಶುಪಾಲರಾದ ಜಿ. ಪುಷ್ಪಲತಾ.

ಒಂದೆಡೆ ರ‍್ಯಾಂಕ್ ಗಳಿಸಿದ ವಿದ್ಯಾರ್ಥಿಗಳಿಗೆ 'ಪ್ರವೇಶ ಪರೀಕ್ಷೆ' ನಡೆಸಿ ಡೊನೇಶನ್ ಸಹಿತ ಸೀಟು ಕೊಡುವ ಪ್ರತಿಷ್ಠಿತ ಕಾಲೇಜುಗಳು, ಇನ್ನೊಂದೆಡೆ ಡೊನೇಶನ್ ಪಡೆದರೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲವಾಗಿರುವ ಕಾಲೇಜುಗಳು, ಇವುಗಳ ನಡುವೆ ಬಡ ಹಾಗೂ ಸಾಧಾರಣ ಬುದ್ಧಿಮತ್ತೆಯ ವಿದ್ಯಾರ್ಥಿಗಳಿಗೆ ವರದಾನವಾಗಿದೆ ಈ ಕಾಲೇಜು.



ಜಸ್ಟ್ ಪಾಸ್‌ನಿಂದ ಫಸ್ಟ್ ಕ್ಲಾಸ್‌ವರೆಗೆ...

■ ಅನಿಲ್ ಗುಮ್ಮನಹಳ್ಳಿ

ಅಸಂಖ್ಯಾತ ವಿದ್ಯಾರ್ಥಿಗಳ ಸಂತೆ, ಖ್ಯಾತ ಅಧ್ಯಾಪಕರ ಮಂಧೆ, 'ಭಯಂಕರ' ವಿಸ್ತಾರದ ಕಟ್ಟಡ, ಸಿಟಿ ಸೆಂಟರ್ ಲೊಕಾಲಿಟಿ - ಇಂಥ ಟ್ರಂಪ್ ಕಾರ್ಡ್‌ಗಳಾವುವೂ ಈ ಕಾಲೇಜಿನ ತೆಕ್ಕೆಯಲಿಲ್ಲ. ಆದರೆ ಕಡಿಮೆ ಶುಲ್ಕ ಪಡೆದು, ಸಾಧಾರಣ ಅಂಕ ಪಡೆದ ವಿದ್ಯಾರ್ಥಿಗಳಿಗೂ ಪ್ರವೇಶ ನೀಡಿ ಯಾವುದೇ ಪ್ರತಿಷ್ಠಿತ ಕಾಲೇಜಿಗಿಂತ ಕಡಿಮೆಯಲ್ಲದ ಗುಣಮಟ್ಟ ಮತ್ತು ಶಿಸ್ತುಬದ್ಧ ವ್ಯಾಸಂಗ ನಾಡುವ ಮೂಲಕ ಶಿಕ್ಷಣ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಾ ಬಂದಿದೆ ಸದಾಶಿವ ನಗರ ಪದವಿ ಪೂರ್ವ ಕಾಲೇಜು.

ನಾಗಶೆಟ್ಟಿಹಳ್ಳಿಯಲ್ಲಿರುವ ಈ ಕಾಲೇಜು ಸದಾಶಿವನಗರ ಯುವಕರ ಸಂಘದ ಹಲವು ಸಾಹಸಗಳಲ್ಲೊಂದು. ಅಂತೆಯೇ ಕಾಲೇಜು ಬೇರೆಡೆ ಇದ್ದರೂ ಸದಾಶಿವನಗರದ ಹೆಸರಿನೊಂದಿಗೆ ತಳುಕು ಹಾಕಿಕೊಂಡಿದೆ.

ಉದ್ಯಾನವನ ನಿರ್ಮಾಣ, ರಕ್ತದಾನ, ನಾಗರಿಕ ಜಾಗೃತಿ ಮುಂತಾದ ಹಲವು ಹತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಈ ಸಂಘದ ಯುವಕರು, ಬಡ ಹಾಗೂ ಸಾಧಾರಣ ಬುದ್ಧಿಮತ್ತೆಯ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವ್ಯಾಸಂಗ ನೀಡುವ ಉದ್ದೇಶದಿಂದ 1988ರಲ್ಲಿ ಈ ಕಾಲೇಜನನ್ನು ಸ್ಥಾಪಿಸಿದರು. ಆಗ ಅಶ್ವತ್ಥ ನಗರದಲ್ಲಿದ್ದ ಕಾಲೇಜು ಕಳೆದ ವರ್ಷ ವಷ್ಟೇ ನಾಗಶೆಟ್ಟಿಹಳ್ಳಿಯ ಈಗಿನ ಕಟ್ಟಡಕ್ಕೆ ಸ್ಥಳಾಂತರಗೊಂಡಿತು.

ದ್ವಿತೀಯ ಪಿ.ಯು.ಸಿ. ವಿಜ್ಞಾನ, ವಾಣಿಜ್ಯ ವಿಷಯಗಳನ್ನು ಬೋಧಿಸುವ ಈ ಕಾಲೇಜಿನಲ್ಲಿರುವ ವಿದ್ಯಾರ್ಥಿ - ವಿದ್ಯಾರ್ಥಿನಿಯರ ಸಂಖ್ಯೆ ಕೇವಲ 260. ಆದರೆ ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ್ ಕೇಂದ್ರ ಹಾಗೂ ಉತ್ತಮ ಉಪನ್ಯಾಸಕರನ್ನು ಹೊಂದಿದೆ.

...ಪುಟ 3ಕ್ಕೆ



ಉದಯವಾಣಿ

ಏಪ್ರಿಲ್ 5, 2003

ಜಸ್ಟ್ ಪಾಸ್‌ನಿಂದ ಫಸ್ಟ್ ಕ್ಲಾಸ್‌ವರೆಗೆ...

(ಒಂದನೇ ಪುಟದಿಂದ)

'ಕೇವಲ ಹಣ ಮಾಡಬೇಕೆಂಬ ಉದ್ದೇಶದಿಂದ ಈ ಕಾಲೇಜು ಸ್ಥಾಪಿಸಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಕೋರ್ಸ್‌ಗಳನ್ನು ಹೆಚ್ಚಿಸಬೇಕೆಂಬ ಹಂಬಲವೂ ಇಲ್ಲ. ಬಡ ಹಾಗೂ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಾಲೇಜಿಗಿಂತ ಕಡಿಮೆಯಿಲ್ಲದ ಶಿಕ್ಷಣ ನೀಡಬೇಕೆಂದೇ ಈ ಪ್ರಯತ್ನಕ್ಕೆ ಮುಂದಾಗಿದ್ದೇವೆ' ಎಂದು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಡಬ್ಲ್ಯೂ. ಪಿ. ಕೃಷ್ಣ ಹೇಳುತ್ತಾರೆ. ಕಾಲೇಜು ನಿರ್ಮಾಣದಲ್ಲಿ ಕೃಷ್ಣರ ಸಾಹಸಕ್ಕೆ ಕೈ ಜೋಡಿಸಿದವರೆಂದರೆ ಸಂಘದ ಅಧ್ಯಕ್ಷ ಡಬ್ಲ್ಯೂ. ಪಿ. ಶಿವಕುಮಾರ್, ಎಸ್. ಸತ್ಯನಾರಾಯಣ ರಾವ್ ಮುಂತಾದವರು. ಅಲ್ಲದೆ ಅಂದಿನ ಶಿಕ್ಷಣ ಸಚಿವ ಜೀವರಾಜ್ ಆಳ್ವರಿಂದಲೂ ಸಾಕಷ್ಟು ಸಹಕಾರ ದೊರೆಯಿತು.

ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಪ್ರಭಾವಕ್ಕೊಳಗಾಗಿರುವ ಸಂಘದ



ಈ ಹಿಂದೆ ಕಾಲೇಜಿನ ತರಗತಿಗಳು ನಡೆಯುತ್ತಿದ್ದ ಸ್ಥಳ

ಸದಸ್ಯರು ತಮ್ಮ ಕಾಲೇಜಿನ ವಿದ್ಯಾರ್ಥಿಗಳೂ ಸಚ್ಚಾರಿತ್ರ್ಯ, ಶಿಸ್ತು-ಸಂಯಮ, ಆತ್ಮಶಕ್ತಿ ಸದ್ಗುಣಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂಥ ವಾತಾವರಣವನ್ನು ನಿರ್ಮಿಸಿದ್ದಾರೆ. ಅಂತೆಯೇ ಕನ್ನಡ ಮಾಧ್ಯಮದ ಹಾಗೂ ಕಡಿಮೆ ಅಂಕ ಪಡೆದು ಕೀಳರಿಮೆಯಿಂದ ಮತ್ತು 'ವಿಜ್ಞಾನ ಭಯ'ದಿಂದ ಕಾಲೇಜು ಸೇರುವ ವಿದ್ಯಾರ್ಥಿಗಳು ಎರಡು ವರ್ಷಗಳಲ್ಲಿ ಸಂಪೂರ್ಣ ಬದಲಾಗಿರುತ್ತಾರೆ. ಉತ್ತಮ ಅಂಕಗಳು, ಸುಂದರ ಭವಿಷ್ಯ ಜೊತೆಗೆ ಏನನ್ನಾದರೂ ಸಾಧಿಸಿಯೇನೆಂಬ ಆತ್ಮವಿಶ್ವಾಸವನ್ನು ಮಡಿಲಿಗೆ ಹಾಕಿಕೊಂಡು ಹೊರ ಬೀಳುತ್ತಾರೆ.

'ನಮ್ಮಲ್ಲಿರುವ ಅರ್ಪಣಾ ಭಾವದ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗಿನ ಸಕಾರಾತ್ಮಕ ಬಾಂಧವ್ಯ, ಆಗಿಂದಾಗ್ಗೆ ನಡೆಸುವ ವಿಚಾರ ಸಂಕಿರಣಗಳು, ವಿದ್ಯಾರ್ಥಿಗಳನ್ನು ಶಿಕ್ಷಣದಲ್ಲಿ ಸೂಕ್ತ ರೀತಿಯಲ್ಲಿ ತೊಡಗಿಸುವುದು ಮುಂತಾದ ಕ್ರಮಗಳಿಂದ 'ಜಸ್ಟ್ ಪಾಸ್' ಆಗಿ ಬರುವ ವಿದ್ಯಾರ್ಥಿಯನ್ನು 'ಫಸ್ಟ್ ಕ್ಲಾಸ್' ಮಟ್ಟಕ್ಕೆ ಏರಿಸಲು ಸಾಧ್ಯವಾಗುತ್ತೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ ಕಾಲೇಜು ಪ್ರಾಂಶುಪಾಲರಾದ ಜಿ. ಪುಷ್ಪಲತಾ.

ಒಂದೆಡೆ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳಿಗೆ 'ಪ್ರವೇಶ ಪರೀಕ್ಷೆ' ನಡೆಸಿ ಡೊನೇಶನ್ ಸಹಿತ ಸೀಟು ಕೊಡುವ ಪ್ರತಿಷ್ಠಿತ ಕಾಲೇಜುಗಳು, ಇನ್ನೊಂದೆಡೆ ಡೊನೇಶನ್ ಪಡೆದರೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲವಾಗಿರುವ ಕಾಲೇಜುಗಳು, ಇವುಗಳ ನಡುವೆ ಬಡ ಹಾಗೂ ಸಾಧಾರಣ ಬುದ್ಧಿಮತ್ತೆಯ ವಿದ್ಯಾರ್ಥಿಗಳಿಗೆ ವರದಾನವಾಗಿದೆ ಈ ಕಾಲೇಜು.

ಮಾರ್ಚ್ 17, 2003

ಉದಯವಾಣಿ

'ಇಂದಿನ ಸಮಾಜಕ್ಕೆ ಆದರ್ಶ ಶಿಕ್ಷಕರು ಬೇಕಾಗಿದ್ದಾರೆ'



ತುಮಕೂರು

ಇಂದಿನ ಸಮಾಜಕ್ಕೆ ಆದರ್ಶ ಶಿಕ್ಷಕರ ಅಗತ್ಯವಿದೆ ಎಂದು ತುಮಕೂರು ವಿವೇಕಾನಂದ ಆಶ್ರಮದ ಮುಖ್ಯಸ್ಥ ವೀರೇಶಾನಂದ ಸರಸ್ವತಿ ಸ್ವಾಮೀಜಿ ಅವರು ಅಭಿಪ್ರಾಯಪಟ್ಟರು.

ಇತ್ತೀಚೆಗೆ ತಮ್ಮ ಆಶ್ರಮದಲ್ಲಿ ನಡೆದ 'ಶಿಕ್ಷಣ ಅವಲೋಕನ' ಎಂಬ ವಿವೇಕ ಚಿಂತನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಿಗೆ ಪೂರಕವಾದ ಶಿಕ್ಷಣ ದೊರಕುತ್ತಿಲ್ಲ ಎಂದು ವಿಷಾದಿಸಿದ ಅವರು, ಮಕ್ಕಳು ಸಮಾಜದಲ್ಲಿ ಹೇಗೆ ಬದುಕಬೇಕು ಎನ್ನುವ ಶಿಕ್ಷಣವನ್ನು ನೀಡಬೇಕು ಎಂದರು.

'ದುಷ್ಟನಿಗೆ ಸಮಾಜದಲ್ಲಿ ಸ್ಥಾನವಿದೆ. ಆದರೆ ಆತ್ಮವಂಚಕನಿಗೆ ಮಾತ್ರ ಸ್ಥಾನವಿಲ್ಲ' ಎಂಬ ವಿವೇಕಾನಂದರ ವಾಣಿಯನ್ನು ನೆನಪಿಸಿಕೊಂಡ ಅವರು, ದೇವರಿಗಿಂತ ಮನುಷ್ಯ ಸೃಷ್ಟಿ ಅದ್ಭುತ. ಮನುಷ್ಯ ಇಂದು ಅದ್ಭುತವಾಗಿ ಬೆಳೆದಿದ್ದಾನೆ ಎಂದು ಅವರು ಹೇಳಿದರು.

ವೃಂದದಿಂದ ಆಧ್ಯಾತ್ಮಿಕ ಚಿಂತನೆಯನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದರು.


ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸುಮಾರು 150 ಶಿಕ್ಷಕರಿಗೆ ಏರ್ಪಡಿಸಿದ್ದ ಈ ಶಿಕ್ಷಣ ವಿವೇಕ ಚಿಂತನ ಕಾರ್ಯಕ್ರಮದಲ್ಲಿ ವೇದ ಘೋಷ, ಭಗವನ್ನಾಮ ಸಂಕೀರ್ತನೆ ಹಾಗೂ ಕಬೀರ ಬೀರಿದ ಬೆಳಕು ಮುಂತಾದ ಗಾನ ಪ್ರವಚನವನ್ನು ಸ್ವಾಮಿಜಿ ನಡೆಸಿಕೊಟ್ಟರು.

ವೀರೇಶಾನಂದ ಸರಸ್ವತಿ ಸ್ವಾಮೀಜಿ ಅಭಿಮತ

ಶಿಕ್ಷಣ ಕ್ಷೇತ್ರದಲ್ಲಿ ಗುರುವಿನ ಪಾತ್ರ ಮಹತ್ವದ್ದು. ಇಲ್ಲಿ ಗುರು ದೇವರ ಸಾನಿಧ್ಯ ತೋರಿಸುವ ವ್ಯಕ್ತಿ ಎಂದು ತಿಪಟೂರಿನ ಅಡವಪ್ಪ ಪ್ರಥಮ ದರ್ಜೆ ಕಾಲೇಜ್‌ನ ನಿವೃತ್ತ ಪ್ರಾಚಾರ್ಯರಾದ ಚನ್ನಬಸಪ್ಪ ತಿಳಿಸಿದರು.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಉದ್ಯೋಗದ ಭರವಸೆ ಇಲ್ಲ. ಗುರು

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಅಧ್ಯಕ್ಷ ಕೆ.ಎಂ.ನಂಜಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣ, ಎ.ಆರ್. ಶ್ರೀನಿವಾಸಯ್ಯ, ಬಿ.ಜಿ. ಶಿವಶಂಕರ್, ಅರಿಯೂರು ನರಸಿಂಹಮೂರ್ತಿ ಮೊದಲಾದವರು ಉಪಸ್ಥಿತರಿದ್ದರು.



ತುಮಕೂರಿನಲ್ಲಿ ಇತ್ತೀಚೆಗೆ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿ ಆಯೋಜಿಸಿದ್ದ ಶಿಕ್ಷಕರಿಗೆ ಶಿಕ್ಷಕ ಅವಲೋಕನ ಎಂಬ ವಿವೇಕ ಚಿಂತನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥ ವೀರೇಶಾನಂದ ಸರಸ್ವತಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವಾಧ್ಯಕ್ಷ ಪ್ರೊ. ಚನ್ನಬಸಪ್ಪ, ಕಾರ್ಯದರ್ಶಿ ಡಬ್ಲು.ಪಿ. ಕೃಷ್ಣ, ಎ.ಆರ್. ಶ್ರೀನಿವಾಸಯ್ಯ ಹಾಗೂ ಆರ್. ಕೃಷ್ಣ.

ಪುಟ 2 ಪ್ರಜಾವಾಣಿ, ಶನಿವಾರ 15ನೇ ಮಾರ್ಚ್ 2003 B

ವೈಜ್ಞಾನಿಕ ಮನೋಭಾವವನ್ನೂ ರೂಢಿಸಿಕೊಳ್ಳಿ: ನಿಟ್ಟೂರು

ಬೆಂಗಳೂರು, ಮಾರ್ಚ್ 14– ವಿಚಾರವಂತಿಕೆಯೊಂದಿಗೆ ವೈಜ್ಞಾನಿಕ ಮನೋಭಾವವನ್ನೂ ರೂಢಿಸಿಕೊಳ್ಳಿ. ಪಠ್ಯಕ್ರಮದೊಂದಿಗೆ ಪಠ್ಯೇತರ ಚಟುವಟಿಕೆಗಳೂ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಸಹಕಾರಿ ಎಂದು ನಿವೃತ್ತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸ ರಾಯರು ಕರೆ ನೀಡಿದರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಾರ್ಷಿಕೋತ್ಸವ ಮತ್ತು 'ಶತಾಯುಷಿಗಳಾದ ನಿಟ್ಟೂರರಿಗೆ ಅಭಿನಂದನೆಗಳು' ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಮತ್ತೊಬ್ಬ ಮುಖ್ಯ ಅತಿಥಿ ವಿಮರ್ಶಕ ಪ್ರೊ ಎಂ.ಎಚ್.ಕೃಷ್ಣಯ್ಯ ಅವರು ಅಭಿನಂದನಾ ಭಾಷಣದಲ್ಲಿ ದಕ್ಷ, ನಿಷ್ಪಕ್ಷಪಾತ ಕಾರ್ಯನಿರ್ವಹಣೆಗೆ ನಿಟ್ಟೂರರು ಇನ್ನೂಂದು ಹೆಸರಾಗಿದ್ದಾರೆ. ಹೆಸರಿನ ಹಂಬಲ ಒಲ್ಲದ, ಸೇವಾ ಮನೋ ಭಾವವೇ ಮುಖ್ಯವಾಗಿರುವ ಇವರ ಜೀವನ–ಸಾಧನೆ ಇಂದಿನವರಿಗೆ ಉತ್ತಮ ಉದಾಹರಣೆ ಎಂದರು.

ಈ ಸಂದರ್ಭದಲ್ಲಿ ಶತಾಯುಷಿ ನಿಟ್ಟೂರು ಶ್ರೀನಿವಾಸರಾಯರಿಗೆ ಸನ್ಮಾನ ಪತ್ರ ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಕೆ.ಎಂ.ನಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಜೆ ಕಾಲೇಜಿನ ಪ್ರಾಚಾರ್ಯ ಪ್ರೊ.ಎಸ್.ಜಿ.ಮಣ್ಣೂರ್ ಸ್ವಾಗತಿಸಿದರು. ದತ್ತಿಯ ಉಪಾಧ್ಯಕ್ಷರಾದ ಅನಿಲ್ ಕುಮಾರ್, ಎನ್.ಆರ್. ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ ಉಪಸ್ಥಿತರಿದ್ದರು.

ನಂತರ 'ಜಾನಪದ ಸಿರಿ' ಕಾರ್ಯಕ್ರಮ ನಡೆಯಿತು.

Sanjevani dt 14th March 2005

ಶಿಕ್ಷಕರೇ ಮಕ್ಕಳಿಗೆ ಪ್ರಮುಖ ಮಾರ್ಗದರ್ಶಕರು

ಬೆಂಗಳೂರು, ಮಾ. ೧೪- ಒಳ್ಳೆಯ ಆದರ್ಶಗಳನ್ನು ಪಾಲಿಸುವ ಶಿಕ್ಷಕರುಗಳೇ ಇಂದಿನ ಸಮಾಜದ ಅಗತ್ಯ ಎಂದು ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥ ವೀರೇಶಾನಂದ ಸರಸ್ವತಿ ಹೇಳಿದರು.

ಸಮಾಜದಲ್ಲಿ ಮನುಷ್ಯ ಹೇಗೆ ಬದುಕಬೇಕು ಹೇಗೆ ಬಾಳ್ವೆ ನಡೆಸಬೇಕು ಎಂಬುದನ್ನು ಮಕ್ಕಳು ಶಿಕ್ಷಣದ ಮೂಲಕ ಕಲಿಯುತ್ತಾರೆ. ಶಿಕ್ಷಕರೇ ಮಕ್ಕಳ ಪ್ರಮುಖ ಮಾರ್ಗದರ್ಶಕರು ಎಂದವರು ಒತ್ತಿ ಹೇಳಿದರು.

ತುಮಕೂರಿನ ತಮ್ಮ ಆಶ್ರಮದಲ್ಲಿ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿ ಶಿಕ್ಷಕರಿಗಾಗಿ ಆಯೋಜಿಸಿದ್ದ 'ಶಿಕ್ಷಕರಿಗೆ ಶಿಕ್ಷಣ ಅವಲೋಕನ' ಎಂಬ ವಿವೇಕ ಚಿಂತನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದಿನ ಸಮಾಜಕ್ಕೆ ಉತ್ತಮ ಪ್ರತಿಭಾವಂತ ಹಾಗೂ ಸರಳ ವ್ಯಕ್ತಿತ್ವವುಳ್ಳ ಶಿಕ್ಷಕರುಗಳ ಅಗತ್ಯವಿದೆ ಎಂದ ಅವರು ಶಿಕ್ಷಕರು ವಿದ್ಯಾರ್ಥಿಗಳ ಮನ ಗೆಲ್ಲಬೇಕು ಎಂದು ನುಡಿದರು.

ಸುಖ ದುಃಖಗಳೆರಡು ಅನಿವಾರ್ಯ ಮಿತ್ರರು. ಜೀವನದಲ್ಲಿ ಎದುರಾಗುವ ಸಿಹಿ ಕಹಿ ಎಲ್ಲವನ್ನು ಒಂದೇ ರೀತಿ ಅನುಭವಿಸಬೇಕು, ವಿವೇಕದಿಂದ ಬದುಕಬೇಕು. ಶಿಕ್ಷಣ ಪ್ರತಿಯೊಬ್ಬರ ಒಡನಾಡಿಯಾಗಬೇಕು ಎಂದ ಅವರು ಮನುಷ್ಯ ಸೃಷ್ಟಿ ಅದ್ಭುತ. ಇಲ್ಲಿ ದುಷ್ಟನಿಗೆ ಸ್ಥಾನ ಇದೆ. ಆದರೆ ಆತ್ಮ ವಂಚಕನಿಗೆ ಸ್ಥಾನ ವಿಲ್ಲ. ಪ್ರಕೃತಿಯನ್ನೇ ಹತೋಟಿಯಲ್ಲಿಡುವಷ್ಟು ಮನುಷ್ಯ ಬೆಳೆದಿರುವಾಗ ಇಡೀ ಜಗತ್ತು ಆತನ ಗುಲಾಮ ಎಂದು ಅವರು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ~~ಶೇಷಾದ್ರಿಪುರಂ ಶಿಕ್ಷಣ ದತ್ತಿಯ [illegible]~~ ಶಿಕ್ಷಣ ಕ್ಷೇತ್ರದಲ್ಲಿ ಗುರುವಿನ ಪಾತ್ರ ಮಹತ್ವದ್ದು. ಇಲ್ಲಿ ಗುರು ದೇವರ ಸಾನಿಧ್ಯ ತೋರುವ ವ್ಯಕ್ತಿ ಎಂದರು.

ಈಗಿನ ಶಿಕ್ಷಣದಲ್ಲಿ ಉದ್ಯೋಗ ಹಾಗೂ ವೃತ್ತಿಯ ಭರವಸೆಯನ್ನು ನೀಡಲಾಗುತ್ತಿಲ್ಲ. ಹಾಗಾಗಿ ಮಕ್ಕಳಿಗೆ ಸರಳತೆಯನ್ನು ಧಾರೆ ಎರೆಯಬೇಕು ಎಂದು ಶಿಕ್ಷಕರಿಗೆ ಅವರು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಕೆ.ಎಂ. ನಂಜುಪ್ಪ ವಹಿಸಿದ್ದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯು.ಪಿ.ಕೃಷ್ಣ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಜಂಟಿ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಆರ್ಯನ್ ಶಿಕ್ಷಣಸಂಸ್ಥೆ ತುಮಕೂರಿನ ಬಿ.ಜಿ. ಶಿವಶಂಕರ್, ಸಿದ್ಧಗಂಗಾ ಶಿಕ್ಷಕರ ತರಬೇತಿ ಸಂಸ್ಥೆ ತುಮಕೂರಿನ ನಿವೃತ್ತ ಅಧೀಕ್ಷಕ ಅರಿಯೂರು ನರಸಿಂಹಮೂರ್ತಿ ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸುಮಾರು 150 ಶಿಕ್ಷಕರು ಭಾಗವಹಿಸಿದ್ದರು.

ವಿಜಯ ಕರ್ನಾಟಕ
ಗುರುವಾರ 6 ಮಾರ್ಚ್ 2003

ವೈಜ್ಞಾನಿಕ ಮನೋಭಾವ ಅಗತ್ಯ: ನಿಟ್ಟೂರು

ಬೆಂಗಳೂರು, ಮಾ. 5 - ಇಂದು ನಮ್ಮ ಜೀವನ ಶ್ರೀಮಂತವಾಗಿ ಪ್ರಗತಿ ಪಥದಲ್ಲಿ ಸಾಗಲು ಕಾರಣವಾಗಿರುವುದು ನಮ್ಮ ಸ್ವಂತ ಯೋಗ್ಯತೆ, ಪ್ರಯತ್ನ, ನಂಬಿಕೆಗಳಿಂದಲೇ ಹೊರತು ರಾಜಕಾರಣದಿಂದಲ್ಲ. ವಿಚಾರವಂತಿಕೆಯೊಂದಿಗೆ ವೈಜ್ಞಾನಿಕ ಮನೋಭಾವವನ್ನೂ ನೀವು ಮೈಗೂಡಿಸಿಕೊಳ್ಳಿ. ಪಠ್ಯಕ್ರಮದೊಂದಿಗೆ ಪಠ್ಯೇತರ ಚಟುವಟಿಕೆಗಳೂ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹೆಚ್ಚು ಸಹಕಾರಿಯಾಗುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ನುಡಿದರು.

ಇತ್ತೀಚೆಗೆ ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಾರ್ಷಿಕೋತ್ಸವ ಮತ್ತು ಶತಾಯುಷಿಗಳಾದ ನಿಟ್ಟೂರರಿಗೆ ಅಭಿನಂದನೆ ಸಮಾರಂಭದಲ್ಲಿ ಶ್ರೀಯುತರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಹೆಸರಾಂತ ವಿಮರ್ಶಕ ಪ್ರೊ ಎಮ್ ಎಚ್ ಕೃಷ್ಣಯ್ಯ ಮಾತನಾಡಿ, ನೂರು ವರ್ಷಗಳ ಎಲ್ಲಾ ಬದಲಾವಣೆ, ಬೆಳವಣಿಗೆಗಳನ್ನು ಗಮನಿಸುತ್ತಾ, ಗುರುತಿಸುತ್ತಾ, ಒಳ್ಳೆಯದನ್ನು ಸ್ವೀಕರಿಸುತ್ತಲೇ ಬೆಳೆದಂತಹ ನಿಟ್ಟೂರರು ಒಂದು ಶತಮಾನದ ಮಾನಸಿಕ ಕ್ರಿಯಾಶೀಲತೆಯ ಸಂಕೇತವಾಗಿದ್ದಾರೆ ಎಂದರು.

ತಮ್ಮ ವಕೀಲ ವೃತ್ತಿಯ ಜತೆಗೆ ಸತ್ಯಶೋಧನ ಪುಸ್ತಕ ಭಂಡಾರ ಮತ್ತು ಪ್ರಕಾಶನವನ್ನು ಹಿಂದಿ ಪ್ರಚಾರ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದವರಾಗಿದ್ದಾರೆ ಎಂದರು.

ನಿಟ್ಟೂರು ಶ್ರೀನಿವಾಸರಾಯರಿಗೆ ಶಾಲು ಹೊದಿಸಿ, ಸನ್ಮಾನಪತ್ರ ಮತ್ತು ನೆನಪಿನ ಕಾಣಿಕೆಯನ್ನಿತ್ತು ಗೌರವಿಸಲಾಯಿತು.

ಸಂಜೆ ಪದವಿ ಕಾಲೇಜಿನ ಪ್ರಾಚಾರ್ಯ ಎಸ್ ಜಿ ಮಣ್ಣೂರ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಕೆ ಎಂ ನಂಜಪ್ಪ, ದತ್ತಿಯ ಉಪಾಧ್ಯಕ್ಷರುಗಳಾದ ಅನಿಲ್ ಕುಮಾರ್, ಪಂಡಿತಾರಾಧ್ಯ, ಎನ್ ಆರ್ ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ ಪಿ ಕೃಷ್ಣ ಅವರುಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.



ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಾರ್ಷಿಕೋತ್ಸವ ಮತ್ತು ಶತಾಯುಷಿಗಳಾದ ನಿಟ್ಟೂರರಿಗೆ ಅಭಿನಂದನೆ ಸಮಾರಂಭ ನಡೆಯಿತು.

ಸಂಯುಕ್ತ ಕರ್ನಾಟಕ
ದಿನಾಂಕ
5-3-2003

ವಿಚಾರವಂತಿಕೆ ರೂಢಿಸಿಕೊಳ್ಳಲು ನಿಟ್ಟೂರರ ಕರೆ

ಬೆಂಗಳೂರು, ಮಾ. 4- ವಿಚಾರವಂತಿಕೆಯೊಂದಿಗೆ ವೈಜ್ಞಾನಿಕ ಮನೋಭಾವನೆಯನ್ನು ರೂಢಿಸಿಕೊಳ್ಳಬೇಕೆಂದು ನಿವೃತ್ತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಾರ್ಷಿಕೋತ್ಸವ ಹಾಗೂ ತಮಗೆ ನೀಡಿದ ಸನ್ಮಾನ ಸ್ವೀಕರಿಸಿ ಶತಾಯುಷಿ ನಿಟ್ಟೂರು ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಹೆಸರಾಂತ ವಿಮರ್ಶಕ ಪ್ರೊ. ಎಂ.ಎಚ್. ಕೃಷ್ಣಯ್ಯ ಅಭಿನಂದನಾ ಭಾಷಣ ಮಾಡಿದರು. ಪ್ರಾಚಾರ್ಯ ಪ್ರೊ. ಎಸ್.ಜಿ. ಮಣ್ಣೂರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದತ್ತಿಯ ಉಪಾಧ್ಯಕ್ಷರುಗಳಾದ ಅನಿಲ್‌ಕುಮಾರ್, ಪಂಡಿತಾರಾಧ್ಯ ಎಸ್.ಆರ್., ಗೌರವ ಪ್ರಧಾನ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಜಾನಪದ ಲೋಕದ ಕಲಾವಿದರಿಂದ ಜಾನಪದ ಮೇಳವನ್ನು ಆಯೋಜಿಸಲಾಗಿತ್ತು.

ಬೆಂಗಳೂರು ಸಂಜೆವಾಣಿ ಮಂಗಳವಾರ 4 ಮಾರ್ಚ್ 2003 ಪುಟ 3



ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ, ಶತಾಯುಷಿ ನಿಟ್ಟೂರು ಶ್ರೀನಿವಾಸರಾಯರನ್ನು ಸನ್ಮಾನಿಸಲಾಯಿತು.

4/3/03

ಓದು ಬಲ್ಲವರೆಲ್ಲ ಜ್ಞಾನಿಗಳಲ್ಲ: ಸಿಂಧ್ಯಾ

ಬೆಂಗಳೂರು, ಫೆ. 26- 'ಅಕ್ಷರ ಕಲಿಕೆಯೇ ಬೇರೆ. ಜ್ಞಾನ ಸಂಪಾದನೆಯೇ ಬೇರೆ. ಶಿಕ್ಷಣ ಕಲಿತವರೆಲ್ಲ ಜ್ಞಾನಿಗಳಾ[illegible]ವ ಸಾಧ್ಯತೆ ತುಂಬಾ ಕಡಿಮೆ. ಹಾಗಾಗಿ, ಇಂದು ಭಾರತೀಯ ಜೀವನ ಪದ್ಧತಿಯನ್ನು ಸಾರುವ ಶಿಕ್ಷಣವನ್ನು ಎಳೆಯ ಮಕ್ಕಳಿಗೆ ನೀಡಬೇಕಾದ ಅವಶ್ಯಕತೆ ಇದೆ' ಎಂದು ಮಾಜಿ ಸಚಿವ, ಶಾಸಕ ಪಿ.ಜಿ. ಆರ್. ಸಿಂಧ್ಯಾ ಅಭಿಪ್ರಾಯಪಟ್ಟರು.



ಇತ್ತೀಚೆಗೆ ವಿವೇಕಾನಂದ ಯುವ ವೇದಿಕೆಯ ವಾರ್ಷಿಕ ಸಂಚಿಕೆ 'ವಿವೇಕ ಯುಗ'ವನ್ನು ಪ್ರತಿಪಕ್ಷದ ನಾಯಕ ಪಿ.ಜಿ.ಆರ್. ಸಿಂಧ್ಯಾ ಬಿಡುಗಡೆ ಮಾಡಿದರು.

ನಗರದ ವಿವೇಕಾನಂದ ಯುವ ವೇದಿಕೆಯು ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ವ್ಯಕ್ತಿತ್ವ ವಿಕಸನ ಜೀವನ ಶಿಕ್ಷಣ' ಪ್ರಶಸ್ತಿ ಪ್ರದಾನ ಹಾಗೂ 'ವಿವೇಕಯುಗ' ವಾರ್ಷಿಕ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದು ದೇಶದ ಎಲ್ಲಾ ರಂಗಗಳಲ್ಲಿಯೂ ಕಲುಷಿತ ವಾತಾವರಣ ತುಂಬಿದೆ. ಹಾಗಾಗಿ ಚಿಕ್ಕ ಮಕ್ಕಳ ಮನಸ್ಸಿನಲ್ಲಿ ಬೇರೂರುವಂತೆ ಸ್ವಾಮಿ ವಿವೇಕಾನಂದರ ಚಿಂತನೆ ಬಿತ್ತಬೇಕು. ಶಾಂತಿ ಸೌಹಾರ್ದದ ಬದುಕಿನೊಂದಿಗೆ ಮಾನವೀಯ ದೃಷ್ಟಿಕೋನವನ್ನಿರಿಸಿಕೊಂಡು ಒಗ್ಗಟ್ಟಾಗಿ ದೇಶ ಕಟ್ಟಲು ಪ್ರೇರೇಪಿಸಬೇಕು ಎಂದು ಅವರು ಕರೆ ನೀಡಿದರು.


ಶ್ರೀ ರಾಮಕೃಷ್ಣ ಮಠದ ಯತಿ ಶ್ರೀಮತ್ ಮುಕ್ತೇಶ್ವರಾನಂದಜೀ ಮಹಾರಾಜ್ ಕಾರ್ಯಕ್ರಮ ಉದ್ಘಾಟಿಸಿ, ಇಂದು ಸಮಾಜಕ್ಕೆ ಒಳ್ಳೆಯ ಆದರ್ಶದ ಅವಶ್ಯಕತೆ ಇದೆ ಎಂದರು.

ವಿವೇಕಯುಗ ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಲ್. ನಾಗರಾಜ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೃಷ್ಣ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿವಿಧ ಪ್ರೌಢಶಾಲೆಗಳ ಮಕ್ಕಳಿಗೆ ಬಹುಮಾನಗಳನ್ನು, ಶಿಕ್ಷಕರಿಗೆ ನೆನಪಿನ ಕಾಣಿಕೆಗಳನ್ನು ಗಣ್ಯರು ವಿತರಿಸಿದರು.

ವಿವೇಕಾನಂದ ವೇದಿಕೆಯ ಅಧ್ಯಕ್ಷ ಡಿ.ಎಂ. ಹೆಗಡೆ ಸ್ವಾಗತಿಸಿದರು. ಉಪನ್ಯಾಸಕ ಗಣಪತಿ ಹೆಗಡೆ ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ಎಂ. ರವೀಂದ್ರ ವಂದಿಸಿದರು.

ಪುಟ 2 ಪ್ರಜಾವಾಣಿ ಸೋಮವಾರ 3ನೇ ಫೆಬ್ರುವರಿ 2003 B



ಚನ್ನಪಟ್ಟಣ ಸಮೀಪದ ಜಾನಪದ ಲೋಕದ ಆವರಣದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಇತ್ತೀಚೆಗೆ ಏರ್ಪಡಿಸಿದ್ದ 'ಸ್ನೇಹ ಸಮ್ಮಿಲನ' ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ರಾಧಾಕೃಷ್ಣ ಅವರನ್ನು ದತ್ತಿ ಅಧ್ಯಕ್ಷ ಕೆ.ಎಂ. ನಂಜಪ್ಪ, ಉಪಾಧ್ಯಕ್ಷ ಪಂಡಿತಾರಾಧ್ಯ ಹಾಗೂ ಕಾರ್ಯದರ್ಶಿ ಡಬ್ಲ್ಯು.ಪಿ. ಕೃಷ್ಣ ಅವರು ಶಾಲು ಹೊದಿಸಿ ಸನ್ಮಾನಿಸಿದರು.

4/2/03

2 ಜನವಾಹಿನಿ

ಶುಕ್ರವಾರ
ಜನವರಿ 31, 2003

ಜಾನಪದ ಲೋಕದಲ್ಲಿ ಸ್ನೇಹ-ಸಮ್ಮಿಲನ

ದಿನನಿತ್ಯದ ಏಕತಾನತೆಯಿಂದ ಬಿಡುಗಡೆ ನೀಡುವ ಸಲುವಾಗಿ ಇಲ್ಲಿಗೆ ಸಮೀಪದ ಜಾನಪದ ಲೋಕದಲ್ಲಿ ಬೆಂಗಳೂರಿನ ಶೇಷಾದ್ರಿಪುರಂ ದತ್ತಿಯ ವತಿಯಿಂದ ಸ್ನೇಹ-ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಷ್ಟ್ರಪ್ರಶಸ್ತಿ ವಿಜೇತ ಕಲಾವಿದ ಬಾನಂದೂರು ಕೆಂಪಯ್ಯ ಮತ್ತು ಸಂಗಡಿಗರು ಜನಪದ ಗೀತೆಗಳನ್ನು ಹಾಡಿಧರು. ಬಸವರಾಜ ಕೆಸ್ತೂರು, ಬಿ.ಸಿದ್ದರಾಜಯ್ಯ ಮತ್ತಿತರರು ತಮ್ಮ ಹಾಡುಗಾರಿಕೆಯಿಂದ ಎಲ್ಲರನ್ನೂ ರಂಜಿಸಿದರು.

ಹಾಸ್ಯ ಲೇಖಕ ಎಂ.ಎಸ್.ನರಸಿಂಹ ಮೂರ್ತಿ ಅವರು ಜೀವನದಲ್ಲಿ ಹಾಸ್ಯ ಎಂಬ ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟರು. ದತ್ತಿಯ ವಿವಿಧ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ದತ್ತಿಯ ಅಧ್ಯಕ್ಷ ಕೆ.ಎಂ.ನಂಜಪ್ಪ ಅವರು ಸನ್ಮಾನಿಸಿದರು. ದತ್ತಿಯ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ ಪ್ರಾಂಶುಪಾಲ ಎನ್.ಬೈರೇಗೌಡ, ಉಪಾಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಖಜಾಂಚಿ ಹೆಂಜಾರಪ್ಪ ಮತ್ತಿತರ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

2 ಕನ್ನಡಪ್ರಭ, ★★★

ಗುರುವಾರ, 30, ಜನವರಿ 2003

ವೃತ್ತಿಯಲ್ಲಿ ನಿಷ್ಠೆಯಿಂದಿರಲು ಕರೆ

ಕನ್ನಡಪ್ರಭ ವಾರ್ತೆ, ಚನ್ನಪಟ್ಟಣ, ಜ.29

ನಾವು ಮಾಡುವ ವೃತ್ತಿಯಲ್ಲಿ ಪ್ರಾಮಾಣಿಕತೆ, ಸತ್ಯ ನಿಷ್ಠೆಯಿಂದ ಕೂಡಿದಾಗ ನಮ್ಮ ಬಾಳು ಹಸ ನಾಗುತ್ತದೆ ಎಂದು ಬೆಂಗಳೂರು ಶೇಷಾದ್ರಿಪುರಂ ಶಿಕ್ಷಣ ವೃತ್ತಿಯ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ ಹೇಳಿದರು.

ಜಾನಪದ ಲೋಕದಲ್ಲಿ ಏರ್ಪಡಿಸಿದ್ದ ಸ್ನೇಹ-ಸಮ್ಮಿಲನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು, ನಮ್ಮ ಕರ್ತವ್ಯದ ಜೊತೆಯಲ್ಲಿ ಯಶಸ್ಸು ಕಂಡು ಎಲ್ಲರೂ ಪರಸ್ಪರ ಸಂಯಮದಿಂದ ಸಹಬಾಳ್ವೆ ನಡೆಸಬೇಕೆಂದು ಕರೆ ನೀಡಿದರು.

ಅಧ್ಯಕ್ಷ ಕೆ.ಎಂ.ನಂಜಪ್ಪ ದತ್ತಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಚಿನ್ನದ ನಾಣ್ಯವಿತ್ತು ಸನ್ಮಾನಿಸಿದರು.

ರಾಜ್ಯ ಪ್ರಶಸ್ತಿ ವಿಜೇತ ಡಾ।ಬಾನಂದೂರು ಕೆಂಪಯ್ಯ ಹಾಡಿದರು. ಶಶೀರ್, ಶಿಲ್ಪ, ಹೇಮ, ಮಧುಕರ್ ಅವರ ನೃತ್ಯ ಪ್ರದರ್ಶನವಿತ್ತು.

ಎಂ.ಎನ್.ನರಸಿಂಹಮೂರ್ತಿ ಅವರ ಹಾಸ್ಯ ಕಾರ್ಯಕ್ರಮವಿತ್ತು.

ಎನ್.ಆರ್.ಪಂಡಿತಾರಾಧ್ಯ, ಖಜಾಂಚಿ ಹೆಂಜಾರಪ್ಪ, ಜಂಟಿ ಕಾರ್ಯದರ್ಶಿ ಎ.ಆರ್.ಶ್ರೀನಿವಾಸಯ್ಯ, ಧರ್ಮದರ್ಶಿ ಡಬ್ಲ್ಯೂ.ಜೆ.ರಾಮಕೃಷ್ಣ, ಟಿ.ಶಿವಕುಮಾರ್, ಕೆ.ಕೃಷ್ಣ ಸ್ವಾಮಿ, ಸರೋಜ ನಂಜಪ್ಪ, ಟಿ.ಎನ್.ಮಂಜುಳಾದೇವಿ ಹಾಜರಿದ್ದರು.

ಶಿಕ್ಷಣ ಸಂಸ್ಥೆ ನೌಕರರ -ಟ್ರಸ್ಟಿಗಳ ಸ್ನೇಹ ಸಮ್ಮಿಲನ

ಚನ್ನಪಟ್ಟಣ, ಜ. 28: ದಿನ ನಿತ್ಯದ ನಮ್ಮ ಎಲ್ಲಾ ಚಟುವಟಿಕೆಗಳ ಏಕತಾನತೆಯಿಂದ ಬಿಡುಗಡೆ ಪಡೆದು ಒಂದು ದಿನ ನಾವು ನೀವೆಲ್ಲಾ ಒಟ್ಟಾಗಿ ಸೇರಿ ಸಂತಸದಿಂದ ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವ ಅಪೇಕ್ಷೆ ನಮ್ಮದು ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಬ್ಲ್ಯೂ ಪಿ. ಕೃಷ್ಣ ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯು ತನ್ನೆಲ್ಲ ಸಂಸ್ಥೆಗಳ ನೌಕರ ವರ್ಗದವರಿಗೆ ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಜಾನಪದ ಲೋಕದಲ್ಲಿ ಏರ್ಪಡಿಸಿದ್ದ ಸ್ನೇಹ ಮತ್ತು ಸಂತಸಮಯ ಸಂಭ್ರಮದ ದಿನವಾಗಿ ಆಚರಿಸೋಣ ಎಂದರು.

ದತ್ತಿಯ ಅಧ್ಯಕ್ಷರಾದ ಕೆ.ಎಂ. ನಂಜಪ್ಪನವರು ದತ್ತಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದವರಿಗೆ, ಶಾಲು ಹೊದಿಸಿ ಹಾರಹಾಕಿ ಚಿನ್ನದ ನಾಣ್ಯವಿತ್ತು ಸನ್ಮಾನಿಸಿ ಮಾತನಾಡಿ, ಈ ಸಂಸ್ಥೆಯ ಆಧಾರ ಸ್ತಂಭಗಳು ನೀವು. ನೀವು ಕೊಟ್ಟ ಪ್ರತಿಫಲದಿಂದಾಗಿ ಸಂಸ್ಥೆ ಮುಂದೆ ಬಂದಿದೆ. ಮುಂದೇ ಸಹಾ ಅಧಿಕ ಕ್ರಿಯಾಶೀಲ ಪಾತ್ರ ವಹಿಸಿ ಫಲದಾಯಕ ಶಿಕ್ಷಣವನ್ನು ಮಕ್ಕಳಿಗೆ ನೀಡಿ ನಮಗೆ ಗೌರವ ತನ್ನಿ ಎಂದರು.

ಜಾನಪದ ಸಂಗೀತ ರತ್ನ, ರಾಜ್ಯ ಪ್ರಶಸ್ತಿ ವಿಜೇತ ಡಾ। ಬಾನಂದೂರು ಕೆಂಪಯ್ಯನವರು ತಮ್ಮ ಕಂಠದಿಂದ ಹಾಡಿ ಬಂದಿದ್ದವರನ್ನು ಬೆರಗುಗೊಳಿಸಿದರೆ. ಕು. ಶಶೀರ್ ಮತ್ತು ಕು. ಶಿಲ್ಪ ಹೇಮ, ಮಧುಕರ್ ಅವರು ನೃತ್ಯ ಮಾಡಿ ಸಂತೋಷ ಪಡಿಸಿದರು. ಪಾಪ ಪಾಂಡು ಧಾರಾವಾಹಿ ರಚನಾ ಕರ್ತೃ ಎಂ.ಎಸ್. ನರಸಿಂಹಮೂರ್ತಿರವರು ಹಾಸ್ಯ ಕಾರ್ಯ ಕ್ರಮ ನಡೆಸಿಕೊಟ್ಟು ಎಲ್ಲರನ್ನು ನಗುವಂತೆ ಮಾಡಿದರು. ವಿವಿಧ ಜಾನಪದ ತಂಡಗಳು ಡೊಳ್ಳುಕುಣಿತ, ಪಟ್ಟದ ಕುಣಿತ ಹಾಗೂ ಸಿದ್ದಪ್ಪಾಜಿರವರ ಜಾನಪದ ಹಾಡುಗಳನ್ನು ಹಾಡಿ ಮನ ಸಂತೋಷ ಪಡಿಸಿದರು.

ದತ್ತಿಯ ಉಪಾಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಖಜಾಂಚಿ ಹೆಂಜಾರಪ್ಪ, ಜಂಟಿ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಸಹಾಯಕ ಕಾರ್ಯದರ್ಶಿ ಆರ್. ಕೃಷ್ಣ ಧರ್ಮದರ್ಶಿಗಳಾದ ಡಬ್ಲ್ಯೂ. ಜಿ. ರಾಮಕೃಷ್ಣ ಡಬ್ಲ್ಯೂ ಪಿ. ಶಿವಕುಮಾರ್, ಕೆ. ಕೃಷ್ಣಸ್ವಾಮಿ, ಸಿ.ಎಲ್. ಬಸವರಾಜಯ್ಯ, ಸರೋಜ, ನಂಜಪ್ಪ, ಟಿ.ಎನ್. ಮಂಜುಳಾದೇವಿ ಹಾಜರಿದ್ದರು. ದತ್ತಿಯ ಎಲ್ಲಾ ಪ್ರಾಂಶುಪಾಲರು, ಅಧ್ಯಾಪಕರು ಶಿಕ್ಷಕರು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಡಬ್ಲ್ಯೂ ಪಿ. ಕೃಷ್ಣರವರು ಎಲ್ಲರನ್ನು ಸ್ವಾಗತಿಸಿದರು. ವೇದಘೋಷವನ್ನು ಬಾಲಕಿಯರ ಪ್ರೌಢಶಾಲೆಯ ವಿಭಾಗದವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಜೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎನ್. ಬೈರೇಗೌಡರು ಮಾಡಿದರು.

ರೇಷ್ಮೆಸೀಮೆ ಕನ್ನಡ ದಿನ ಪತ್ರಿಕೆ

ಸಂಚಿಕೆ - ೭ ಜನವರಿ ೨೮, ಮಂಗಳವಾರ ೨೦೦೩

ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವಾಸೆ; ಕೃಷ್ಣ

ರಾಮನಗರ, ಜ.೨೭- ದಿನನಿತ್ಯದ ನಮ್ಮ ಎಲ್ಲ ಚಟುವಟಿಕೆಗಳ ಏಕತಾನತೆಯಿಂದ ಬಿಡುಗಡೆ ಪಡೆದು ಒಂದು ದಿನ ನಾವು-ನೀವೆಲ್ಲಾ ಒಟ್ಟಾಗಿ ಸೇರಿ ಸಂತಸದಿಂದ ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವ ಅಪೇಕ್ಷೆ ನಮ್ಮದು ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ ರವರು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯು ತನ್ನೆಲ್ಲಾ ಸಂಸ್ಥೆಗಳ ನೌಕರ ವರ್ಗದವರಿಗೆ ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಜಾನಪದ ಲೋಕದಲ್ಲಿ ಸ್ನೇಹ ಸಮ್ಮಿಲನ ಎಂಬ ಕಾರ್ಯಕ್ರಮದಲ್ಲಿ ಮಾತನಾಡಿದರು. ಅವರು ಶೇಷಾದ್ರಿಪುರಂ ಶಿಕ್ಷಣದತ್ತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿಕೊಂಡು ಅವರೀವರೆನ್ನದ ಭೇದ ತೋರದೆ, ನಾವೆಲ್ಲಾ ಒಂದಾಗಿ ಸೇರಿ ಈ ದಿನವನ್ನು ಸ್ನೇಹ ಮತ್ತು ಸಂತಸಮಯ ಸಂಭ್ರಮದ ದಿನವಾಗಿ

೨ ನೇ ಪುಟಕ್ಕೆ

ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವಾಸೆ; ಕೃಷ್ಣ

೧ ನೇ ಪುಟದಿಂದ

ಆಚರಿಸೋಣವೆಂದರು.

ಇನ್ನು ಮುಂದೆ ಸಹ ಇಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತೇವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಅಧ್ಯಕ್ಷರು ಕಾರ್ಯದರ್ಶಿಗಳು ಸಂತೋಷದಿಂದ ಪಾಲ್ಗೊಂಡು ಒಂದು ದಿನದ ಮಟ್ಟಿಗೆ ಆಡಳಿತ ಮಂಡಳಿ ಸದಸ್ಯರು ಪದಾಧಿಕಾರಿಗಳು, ಪ್ರಾಚಾರ್ಯರು, ಅಧ್ಯಾಪಕರು, ಕಛೇರಿ ಸಹಾಯಕರು, ಎಂಬ ವೃತ್ತಿ ತಾರತಮ್ಯ ಮರೆತು ಎಲ್ಲರು ಒಂದಾಗಿ ಸೇರಿ ಮನೆಯವರಂತೆ ಕಲೆತು-ಬೆರೆತು ಒಂದಾಗಿರುತ್ತೇವೆ. ಇಂತಹ ಸಂತೋಷ ಕೂಟದಲ್ಲಿ ವೃತ್ತಿಯಲ್ಲಿ ಆಸಕ್ತಿಯನ್ನು ಬದುಕಿನಲ್ಲಿ ಉತ್ಸಾಹ ತುಂಬುವುದರ ಜೊತೆಗೆ ಪರಸ್ಪರ ಬೆರೆಯಲು ಒಂದೆಡೆ ಸೇರಲು ಅವಕಾಶ ಮಾಡಿಕೊಡುತ್ತದೆ. ಇದರ ಯಶಸ್ಸಿನ ಹಿಂದೆ ದತ್ತಿಯ ಅಧ್ಯಕ್ಷರು, ಕಾರ್ಯದರ್ಶಿಯಾದಿಯಾಗಿ ಎಲ್ಲಾ ಪದಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಶ್ರದ್ಧೆ ಮತ್ತು ಶ್ರಮ ಕೆಲಸ ಮಾಡಿದೆ. ತನ್ನ ನೌಕರ ವರ್ಗದವರ ಮೇಲೆ ದತ್ತಿ ಇಟ್ಟಿರುವ ರೀತಿ ಉತ್ಸಾಹ ಅಭಿನಂದನೀಯವಾಗಿದೆ ಎಂದರು.

ದತ್ತಿಯ ಅಧ್ಯಕ್ಷರಾದ ಕೆ. ಎಂ. ನಂಜಪ್ಪನವರು ದತ್ತಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದವರಿಗೆ ಶಾಲು ಹೊದಿಸಿ ಹಾರ ಹಾಕಿ ಚಿನ್ನದ ನಾಣ್ಯವಿತ್ತು ಸನ್ಮಾನಿಸಿದರು. ಮಾತನಾಡಿ ಈ ಸಂಸ್ಥೆಯ ಆಧಾರ ಸ್ತಂಭಗಳು ನೀವು, ನೀವು ಕೊಟ್ಟ ಪ್ರತಿಫಲದಿಂದಾಗಿ ಸಂಸ್ಥೆ ಮುಂದೆ ಬಂದಿದೆ. ನಾನು ನಿಮಗೆ ಪ್ರಶಂಸೆಗಳನ್ನು ಸಲ್ಲಿಸಬಯಸುತ್ತೇನೆ. ಮುಂದೆ ಸಹ ಅಧಿಕ ಕ್ರಿಯಾಶೀಲ ಪಾತ್ರವಹಿಸಿ ಫಲದಾಯಕ ಶಿಕ್ಷಣವನ್ನು ಮಕ್ಕಳಿಗೆ ನೀಡಿ ನಮಗೆ ಗೌರವ ತನ್ನಿ ಎಂದರು.

ಜನಪದ ಸಂಗೀತ ರತ್ನ ರಾಜ್ಯಪ್ರಶಸ್ತಿ ವಿಜೇತ ಡಾ|| ಬಾನಂದೂರು ಕೆಂಪಯ್ಯನವರು ತಮ್ಮ ಕಂಠದಿಂದ ಹಾಡಿ ಬಂದಿದ್ದವರನ್ನು ಬೆರಗುಗೊಳಿಸಿದರೆ, ಕು|| ಶಶೀರ, ಕು||ಶಿಲ್ಪ, ಹೇಮಾ ಮಧುಕರ್ ಅವರು ನೃತ್ಯ ಮಾಡಿ ಸಂತೋಷಗೊಳಿಸಿದರು, ಪಾ.ಪ. ಪಾಂಡು ಧಾರಾವಾಹಿ ರಚನಾಕರ್ತೃ ಎಂ. ಎನ್. ನರಸಿಂಹಮೂರ್ತಿ ರವರು ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟು ಎಲ್ಲರನ್ನು ನಗುವಂತೆ ಮಾಡಿದರು. ವಿವಿಧ ಜನಪದ ಪದಗಳು, ಡೊಳ್ಳುಕುಣಿತ, ಪಟ್ಟದ ಕುಣಿತ, ಹಾಗೂ ಸಿದ್ದಪ್ಪಾಜಿರವರ ಜಾನಪದ ಹಾಡುಗಳನ್ನು ಹಾಡಿ ಮನಸಂತೋಷ ಪಡಿಸಿದರು.

ವೇದಿಕೆಯಲ್ಲಿ ದತ್ತಿಯ ಉಪಾಧ್ಯಕ್ಷರಾದ ಎಂ. ಆರ್ ಪಂಡಿತಾರಾಧ್ಯ ಖಜಾಂಚಿ ಹೆಂಜಾರಪ್ಪ, ಜಂಟಿ ಕಾರ್ಯದರ್ಶಿ ಎ. ಆರ್ ಶ್ರೀನಿವಾಸಯ್ಯ, ಸಹಾಯಕ ಕಾರ್ಯದರ್ಶಿ ಆರ್. ಕೃಷ್ಣ, ಧರ್ಮದರ್ಶಿಗಳಾದ ಡಬ್ಲ್ಯೂ.ಪಿ. ರಾಮಕೃಷ್ಣ, ಡಬ್ಲ್ಯೂ.ಪಿ. ಶಿವಕುಮಾರ್, ಕೆ.ಕೃಷ್ಣಸ್ವಾಮಿ, ಸಿ. ಎಲ್. ಬಸವರಾಜಯ್ಯ, ಶ್ರೀಮತಿ ಸರೋಜ ನಂಜಪ್ಪ, ಟಿ. ಎನ್. ಮಂಜುಳಾದೇವಿ ಹಾಜರಿದ್ದರು. ಕಾರ್ಯಕ್ರಮದಲ್ಲಿ ದತ್ತಿಯ ಎಲ್ಲ ಪ್ರಾಂಶುಪಾಲರು, ಅಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣರವರು ಎಲ್ಲರನ್ನು ಸ್ವಾಗತಿಸಿದರು. ವೇದಘೋಷವನ್ನು ಬಾಲಕಿಯರ ಪ್ರೌಢಶಾಲೆಯ ವಿಭಾಗದವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಜೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ|| ಎನ್. ಭೈರೇಗೌಡರು ಮಾಡಿದರು.

ರೇಷ್ಮೆಸೀಮೆ ಕನ್ನಡ ದಿನ ಪತ್ರಿಕೆ

ಸಂಚಿಕೆ - ೬ ಜನವರಿ ೨೮, ಮಂಗಳವಾರ ೨೦೦೩

ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವಾಸೆ; ಕೃಷ್ಣ

ರಾಮನಗರ, ಜ.೨೭-ದಿನನಿತ್ಯದ ನಮ್ಮ ಎಲ್ಲ ಚಟುವಟಿಕೆಗಳ ಏಕತಾನತೆಯಿಂದ ಬಿಡುಗಡೆ ಪಡೆದು ಒಂದು ದಿನ ನಾವು-ನೀವೆಲ್ಲಾ ಒಟ್ಟಾಗಿ ಸೇರಿ ಸಂತಸದಿಂದ ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವ ಅಪೇಕ್ಷೆ ನಮ್ಮದು ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಕಾರ್ಯದರ್ಶಿ ಡಬ್ಲ್ಯೂ.ಪಿ.ಕೃಷ್ಣ ರವರು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯು ತನ್ನೆಲ್ಲಾ ಸಂಸ್ಥೆಗಳ ನೌಕರ ವರ್ಗದವರಿಗೆ ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಜಾನಪದ ಲೋಕದಲ್ಲಿ ಸ್ನೇಹ ಸಮ್ಮಿಲನ ಎಂಬ ಕಾರ್ಯಕ್ರಮದಲ್ಲಿ ಮಾತನಾಡಿದರು. ಅವರು ಶೇಷಾದ್ರಿಪುರಂ ಶಿಕ್ಷಣದತ್ತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿಕೊಂಡು ಅವರೀರ್ವರೆನ್ನದೆ ಭೇದ ತೋರದೆ, ನಾವೆಲ್ಲಾ ಒಂದಾಗಿ ಸೇರಿ ಈ ದಿನವನ್ನು ಸ್ನೇಹ ಮತ್ತು ಸಂತಸಮಯ ಸಂಭ್ರಮದ ದಿನವಾಗಿ

☞ ೨ ನೇ ಪುಟಕ್ಕೆ

ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವಾಸೆ; ಕೃಷ್ಣ

೧ ನೇ ಪುಟದಿಂದ

ಆಚರಿಸೋಣ ವೆಂದರು.

ಇನ್ನು ಮುಂದೆ ಸಹ ಇಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತೇವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಅಧ್ಯಕ್ಷರು ಕಾರ್ಯದರ್ಶಿಗಳು ಸಂತೋಷದಿಂದ ಪಾಲ್ಗೊಂಡು ಒಂದು ದಿನದ ಮಟ್ಟಿಗೆ ಆಡಳಿತ ಮಂಡಳಿ ಸದಸ್ಯರು ಪದಾಧಿಕಾರಿಗಳು, ಪ್ರಾಚಾರ್ಯರು, ಅಧ್ಯಾಪಕರು, ಕಛೇರಿ ಸಹಾಯಕರು, ಎಂಬ ವೃತ್ತಿ ತಾರತಮ್ಯ ಮರೆತು ಎಲ್ಲರು ಒಂದಾಗಿ ಸೇರಿ ಮನೆಯವರಂತೆ ಕಲೆತು-ಬೆರೆತು ಒಂದಾಗಿರುತ್ತೇವೆ. ಇಂತಹ ಸಂತೋಷ ಕೂಟದಲ್ಲಿ ವೃತ್ತಿಯಲ್ಲಿ ಆಸಕ್ತಿಯನ್ನು ಬದುಕಿನಲ್ಲಿ ಉತ್ಸಾಹ ತುಂಬುವುದರ ಜೊತೆಗೆ ಪರಸ್ಪರ ಬೆರೆಯಲು ಒಂದೆಡೆ ಸೇರಲು ಅವಕಾಶ ಮಾಡಿಕೊಡುತ್ತದೆ. ಇದರ ಯಶಸ್ಸಿನ ಹಿಂದೆ ದತ್ತಿಯ ಅಧ್ಯಕ್ಷರು, ಕಾರ್ಯದರ್ಶಿಯಾದಿಯಾಗಿ ಎಲ್ಲಾ ಪದಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಶ್ರದ್ಧೆ ಮತ್ತು ಶ್ರಮ ಕೆಲಸ ಮಾಡಿದೆ. ತನ್ನ ನೌಕರ ವರ್ಗದವರ ಮೇಲೆ ದತ್ತಿ ಇಟ್ಟಿರುವ ರೀತಿ ಉತ್ಸಾಹ ಅಭಿನಂದನೀಯವಾಗಿದೆ ಎಂದರು.

ದತ್ತಿಯ ಅಧ್ಯಕ್ಷರಾದ ಕೆ. ಎಂ.ನಂಜಪ್ಪನವರು ದತ್ತಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದವರಿಗೆ ಶಾಲು ಹೊದಿಸಿ ಹಾರ ಹಾಕಿ ಚಿನ್ನದ ನಾಣ್ಯವಿತ್ತು ಸನ್ಮಾನಿಸಿದರು. ಮಾತನಾಡಿ ಈ ಸಂಸ್ಥೆಯ ಆಧಾರ ಸ್ತಂಭಗಳು ನೀವು, ನೀವು ಕೊಟ್ಟ ಪ್ರತಿಫಲದಿಂದಾಗಿ ಸಂಸ್ಥೆ ಮುಂದೆ ಬಂದಿದೆ. ನಾನು ನಿಮಗೆ ಪ್ರಶಂಸೆಗಳನ್ನು ಸಲ್ಲಿಸಬಯಸುತ್ತೇನೆ. ಮುಂದೆ ಸಹ ಅಧಿಕ ಕ್ರಿಯಾಶೀಲ ಪಾತ್ರವಹಿಸಿ ಫಲದಾಯಕ ಶಿಕ್ಷಣವನ್ನು ಮಕ್ಕಳಿಗೆ ನೀಡಿ ನಮಗೆ ಗೌರವ ತನ್ನಿ ಎಂದರು.

ಜನಪದ ಸಂಗೀತ ರತ್ನ ರಾಜ್ಯಪ್ರಶಸ್ತಿ ವಿಜೇತ ಡಾ|| ಬಾನಂದೂರು ಕೆಂಪಯ್ಯನವರು ತಮ್ಮ ಕಂಠದಿಂದ ಹಾಡಿ ಬಂದಿದ್ದವರನ್ನು ಬೆರಗುಗೊಳಿಸಿದರೆ, ಕು|| ಶಶಿರ, ಕು||ಶಿಲ್ಪ, ಹೇಮಾ ಮಧುಕರ್ ಅವರು ನೃತ್ಯ ಮಾಡಿ ಸಂತೋಷಗೊಳಿಸಿದರು, ಪಾ.ಪ. ಪಾಂಡು ಧಾರಾವಾಹಿ ರಚನಾ ಕರ್ತೃ ಎಂ. ಎಸ್. ನರಸಿಂಹಮೂರ್ತಿ ರವರು ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟು ಎಲ್ಲರನ್ನು ನಗುವಂತೆ ಮಾಡಿದರು. ವಿವಿಧ ಜನಪದ ಪದಗಳು, ಡೊಳ್ಳುಕುಣಿತ, ಪಟ್ಟದ ಕುಣಿತ, ಹಾಗೂ ಸಿದ್ದಪ್ಪಾಜಿರವರ ಜಾನಪದ ಹಾಡುಗಳನ್ನು ಹಾಡಿ ಮನಸಂತೋಷ ಪಡಿಸಿದರು.

ವೇದಿಕೆಯಲ್ಲಿ ದತ್ತಿಯ ಉಪಾಧ್ಯಕ್ಷರಾದ ಎಂ. ಆರ್ ಪಂಡಿತಾರಾಧ್ಯ ಖಜಾಂಚಿ ಹೆಂಜಾರಪ್ಪ, ಜಂಟಿ ಕಾರ್ಯದರ್ಶಿ ಎ. ಆರ್ ಶ್ರೀನಿವಾಸಯ್ಯ, ಸಹಾಯಕ ಕಾರ್ಯದರ್ಶಿ ಆರ್. ಕೃಷ್ಣ, ಧರ್ಮದರ್ಶಿಗಳಾದ ಡಬ್ಲ್ಯೂ.ಪಿ. ರಾಮಕೃಷ್ಣ, ಡಬ್ಲ್ಯೂ.ಪಿ. ಶಿವಕುಮಾರ್, ಕೆ.ಕೃಷ್ಣಸ್ವಾಮಿ, ಸಿ. ಎಲ್. ಬಸವರಾಜಯ್ಯ, ಶ್ರೀಮತಿ ಸರೋಜ ನಂಜಪ್ಪ, ಟಿ. ಎನ್.ಮಂಜುಳಾದೇವಿ ಹಾಜರಿದ್ದರು. ಕಾರ್ಯಕ್ರಮದಲ್ಲಿ ದತ್ತಿಯ ಎಲ್ಲ ಪ್ರಾಂಶುಪಾಲರು, ಅಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ದತ್ತಿಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಪಿ. ಕೃಷ್ಣರವರು ಎಲ್ಲರನ್ನು ಸ್ವಾಗತಿಸಿದರು. ವೇದಘೋಷವನ್ನು ಬಾಲಕಿಯರ ಪ್ರೌಢಶಾಲೆಯ ವಿಭಾಗದವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಜೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ|| ಎನ್. ಬೈರೇಗೌಡರು ಮಾಡಿದರು.

ಬಯಲು ಸೀಮೆ ಕನ್ನಡ ದಿನಪತ್ರಿಕೆ 29ನೇ ಜನವರಿ 2003 ಪುಟ 4

ಶೇಷಾದ್ರಿಪುರಂ ಶಿಕ್ಷಣ ದತ್ತಿಯಿಂದ; ಜಾನಪದ ಲೋಕದಲ್ಲಿ ಸ್ನೇಹ ಸಮ್ಮೇಲನ


ಚನ್ನಪಟ್ಟಣ, ಜ, 29- ಬೆಂಗಳೂರು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪತಿಯಿಂದ, ತನ್ನೆಲ್ಲ ಸಂಸ್ಥೆಗಳ ನೌಕರ ವರ್ಗದವರಿಗೆ ಬೆಂಗಳೂರು, ಮೈಸೂರು ರಸ್ತೆಯಲ್ಲಿರುವ ಜಾನಪದ ಲೋಕದಲ್ಲಿ ಸ್ನೇಹ ಸಮ್ಮೇಲನ ಎಂಬ ಕಾರ್ಯಕ್ರಮವನ್ನು ಏರ್ಪಡಿಸಿ,. ನೌಕರವರ್ಗ ಇಡೀ ದಿನ ಸಂತಸ ಸಡಗರದಿಂದ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಆನಂದ ಪಡುವಂತಹ ವಾತಾವರಣ ನಿರ್ಮಿಸಲಾಗಿತ್ತು.

ಶೇಷಾದ್ರಿಪುರಂ ದತ್ತಿಯ ಕಾರ್ಯದರ್ಶಿಯಾದ ಡಬ್ಲ್ಯೂ. ಪಿ.ಕೃಷ್ಣ ಅವರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ...ವುದನ್ನು ... ಮುಕ್ತ ವಾತಾವರಣದಲ್ಲಿ ಕಾಲ ಕಳೆಯುವ ಹಿನ್ನೆಲೆಯಲ್ಲಿ ಪ್ರತಿವರ್ಷ ಇಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು, ಪ್ರಾಂಶುಪಾಲರು, ಅಧ್ಯಾಪಕರು, ಸಿಬ್ಬಂದಿ ವರ್ಗದವರು ವೃತ್ತಿ ತಾರತಮ್ಯ ಮರೆತು, ಎಲ್ಲರೂ ಒಂದಾಗಿ ಸೇರಿ, ಒಂದೇ ಮನೆಯವರಂತೆ ಕಲೆತು, ಬೆರೆತು ಒಂದಾಗಬೇಕು. ಈ ದಿನವನ್ನು ಸ್ನೇಹಮಯ ಸಂತಸಮಯ ಸಂಭ್ರಮದ ದಿನವಾಗಿ ಆಚರಿಸೋಣ ಎಂದು ಹೇಳಿ, ವೃತ್ತಿಯಲ್ಲಿ ಆಸಕ್ತಿಯನ್ನು ಬದುಕಿನಲ್ಲಿ ಉತ್ಸಾಹ ತುಂಬುವುದರ ಜೊತೆಗೆ ಪರಸ್ಪರ ಬೆರೆತು, ಮಕ್ಕಳ ಶಿಕ್ಷಣದ ಪ್ರಗತಿಗೆ ಸಹಕಾರಿಯಾಗಲಿ. ಈ ಕಾರ್ಯಕ್ರಮ ಎಂದರು.

ದತ್ತಿಯ ಅಧ್ಯಕ್ಷರಾದ ಕೆ.ಎಂ. ನಂಜಪ್ಪ ಅವರು, ದತ್ತಿಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿಯಾದವರಿಗೆ ಶಾಲು ಹೊದಿಸಿ, ಚಿನ್ನದ ನಾಣ್ಯವಿತ್ತು ಸನ್ಮಾನಿಸಿ ಮಾತನಾಡಿ, ತಾವುಗಳೆಲ್ಲರೂ ಮಕ್ಕಳಿಗೆ ಫಲದಾಯಕ ಶಿಕ್ಷಣ ನೀಡಿ ಸಂಸ್ಥೆಗೆ ಗೌರವ ತನ್ನಿ ಎಂದರು.

ವೇದಿಕೆಯಲ್ಲಿ ದತ್ತಿಯ ಉಪಾಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಖಜಾಂಚಿ ಹೆಂಚಾರಪ್ಪ, ಜಂಟಿ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಆರ್.ಕೃಷ್ಣ, ಧರ್ಮದರ್ಶಿಗಳು ಮುಂತಾದವರು ಉಪಸ್ಥಿತರಿದ್ದರು.

ಪ್ರೊ. ಎನ್. ಬೈರೇಗೌಡ ಅವರು ಮಾತನಾಡಿ, ಕಾರ್ಯಕ್ರಮ ನಿರೂಪಿಸಿದರು.



ಟ್ರಸ್ಟಿನ ಅಧ್ಯಕ್ಷ ನಂಜಪ್ಪ ಮಾತನಾಡುತ್ತಿರುವುದು.